ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೭೩
ವಿಚಾರ ಸಾಹಿತ್ಯಮಾಲೆ – ೮೬
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ನಮ್ಮ ಧರ್ಮದ ಕೆಲವು ಅಂಶಗಳು

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ

ಮೂಲ ಸಂಪಾದಕರು

**ಆರ್. ಆರ್. ದಿವಾಕರ್**

**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ

**ಲೀಲಾವತಿ ಮುನ್ಷಿ** – ಅಧ್ಯಕ್ಷೆ

**ಕೆ. ಕೆ. ಬಿರ್ಲಾ** – ಸದಸ್ಯರು

**ಎಸ್. ಜಿ. ನೇವಾತಿಯ** – ಸದಸ್ಯರು

**ಜಿ. ಎಚ್. ದವೆ** – ಸದಸ್ಯರು

**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**

(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ನಮ್ಮ ಧರ್ಮದ ಕೆಲವು ಅಂಶಗಳು

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**

**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**

**–ಋಗ್ವೇದ, I ೮೯–೧**


ಮೂಲ

**ಪೂಜ್ಯ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳು**

ಅನುವಾದ

**ಬಿ. ಎಸ್. ರುಕ್ಕಮ್ಮ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು

ಮತ್ತು

**ಭಾರತೀಯ ವಿದ್ಯಾ ಭವನ,** ಮೈಸೂರು

**Namma Dharmada Kelavu Amshagalu:** Kannada translation of *Aspects of Our Religion* : **Sri Chandrashekarendra Saraswati Swamiji;** Kannada translation by **B. S. Rukkamma;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 62. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxii + ೬೨
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೬೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**‘ಕನಕದಾಸರ ಕೃತಿ’**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.



(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ<br>ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**<br>ಅಧ್ಯಕ್ಷ

# ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

'ನಮ್ಮ ಧರ್ಮದ ಕೆಲವು ಅಂಶಗಳು' ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳ ಪ್ರವಚನಗಳಿಂದ ಆಯ್ದ ಭಾಗಗಳ ಸಂಕಲನದ ಅನುವಾದ. ಇದನ್ನು ಬಿ. ಎಸ್. ರುಕ್ಕಮ್ಮ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



# ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ಯಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಪ್ರಕಾಶಕರ ನುಡಿ

ಪರಮಪೂಜ್ಯ ಶಂಕರಾಚಾರ್ಯ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತಿಯವರು ತಮಿಳಿನಲ್ಲಿ ನೀಡಿದ ಪ್ರವಚನಗಳ ಇಂಗ್ಲಿಷ್ ಭಾಷಾಂತರದ ಮೇಲೆ ಆಧಾರಿತವಾಗಿದೆ. ಕಾಂಚಿ ಕಾಮಕೋಟಿ ಪೀಠದ ಪೀಠಾಧಿಪತಿಗಳು ಮದ್ರಾಸಿನಲ್ಲಿ ೧೯೩೨ರಿಂದ ೧೯೫೨ ಮತ್ತು ೧೯೬೮ರಲ್ಲಿ ಪ್ರವಚನಗಳನ್ನು ನೀಡಿದ್ದರು. ಇದರ ಜೊತೆಗೆ ಪೂಜ್ಯರನ್ನು ಸಂದರ್ಶಿಸಿದಾಗ ದೊರಕಿದ ಮಾಹಿತಿಗಳನ್ನು ಇಲ್ಲಿ ಬಳಸಿಕೊಂಡು ಈ ಪುಸ್ತಕವನ್ನು ರಚಿಸಲಾಗಿದೆ.

Blank



## ಪರಿವಿಡಿ


| | |
|---|---|
| ಮುನ್ನುಡಿ | v |
| ಸಂದೇಶ | vii |
| ಹಾರೈಕೆ | viii |
| ಪ್ರಾಸ್ತಾವಿಕ ನುಡಿ | ix |
| ಪೀಠಿಕೆ | xi |
| ಅರಿಕೆ | xiv |
| ಕುಲಪತಿಗಳ ಪ್ರಸ್ತಾವನೆ | xv |
| ಪ್ರಕಾಶಕರ ನುಡಿ | xvii |
| ೧. ನಮ್ಮ ಧರ್ಮ | ೧ |
| ೨. ನಮ್ಮದು ವಿಶ್ವ ಧರ್ಮ | ೬ |
| ೩. ವೇದಗಳ ಕಾಲ | ೯ |
| ೪. ವೇದಗಳ ಸಾರ | ೧೩ |
| ೫. ಅಧ್ಯಾತ್ಮದ ಹಾದಿ | ೧೬ |
| ೬. ಗೀತೆಯು ತೋರುವ ದಾರಿ | ೨೮ |
| ೭. ನಮ್ಮ ಧರ್ಮದ ಶಕ್ತಿ | ೩೫ |
| ೮. ನಮ್ಮ ಧರ್ಮವು ಅನುಸರಿಸುತ್ತಿರುವ ಕೆಲವು ಪದ್ಧತಿಗಳು | ೪೨ |
| ೯. ಮೂರ್ತಿಪೂಜೆ (ವಿಗ್ರಹಾರಾಧನೆ) | ೪೯ |
| ೧೦. ಆಚರಣೆಯಲ್ಲಿ ಧರ್ಮ | ೫೭ |
| ೧೧. ಆನಂದದ ನೆಲೆ | ೫೯ |

Blank



# ನಮ್ಮ ಧರ್ಮದ ಕೆಲವು ಅಂಶಗಳು

# ೧. ನಮ್ಮ ಧರ್ಮ

ಪ್ರಪಂಚದಲ್ಲಿ ಇಂದು ಹಲವಾರು ಧರ್ಮಗಳಿವೆ. ಪ್ರತಿಯೊಂದಕ್ಕೂ ಅದರದ್ದೇ ಒಂದು ಹೆಸರಿದೆ. ಈ ಹೆಸರುಗಳು ಧರ್ಮವನ್ನು ಸ್ಥಾಪನೆ ಮಾಡಿದವರನ್ನು ಸೂಚಿಸುತ್ತವೆ. ಉದಾಹರಣೆಗೆ ಬೌದ್ಧಧರ್ಮ, ಜೈನಧರ್ಮ, ಮಹಮ್ಮದೀಯ ಧರ್ಮ, ಕ್ರಿಸ್ತಧರ್ಮ ಮತ್ತು ಜರತುಷ್ಟ್ರನ ಧರ್ಮ. ಇವೆಲ್ಲವೂ ಸಂಸ್ಥಾಪಿತವಾದ ಧರ್ಮಗಳು. ಇತಿಹಾಸದ ಕಾಲಘಟ್ಟಗಳಲ್ಲಿ ಇವು ಸ್ಥಾಪನೆಯಾದವು. ಸ್ಥಾಪಿಸಿದವರೂ ಸಹ ಪವಿತ್ರ ಚೇತನರಾದ ಮಹಾಪುರುಷರು. ತಮ್ಮ ಆಲೋಚನಾಶೀಲತೆಯಿಂದ ಜನರನ್ನು ಆಕರ್ಷಿಸಬಲ್ಲವರು. ಅಸಂಖ್ಯಾತ ಅನುಯಾಯಿಗಳನ್ನವರು ಹೊಂದಿದ್ದರು.

ಆಂಗ್ಲ ಭಾಷೆಯಲ್ಲಿ ಕಲಿತ ನಮ್ಮ ವಿದ್ಯಾವಂತ ಯುವಕರನ್ನು ನಿಮ್ಮ ಧರ್ಮ ಯಾವುದೆಂದು ಕೇಳಿದರೆ, ಅವರು ನಾವು ಹಿಂದೂ ಧರ್ಮವನ್ನು ಅನುಸರಿಸುತ್ತೇವೆ ಎನ್ನಬಹುದು. ಯಾವುದಾದರೂ ಹಳ್ಳಿಗೆ ಹೋಗಿ ಅಲ್ಲಿ ಬೇಸಾಯಮಾಡುತ್ತಿರುವ ರೈತನನ್ನು ಕೇಳಿನೋಡಿ. ಆತನಿಗೆ ತನು ಅನುಸರಿಸುತ್ತಿರುವ ಧರ್ಮದ ಹೆಸರು ತಿಳಿಯದು. ನಾವೀಗ ಬಳಸುತ್ತಿರುವ 'ಹಿಂದೂ ಧರ್ಮ'ವೆಂಬ ಹೆಸರು ನಮ್ಮ ಪೂರ್ವಿಕರ ಬಳಕೆಯಲ್ಲಿರಲಿಲ್ಲ. ಹಾಗೆಯೇ ನಮ್ಮ ಸಾಮಾನ್ಯ ಜನತೆಗೂ ಆ ಹೆಸರಿನ ಅರಿವು ಇರಲಿಲ್ಲ.

ನಮ್ಮ ಧರ್ಮದ ವಿಚಾರದಲ್ಲಿಯೂ ಹಾಗೇನೇ. ಇತರ ಧರ್ಮಗಳು ಆಯಾ ಧರ್ಮಗಳ ಸಂಸ್ಥಾಪಕರಿಗೆ ಮೊದಲು ಇರಲೇ ಇಲ್ಲ. ಆ ಎಲ್ಲಾ ಧರ್ಮಗಳ ಸ್ಥಾಪನೆಯಾಗುವುದಕ್ಕೆ ಎಷ್ಟೋ ಮೊದಲೇ ನಮ್ಮ ಧರ್ಮ ಅಸ್ತಿತ್ವದಲ್ಲಿದ್ದಿತು.

ಹಾಗಾಗಿ ಒಂದೊಂದೇ ಧರ್ಮ ಮಾನವಕುಲದ ಆತ್ಮದ ಹಸಿವನ್ನು ಉಪಶಮನ ಮಾಡುತ್ತ ಚೇತೋಹಾರಿಯಾಗಿ ವ್ಯಾಪಿಸಿಕೊಂಡಿದ್ದಿತು. ಇನ್ನೊಂದು ಧರ್ಮವಿದ್ದರೆ ತಾನೆ ಅದರಿಂದ ಇದನ್ನು ಪ್ರತ್ಯೇಕಿಸಿ ಸೂಚಿಸುವುದು. ಹಾಗಾಗಿ ನಮ್ಮ ಧರ್ಮಕ್ಕೆ ಹೆಸರಿನ ಆವಶ್ಯಕತೆಯೇ ಬರಲಿಲ್ಲ. ಈಗಲೂ ಅದಕ್ಕೆ ಹೆಸರಿನ ಆವಶ್ಯಕತೆ ಇಲ್ಲ.

ನಮ್ಮ ಧರ್ಮ ಯಾವಾಗ ಹುಟ್ಟಿತು ಎಂಬುದಕ್ಕೆ ನಮ್ಮಲ್ಲಿ ಏನೇನೂ ಸಾಕ್ಷಿ, ದಾಖಲೆಗಳು ಇಲ್ಲ. ಅದರಿಂದ ಯಾವುದೋ ಒಂದು ಕಾಲದಲ್ಲಿ ನಮ್ಮ ಧರ್ಮ ಹುಟ್ಟಿಲ್ಲ ಎಂಬುದಾಗಿ ನಾವು ನಿಸ್ಸಂಶಯವಾಗಿ ಹೇಳಬಹುದು. ಆದ್ದರಿಂದ ಅದು

ಅನಾದಿ. ಎಂದಿನಿಂದಲೂ ಇದೆ. ಅದು ಸನಾತನವಾದದ್ದು. ನಿಮ್ಮ 'ರಿಲಿಜನ್' ಎಂಬ ಪದಕ್ಕೆ ಸಂವಾದಿಯಾಗಿ ಸಂಸ್ಕೃತದ ಧರ್ಮ ಎಂಬ ಪದವನ್ನು ನಾವು ಬಳಸುತ್ತೇವಾದರೂ ಅದರಲ್ಲಿ 'ರಿಲಿಜನ್' ಎಂಬ ಪದಕ್ಕೆ ಇರುವ ಅರ್ಥಕ್ಕಿಂತಲೂ ಮಿಗಿಲಾದ ಅರ್ಥವಿದೆ. ನಮ್ಮ ಧರ್ಮವನ್ನು ಯಾರಾದರೊಬ್ಬ ಸ್ಥಾಪಕನ ಹೆಸರಿನಿಂದ ಸೂಚಿಸುವುದಿಲ್ಲ. ಏಕೆಂದರೆ ಅದಕ್ಕೊಬ್ಬ ಸ್ಥಾಪಕನಿಲ್ಲ. ಆದ್ದರಿಂದ ನಮ್ಮ ಧರ್ಮಕ್ಕೊಂದು ಹೆಸರು ಕೊಡಬೇಕು ಎಂದಾದರೆ ಅದನ್ನು 'ಸನಾತನ ಧರ್ಮ' ಎನ್ನಬಹುದು. ಅಂದರೆ ಅನಾದಿಯೂ, ಅನಂತವೂ ಆದ ಧರ್ಮವೆಂದು ಹೇಳಬಹುದು.

ಸ್ಥಾಪನೆಯಾದ ಧರ್ಮಗಳು ಸ್ಥಾಪಕರ ಅಧಿಕಾರವಾಣಿಯಲ್ಲಿರುತ್ತದೆ. ಇವರ ಮಾತುಗಳನ್ನು ಸಮಗ್ರಹಿಸಿ ಕ್ರೋಡೀಕರಿಸಿ ಒಂದು ದಿವ್ಯಗ್ರಂಥವಾಗಿ ರೂಪ ತಾಳುವಂತೆ ಆಗಿರುತ್ತದೆ. ಪವಿತ್ರ ಖುರಾನ್ ಆಗಬಹುದು ಅಥವಾ ಪವಿತ್ರ ಬೈಬಲ್ ಎನ್ನಬಹುದು, ಅಥವಾ ತ್ರಿಪಿಟಕವೆಂಬ ಮಹಾಗ್ರಂಥವಾಗಬಹುದು. ಇವು ಒಂದೊಂದು ಪವಿತ್ರ ಗ್ರಂಥವೂ ಸಹ ಆಯಾ ಧರ್ಮದ ಮೂಲಗ್ರಂಥಗಳಾಗಿವೆ.

ನಮ್ಮ ಗ್ರಂಥದ ಮೂಲ ಆಕರವಾದ ಪವಿತ್ರ ಗ್ರಂಥವು ಯಾವುದು? ವೇದಗಳೇ ನಮ್ಮ ಧರ್ಮದ ಮೂಲಗ್ರಂಥಗಳು. ಅವು ವಿಶ್ವವನ್ನು ನಿಯಂತ್ರಿಸುವ ನಿತ್ಯ ಸಸ್ಯಗಳನ್ನು ಕುರಿತು ಹೇಳುತ್ತವೆ; ಮಾನವರ ಸ್ವಭಾವವನ್ನು ತಿಳಿಸುತ್ತವೆ. ಅವು ನಿಸ್ಸಂದೇಹವಾಗಿ ಪ್ರಮಾಣಗ್ರಂಥಗಳೇ. ನಾವು ಯಾರ ಮಾತನ್ನಾದರೂ ವಿಮರ್ಶೆ ಮಾಡುವಾಗ, ವಿರೋಧಿಸುವಾಗ ಆಗಾಗ್ಗೆ ನಿಸೂರಾಗಿ ಹೇಳಿಬಿಡುತ್ತೇನೆ. "ಏನಯ್ಯ ಅವನ ಮಾತೇನು ವೇದವಾಕ್ಯವೆ?" ಎನ್ನುತ್ತೇವೆ. ಕಾರಣವೇನೆಂದರೆ ನಮ್ಮ ಅಭಿಪ್ರಾಯದಲ್ಲಿ ವೇದಗಳು ಎಂದರೆ ಸತ್ಯವೇ ಸರಿ.

ಕ್ರೈಸ್ತರಲ್ಲಿ ಮುಖ್ಯವಾಗಿ ಕ್ಯಾಥೊಲಿಕ್ಕರು ಮತ್ತು ಪ್ರಾಟೆಸ್ಟೆಂಟರು ಎಂಬ ಎರಡು ಶಾಖೆಗಳಿವೆ. ಆದರೆ ಇಬ್ಬರ ಮೂಲದೇವರು ಒಬ್ಬನೇ. ಅವೆರಡೂ ಶಾಖಗಳ ಜನ ದೇವನನ್ನು ಏಸುಕ್ರಿಸ್ತನೆಂಬ ಒಂದೇ ಹೆಸರಿನಿಂದ ಕರೆಯುತ್ತಾರೆ; ಆರಾಧಿಸುತ್ತಾರೆ, ಅವರಿಬ್ಬರೂ ಬೈಬಲ್ಲನ್ನು ಏಕೈಕ ಪವಿತ್ರಗ್ರಂಥವಾಗಿ ಭಾವಿಸಿದ್ದಾರೆ. ಮುಸಲ್ಮಾನರ ವಿಚಾರದಲ್ಲೂ ಹೀಗೆಯೇ. ಅವರಲ್ಲಿಯೂ ಪ್ರಮುಖವಾದ ಎರಡು ಶಾಖೆಗಳಿವೆ. ಆದರೆ ಎರಡು ಪಂಗಡದವರೂ ದೇವರನ್ನು 'ಅಲ್ಲಾಹು'ವೆಂದು ಕರೆಯುತ್ತಾರೆ ಮತ್ತು 'ಖುರಾನು' ಅವರಿಬ್ಬರಿಗೂ ಏಕೈಕ ಪವಿತ್ರಗ್ರಂಥವಾಗಿದೆ. ಹಿಂದೂಗಳಲ್ಲಿ ಸಹ ಶೈವರು, ವೈಷ್ಣವರು ಎಂಬ ಎರಡು ಪಂಗಡಗಳಿವೆ. ಆದರೆ ಅವರಿಬ್ಬರೂ ದೈವವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಶೈವರು ದೇವರನ್ನು ಶಿವನೆನ್ನುವರು. ವೈಷ್ಣವರು ದೇವರನ್ನು ವಿಷ್ಣುವೆನ್ನುವರು. ತಮಿಳುನಾಡಿನಲ್ಲಿ ಶೈವರಿಗೆ 'ತೇವಾರಂ' ಎಂಬುದು ಪವಿತ್ರ ಗ್ರಂಥವಾದರೆ, ವೈಷ್ಣವರಿಗೆ 'ದಿವ್ಯ ಪ್ರಬಂಧವು'



ಪವಿತ್ರಗ್ರಂಥ. ಇವೆರಡು ಗ್ರಂಥಗಳಿಗೂ ವೇದಗಳು ಆಧಾರ ಗ್ರಂಥಗಳು ಎಂಬುದಾಗಿ ಎರಡು ಶಾಖೆಗಳವರೂ ಭಾವಿಸುತ್ತಾರೆ. ದಿವ್ಯ ಪ್ರಬಂಧಗಳನ್ನು ತಮಿಳುವೇದವೆಂದೇ ಕರೆಯುವುದುಂಟು. ಶೈವರು ಸಹ ವೇದಗಳನ್ನು ಒಪ್ಪಿ ಅನುಸರಿಸುತ್ತಾರೆ. ಹೀಗಾಗಿ ನಮ್ಮ ಧರ್ಮದ ಎಲ್ಲ ಶಾಖೆಗಳಿಗೂ ವೇದಗಳು ತಾಯಿಬೇರು ಎನ್ನಬಹುದು. ನಮ್ಮಲ್ಲಿನ ಪಂಗಡಗಳಿಗೆ ಬೇರೆ ಬೇರೆ ಹೆಸರುಗಳು ಇವೆಯಾದರೂ ಅವೆಲ್ಲ ಮೂಲತಃ ವೇದಗಳಿಗೆ ನಿಷ್ಠವಾಗಿವೆ.

ನಮ್ಮ ಧರ್ಮಕ್ಕೆ ವೇದಗಳೇ ಆಗರ. ಅವನ್ನು ದೇವವಾಣಿ ಎನ್ನುತ್ತೇವೆ. ವೇದಗಳಲ್ಲಿ ಶಬ್ದ ಮತ್ತು ಅರ್ಥಗಳ ಸಾಮರಸ್ಯವಿದೆ. ಅಂದರೆ ಶಬ್ದದಲ್ಲಿಯೇ ಅರ್ಥವು ಅಡಕವಾಗಿದೆ. ಶಬ್ದದ ಸರಿಯಾದ ಸಂಪೂರ್ಣವಾದ ಉಚ್ಚಾರಣೆಯಲ್ಲಿ ಅರ್ಥವು ಅಂತರ್ಗತವಾಗುತ್ತದೆ. ವೇದದ ಒಂದೊಂದು ವಾಕ್ಯವನ್ನೂ ಮಂತ್ರಗಳೆನ್ನುತ್ತೇವೆ. ಅಲ್ಲಿ ಧ್ವನಿ ಮತ್ತು ಅರ್ಥಗಳು ಏಕೀಭವಿಸಿವೆ. ಉಚ್ಚಾರಣೆಯಲ್ಲಿ ಸ್ವಲ್ಪ ಸ್ಖಾಲಿತ್ಯವಿದ್ದರೂ ಅರ್ಥವು ವಿರುದ್ಧವೂ, ವಿರೂಪವೂ ಆಗಿಬಿಡುವುದು.

ನಮ್ಮ ಸಂಪ್ರದಾಯದಲ್ಲಿ ವೇದಗಳನ್ನು ಬರಹಕ್ಕೆ ಒಳಪಡಿಸದಿರುವುದಕ್ಕೆ ಇದೇ ಕಾರಣ. ಅವು ಕಿವಿಯ ಮೂಲಕವಾಗಿ ಅವಧಾರಿತವಾದವು. ಕಂಠೋಕ್ತವಾಗಿ, ಬಾಯಿಂದ ಪಠಿಸಲ್ಪಟ್ಟವು. ಪುನಃ ಇದೇ ರೀತಿ ಕಿವಿಯಿಂದ ಇನ್ನೊಂದು ಬಾಯಿಗೆ ಸಂಚಾರ. ಹೀಗಾಗಿ ವೇದಗಳನ್ನು ಶ್ರುತಿ ಎಂದು ಕರೆಯುತ್ತೇನೆ. ಕಿವಿಯ ಮೂಲಕವಾಗಿ ಮಾತ್ರ ಕೇಳುವಂತಹದು. ಹೀಗೆ ವೇದಗಳು ಶ್ರುತಿಗಳು ತಲೆಮಾರಿನಿಂದ, ತಲೆಮಾರಿಗೆ ಮೌಖಿಕ ಸಂಪತ್ತಾಗಿ, ಶ್ರದ್ಧಾಳುವೂ ಸಮರ್ಥನೂ ಆದ ವಿದ್ಯಾ ಗುರುವಿನ ಮುಖಾಂತರ, ಸೂಕ್ಷ್ಮಗ್ರಾಹಿಯಾದ ವಿದ್ಯಾರ್ಥಿಗೆ ಕಲಿಸಿ ನೆಲೆಸುತ್ತಿದ್ದಿತು. ಹಾಗೆ ನೋಡಿದರೆ ವೇದಗಳನ್ನು ಗ್ರಂಥರೂಪದಲ್ಲಿ ರಚಿಸುವ ಉದ್ದೇಶವೇ ಇರಲಿಲ್ಲ. ತಮಿಳಿನಲ್ಲಿ ವೇದಗಳನ್ನು ರಹಸ್ಯವೆಂದು ಅಲಿಖಿತವೆಂದು ಹೇಳುವ ವಾಡಿಕೆಯಿದೆ. ಬರಹಕ್ಕೆ ಒಳಪಟ್ಟದ್ದು ಯಾವುದೇ ಆಗಲಿ, ಅದರಲ್ಲಿ ಕೆಲವು ಶಬ್ದಗಳು ಬಿಟ್ಟು ಹೋಗುವುದು, ಕೆಲವು ಹೊಸ ನಿರೂಪಣೆ ಸೇರುವುದು, ಕೆಲವು ಪ್ರಕ್ಷಿಪ್ತಗಳು ನುಸುಳುವುದು ಅಥವಾ ತಿದ್ದುಪಾಟಾಗುವುದು. ಹೀಗೆ ತಿಳಿದೋ ತಿಳಿಯದೆಯೋ ದೋಷಗಳಿಗೆ ಆಸ್ಪದವಾಗುವುದು – ಮುಖ್ಯವಾದ ಮೂಲಪ್ರತಿಯಿಂದ ಪುನಃ ಪ್ರತಿ ಮಾಡುವಾಗ ಈ ತಪ್ಪುಗಳು ವ್ಯಾಪಕವಾಗಿ ಬಳಕೆಗೆ ಬಂದುಬಿಡುತ್ತವೆ. ಸಾವಿರಾರು ವರ್ಷಗಳಲ್ಲಿ ಇಂತಹ ಎಷ್ಟು ಪ್ರತಿಗಳು ತಪ್ಪು ವಿಚಾರಗಳನ್ನು ಹರಡಬಹುದು ಎಂದು ಯೋಚಿಸಿರಿ.

ಶತ–ಶತಮಾನಗಳಿಂದ ಹೀಗೆ ಮೌಖಿಕವಾಗಿ ವೇದಗಳನ್ನು ಕಲಿಸುವುದಕ್ಕೆ, ಅವುಗಳನ್ನು ಶುದ್ಧವಾದ ಮೂಲರೂಪದಲ್ಲಿ ಉಳಿಸಿಕೊಳ್ಳುವುದಕ್ಕೆ ಕೆಲವು ಉಪಾಯಗಳಿವೆ. ಪ್ರತಿಯೊಂದು ವೇದಮಂತ್ರದಲ್ಲಿಯೂ ಪದಗಳನ್ನು ಎಷ್ಟು ಬಾರಿ,

ಯಾವ ಕ್ರಮದಲ್ಲಿ ಹೇಳಬೇಕು, ಶಬ್ದಗಳ ನಡುವಿನ ಸಮಯ, ಸ್ವರದ ಏರಿಳಿತ ಹೇಗಿರಬೇಕು ಮತ್ತು ಶರೀರದ ಯಾವ ಭಾಗದಿಂದ ಆ ಧ್ವನಿಯು ಹೊರಡಬೇಕು – ಇವೆಲ್ಲ ಗಮನಕ್ಕೆ ಬರಬೇಕು. ಇವನ್ನೆಲ್ಲ ಪುಸ್ತಕಗಳಿಂದ ಕಲಿಯಲಾಗುವುದಿಲ್ಲ. ಆದರೆ ಗುರುಮುಖೇನ ಈ ಮಂತ್ರಗಳನ್ನು ಕಲಿಯುವಾಗ ಆತನನ್ನು ಅನುಕರಿಸುತ್ತ ಕಲಿಯಬಹುದು. ಇದನ್ನೇ ವೇದಾಧ್ಯಯನವೆನ್ನುವುದು. ವೇದಗಳು ಬರವಣಿಗೆಗೆ ಒಳಪಟ್ಟಿದ್ದಲ್ಲಿ, ಅಥವಾ ಈಗಿನಂತೆ ಅಚ್ಚುಮಾಡಲ್ಪಟ್ಟಿದ್ದರೆ, ಓದುಗರಿಗೆ ಅವುಗಳ ಶಬ್ದ ಮತ್ತು ಅರ್ಥಗಳು ಅರಿವಿಗೆ ಬರುತ್ತವೆಯೇ ಹೊರತು ಅವನ್ನು ಉಚ್ಚಾರಣೆ ಮಾಡುವ ಕ್ರಮ ತಿಳಿಯುವುದಿಲ್ಲ. ಯಾವಾಗ ಅವನ್ನು ಯುಕ್ತವಾದ ಕ್ರಮದಲ್ಲಿ ಉಚ್ಚಾರಣೆ ಮಾಡುವುದಿಲ್ಲವೋ ಆಗ ಅವು ಪ್ರಭಾವಶಾಲಿಯಾಗುವುದಿಲ್ಲ. ಇನ್ನೂ ಕ್ರಮತಪ್ಪಿದ ಧ್ವನಿ ಮತ್ತು ಉಚ್ಚಾರಗಳಿಂದ ವಿರುದ್ಧಾರ್ಥಕ್ಕೂ ವಿಪರೀತವಾದ ತಪ್ಪುಗಳಿಗೂ ಆ ಮೂಲಕ ದೋಷಕ್ಕೂ ಕಾರಣವಾಗುತ್ತದೆ.

ಆದಕಾರಣ ಹಿಂದೂ ಸಂಪ್ರದಾಯದ ಪ್ರಕಾರ ವೇದವನ್ನು ಪುಸ್ತಕ ಅಥವಾ ಹಸ್ತಪ್ರತಿಯ ಮುಖೇನ ಕಲಿಯುವವನನ್ನು ಕನಿಷ್ಠ ಮಟ್ಟದ ವ್ಯಾಸಂಗಿ ಎಂದು ಕರೆಯಲಾಗುತ್ತದೆ. ಅಂತಹವರು ದೂಷಣೆಗೂ ಪಾತ್ರರಾಗುವರು. ಅವರನ್ನು ವರ್ಣಿಸುವ ಶ್ಲೋಕ ಒಂದು ಹೀಗಿದೆ:

**ಗೀತಿ ಶೀಘ್ರಿ ಶಿರಃಕಂಪೀ ತಥಾ ಲಿಖಿತ ಪಾಠಕಃ।**
**ಅನರ್ಥಜ್ಞಃ ಅಲ್ಪಕಂಠಶ್ಚಃ ಶೈದ್ಯೈತೇ ಪಾಠಕಾಧಮಾಃ॥**

ಈ ಶ್ಲೋಕನ ಅರ್ಥ ಹೀಗಿದೆ. "ಯಾರು ವೇದವನ್ನು ಹಾಡುತ್ತಾನೊ, ಯಾರು ವೇಗವಾಗಿ ಅವನ್ನು ಪಠಿಸುತ್ತಾನೋ, ಪಠಿಸುವಾಗ ತಲೆಯನ್ನು ಆಡಿಸುತ್ತಾನೋ ಬರಹದಲ್ಲಿರುವ ವೇದವನ್ನು ಓದುತ್ತಾನೋ, ಯಾರು ಅದರ ಅರ್ಥವನ್ನು ಮನಗಾಣದೆ ಸಣ್ಣ ಧ್ವನಿಯಲ್ಲಿ ಓದುತ್ತಾನೋ ಆತನು ವೇದಾಧ್ಯಾಯಿಗಳಲ್ಲಿ ಬಹಳ ಅಧಮನಾದವನು."

ಹೀಗೆ ವೇದಗಳನ್ನು ಭಾರತೀಯರು ಬರೆಯದೆ, ಮೌಖಿಕ ಬೋಧನೆ ಮತ್ತು ಪಠನಗಳ ಮೂಲಕವಾಗಿ ಕಾಪಾಡಿಕೊಂಡಿದ್ದಾರೆ. ಇದನ್ನೇ ಅವರು ಅಧ್ಯಯನವೆನ್ನುತ್ತಾರೆ. ವೇದಾಧ್ಯಯನ ಮಾಡುವುದು ಮತ್ತು ಮಾಡಿಸುವುದು ಬ್ರಾಹ್ಮಣರ ಕರ್ತವ್ಯ. ಇದುಸಂಪೂರ್ಣವಾಗಿ ಅವರ ದಿನಚರಿಯನ್ನೇ ವ್ಯಾಪಿಸಿರುತ್ತದೆ. ಅದರ ಜೀವಮಾನವೆಲ್ಲ ಇದಕ್ಕಾಗಿಯೇ ವ್ಯಯವಾಗುತ್ತದೆ. ಜೀವನೋಪಾಯಕ್ಕಾಗಿ ಅವರು ಇತರ ಉಪವೃತ್ತಿಗಳನ್ನು ಕೈಗೊಂಡರೆ ವೇದಾಧ್ಯಯನಕ್ಕೆ ಅದರಿಂದ ಅಡ್ಡಿಯಾಗುವುದು. ಆದ್ದರಿಂದಲೇ ಬ್ರಾಹ್ಮಣರು ಇತರ ವೃತ್ತಿಗಳನ್ನು ಕೈಗೊಳ್ಳುವುದನ್ನು ನಿಷೇಧಿಸಿದೆ. ಈ ಕಾರಣದಿಂದಲೇ ಇತರ ವೃತ್ತಿಗಳನ್ನು ಕೈಗೊಂಡ ಜನರನ್ನು



ವೇದಾಧ್ಯಯನದಿಂದ ದೂರವಿಟ್ಟಿದೆ. ಇಂತಹ ಕಟ್ಟುನಿಟ್ಟಾದ ವಿಧಾನದಿಂದ ವೇದಗಳು ಅಸ್ಖಲಿತವಾಗಿರುವಂತೆ ನಮ್ಮ ಸಮಾಜವು ಕಾಪಾಡಿದೆ. ಇತರ ವೃತ್ತಿಗಳಲ್ಲಿ ತೊಡಗಿದವರನ್ನು ಸಹ ವೇದಾಧ್ಯಯನದಿಂದ ವಿಮುಖವಾಗಿಸುವುದಕ್ಕೂ ಇದೇ ಕಾರಣವೇ ಹೊರತು ಭೇದ–ಭಾವದಿಂದಲ್ಲ. ಸಮಾಜದಲ್ಲಿ ತಮ್ಮ ಪಾಲಿನ ಕರ್ತವ್ಯಗಳನ್ನು ತಮ್ಮ ವೃತ್ತಿಗಳನ್ನು ಇತರ ಆಕರ್ಷಣೆಗಳಿಂದ ವಿಚಲಿತರಾಗದೆ ಜನರು ನಡೆಸಲಿ ಎಂಬುದೇ ಈ ಸಂಪ್ರದಾಯದ ಉದ್ದೇಶ.

ಬ್ರಾಹ್ಮಣರು ಇನ್ನು ಯಾವ ಲೌಕಿಕವಾದ ವೃತ್ತಿಯಲ್ಲಿ ತೊಡಗಬಾರದ ಕಾರಣದಿಂದ, ಅವರು ಇತರರಂತೆ ತಮ್ಮ ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಹೋಗುವುದರಿಂದ, ಅವರ ಜೀವನಾನುಕೂಲಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವುದು ಸಮಾಜದ ಕರ್ತವ್ಯವಾಯಿತು. ಬ್ರಾಹ್ಮಣರಿಗೆ ವೇದಾಧ್ಯಯನ, ವೇದಸಂರಕ್ಷಣೆಯ ಕರ್ತವ್ಯವಿರುವುದರಿಂದ ಸಮಾಜವು ಆತನನ್ನು ರಕ್ಷಿಸಬೇಕಲ್ಲದೆ, ಆತನಿಗೆ ಒಂದು ಸೌಕರ್ಯವನ್ನು ಕೊಟ್ಟಿದೆ ಎಂದು ತಿಳಿಯಬಾರದು. ಇಂತಹ ವಿಶೇಷ ಸವಲತ್ತನ್ನು ಪಡೆದ ಬ್ರಾಹ್ಮಣನನ್ನು ಸಮಾಜಕ್ಕೆ ಅಂಟಿಕೊಂಡ ಪರಾವಲಂಬಿ ಎಂದು ತಿಳಿಯಬೇಕಾದ್ದಿಲ್ಲ. ಸಮಾಜದ ಇತರ ವೃತ್ತಿಗಳಲ್ಲಿನ ಜನರು ತಮ್ಮವರ ಒಳಿತನ್ನು ಮತ್ತು ತಮ್ಮ ಉತ್ತಮಿಕೆಯನ್ನು ಸಾಧಿಸುವಂತೆಯೇ ಬ್ರಾಹ್ಮಣರು ಸಹ ತಮ್ಮ ಸುತ್ತಲಿನ ಜನರ ಆತ್ಮೋನ್ನತಿಗಾಗಿ ಶ್ರಮಿಸುತ್ತಾರೆ. ಅವರ ಜೀವನಕ್ಕಾಗಿ ಇತರರು ಕೊಡುವ ದಾನ ಧರ್ಮಗಳನ್ನು ಅವರ ಕರ್ತವ್ಯವೆಂದು ಭಾವಿಸಬೇಕು. ಹಿಂದೆ ಜನರು ಇಂತಹ ಕರ್ತವ್ಯವನ್ನು ಸ್ವ–ಸಂತೋಷದಿಂದ ನಿರ್ವಹಿಸುತ್ತಿದ್ದರು.

ಬ್ರಾಹ್ಮಣರಿಗಾದರೋ ವೇದಾಧ್ಯಯನ ತಮ್ಮ ಕರ್ತವ್ಯವಾಗಿ, ಸಮಾಜದಲ್ಲಿ ಅದು ತಮ್ಮ ಸೇವೆ ಎಂಬಂತೆ ಅವರದನ್ನು ನಡೆಸಬೇಕು. ಆಧುನಿಕ ಕಾಲದಲ್ಲಿ ಬಂದಿರುವ ದುರದೃಷ್ಟವೆಂದರೆ, ಬ್ರಾಹ್ಮಣರು ತಮ್ಮ ಕರ್ತವ್ಯವನ್ನು ಕೈಬಿಟ್ಟು, ಇತರ ವೃತ್ತಿಗಳನ್ನು ಕೈಗೊಳ್ಳಲು ಹೊರಟಿದ್ದಾರೆ. ಹಾಗಾಗಿ ಕೇವಲ ಬೆರಳೆಣಿಕೆಯಷ್ಟುಜನ ವೇದಾಭ್ಯಾಸದಲ್ಲಿ ನಿರತರಾಗಿ ವೈದಿಕರೆಂದು ಕರೆಸಿಕೊಳ್ಳುತ್ತಾರೆ. ಹಾಗೆನೋಡಿದರೆ, ಎಲ್ಲ ಬ್ರಾಹ್ಮಣರೂ ವೈದಿಕರೇ, ವೇದಾಭ್ಯಾಸ ಮಾಡಬೇಕಾದವರೇ ಸರಿ.

* * * *

# ೨. ನಮ್ಮದು ವಿಶ್ವ ಧರ್ಮ

ಮನುಕುಲದ ಧರ್ಮಗಳಲ್ಲೆಲ್ಲ ವೈದಿಕ ಧರ್ಮವೇ ಪ್ರಾಚೀನವಾದದ್ದೆಂದು ನಾನು ಈಗಾಗಲೇ ಹೇಳಿದ್ದೇನೆ. ಇತರ ಧರ್ಮಗಳು ಅನಂತರ ಉದಿಸಿದವು. ವೈದಿಕ ಧರ್ಮವು ಪ್ರಪಂಚದಲ್ಲೆಲ್ಲ ಬಳಕೆಯಲ್ಲಿದ್ದಿತೆಂಬುದಕ್ಕೆ ನಮಗೆ ಅನೇಕ ಸಾಕ್ಷ್ಯಾಧಾರಗಳು ದೊರಕುತ್ತವೆ. ಅವುಗಳಲ್ಲಿ ಕೆಲವನ್ನು ಗಮನಿಸೋಣ:

ಕ್ರಿಸ್ತಪೂರ್ವ ೧೨೮೦ರಲ್ಲಿ ಕೊರೆಯಲ್ಪಟ್ಟ ಒಂದು ಶಾಸನವು ನಮಗೆ ಈಜಿಪ್ಟ್ ದೇಶದಲ್ಲಿ ದೊರೆತಿದೆ. ಅದರಲ್ಲಿ ಹಿಟ್ಟೈಟ್‌ರಿಗೂ ಎರಡನೆಯ ರಾಮಸಿಸ್‌ಗೂ ನಡುವೆ ಏರ್ಪಟ್ಟ ಒಪ್ಪಂದದ ವಿಚಾರವಿದೆ. ಈ ಒಪ್ಪಂದಕ್ಕೆ ಮೈತ್ರಾವರುಣನೆಂಬ, ವೇದೋಕ್ತನಾದ ಅವಳಿ ದೇವತೆಯನ್ನು ಸಾಕ್ಷಿಯಾಗಿ ಹೇಳುತ್ತಾರೆ (ಎಚ್.ಆರ್.ಹಾಲ್ ರವರು ರಚಿಸಿದ *ಏನ್ಷಿಯೆಂಟ್ ಹಿಸ್ಟರಿ ಆಫ್ ದಿ ನಿಯರ್ ಈಸ್ಟ್*, ಪು.೩೬೪ ಇತ್ಯಾದಿ ನೋಡಿ). ಪ್ರಾಚೀನ ಈಜಿಪ್ಟಿನ ಅರಸರ ಹೆಸರುಗಳನ್ನೇ ನೋಡಿ, ರಾಮೆಸಿಸ್ I, ರಾಮೆಸಿಸ್ II, ರಾಮೆಸಿಸ್ III ಎಂದಿವೆ. ವಿಷ್ಣುವಿನ ಅವತಾರವಾದ ರಾಮನ ಹೆಸರನ್ನು ಇವು ಎಷ್ಟು ಹೋಲುತ್ತವೆ ಎಂಬುದನ್ನು ಗಮನಿಸಿ.

ದಕ್ಷಿಣ ಆಫ್ರಿಕಾದ ಪೂರ್ವತೀರದಲ್ಲಿರುವ ಮಡಗಾಸ್ಕರ್ ದ್ವೀಪದಲ್ಲಿ ಎಷ್ಟೋ ಊರುಗಳ ಹೆಸರುಗಳು ರಾಮನಿಗೆ ಸಂಬಂಧಪಟ್ಟಿವೆ.

ಉತ್ತರ ಆಫ್ರಿಕಾದಲ್ಲಿರುವ ಸಹಾರಾ ಮರುಭೂಮಿಯು ಮೊದಲು ಸಾಗರ ತಳದಲ್ಲಿದ್ದಿತೆಂದು ಭೂಗರ್ಭ ಶಾಸ್ತ್ರಜ್ಞರು ಹೇಳುತ್ತಾರೆ. ಅನಂತರ ನೀರಿಲ್ಲದೆ ಅದು ಒಣಗಿತೆಂದು ಹೇಳುತ್ತಾರೆ. ಸಂಸ್ಕೃತ ಸಾಗರ ಎಂಬ ಪದದ ಪರಿವರ್ತಿತ ರೂಪವೇ ಸಹಾರ ಎಂದು ಕಾಣುತ್ತದಲ್ಲದೇ *ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ* ಮಾಲಿಕೆಯ ಸಂಪುಟದಲ್ಲಿ ೨೩ನೆಯ ಸಹಾರಾ ಎಂಬ ಪದದ ವಿವರಣೆ ನೋಡಿ. ಸಹಾರಾ ಪ್ರದೇಶವು ನೀರಿನಲ್ಲಿ ಮುಳುಗಿದ್ದಾಗ ಅದರ ಸುತ್ತಮುತ್ತಣ ತೀರದಲ್ಲಿ ಜನವಸತಿ ಇತ್ತೆಂದೂ ಅವರ ಹೆಸರುಗಳು ಸಂಸ್ಕೃತಮಯವಾಗಿ ಕೋಸಲ ದೇಶದ ಅರಸನಿಗೆ ಸಂಬಂಧಪಟ್ಟಿತ್ತೆಂದೂ ತಿಳಿಯುತ್ತದೆ.

ದೂರದ ಮೆಕ್ಸಿಕೋ ದೇಶದಲ್ಲಿ 'ರಾಮಸೀತ' ಎಂಬ ಒಂದು ಹಬ್ಬವು ಆಚರಣೆಯಲ್ಲಿದೆ. ಅದು ಸರಿಯಾಗಿ ನಮ್ಮ ನವರಾತ್ರಿ ಅಥವಾ ದಸರಾ ಹಬ್ಬದ ಸಮಯದಲ್ಲಿ ಆಚರಣೆಗೆ ಬರುತ್ತದೆ. ಟಿ.ಡಬ್ಲ್ಯೂ.ಎಫ್. ಗನ್ನರ ಕೃತಿಯ ೫೬ನೇ



ಪುಟದಲ್ಲಿ ಮತ್ತು ಚಿತ್ರಪಟ್ಟಿಕೆ ೨೪ರಲ್ಲಿ ಕೆಳಕಂಡ ವಿಚಾರಗಳಿವೆ: ಕೃತಿಯ ಹೆಸರು "ದಿ ಮಾಯಾ ಇಂಡಿಯನ್ಸ್ ಆಫ್ ಸದರನ್ ಯುಕಟಾನ್, ನಾರ್ತ್ ಅಂಡ್ ಬ್ರಿಟಿಷ್ ಹೊಂಡುರಾಸ್" ಅಲ್ಲಿ ನಡೆದ ಉತ್ಖನನಗಳಿಂದ ಅನೇಕ ಗಣೇಶ ಮೂರ್ತಿಗಳು ದೊರೆತಿವೆ. 'ಹರಬಿಲಾಸ್ ಸರ್ದಾ' ಅವರ 'ಹಿಂದೂ ಸುಪೀರಿಯಾರಿಟಿ' ಎಂಬ ಕೃತಿಯ ೧೫೧ನೆಯ ಪುಟದಲ್ಲಿ ಇದು ಉಕ್ತವಾಗಿದೆ. ಬಹಳ ಹಿಂದೆ ಅಲ್ಲಿ ವಾಸಿಸುತ್ತಿದ್ದ ಜನರು ಆಸ್ತಿಕರು (ಅಂದರೆ ವೇದಗಳಲ್ಲಿ ನಂಬಿಕೆ ಉಳ್ಳವರು) ಎಂಬ ಶಬ್ದವು ಈಗಲೂ ಸ್ವಲ್ಪ ವ್ಯತ್ಯಾಸವಾದ ರೂಪದ್ಲಲಿ 'ಅಜ್‌ಟೆಕ್' ಎಂದು ಬಳಕೆಯಲ್ಲಿದೆ.

ದಕ್ಷಿಣ ಅಮೆರಿಕೆಯ ಪಶ್ಚಿಮ ತೀರದಲ್ಲಿ ವಾಸಿಸುತ್ತಿದ್ದ ಜನರು ಸೂರ್ಯಾರಾಧಕರಾಗಿದ್ದರು. ಅವರ ಮುಖ್ಯವಾದ ಹಬ್ಬವು ಸಂಕ್ರಾಂತಿಯಂದು ಬರುತ್ತದೆ. (*ಏಷ್ಯಾಟಿಕ್ ಸ್ಟಡೀಸ್* ಎಂಬ ಕೃತಿಯ ಒಂದನೇ ಭಾಗದ ೪೨೬ನೆಯ ಪುಟವನ್ನು ನೋಡಿ) ಅವರನ್ನು ಇಂಕಾ ಜನಾಂಗವೆಂದು ಕರೆಯುತ್ತಾರೆ. 'ಇನ'ನೆಂದರೆ ಸೂರ್ಯನೆಂದು ಅರ್ಥ.

ನಮಗೆ ಪುರಾಣಕಾಲದ ಸಗರ ಚಕ್ರವರ್ತಿಯ ವೃತ್ತಾಂತವು ತಿಳಿದೇ ಇದೆ. ಆತನ ಅರುವತ್ತು ಸಾವಿರ ಮಕ್ಕಳನ್ನು 'ಕಪಿಲ ಮಹರ್ಷಿ'ಯು ಬೂದಿ ಮಾಡಿ ಬಿಟ್ಟಿದ್ದನು. ಆ ರಾಜಕುಮಾರರೆಲ್ಲರೂ ಯಜ್ಞಾಶ್ವವನ್ನು ಹುಡುಕುತ್ತ ಬಂದು ಅದು ಪಾತಾಳಲೋಕದಲ್ಲಿ ಮುಚ್ಚಿಡಲ್ಪಟ್ಟಿದೆ ಎಂಬುದಾಗಿ ತಿಳಿದು ನೆಲವನ್ನು ಅಗೆಯ ತೊಡಗಿದ್ದರು. ಏಕೆಂದರೆ ಅಶ್ವವು ಕಪಿಲ ಮಹರ್ಷಿಯ ತಪೋವನದ ಸಮೀಪದಲ್ಲಿಯೇ ಮೇಯುತ್ತಿದ್ದುದನ್ನು ಅವರು ತಿಳಿದಿದ್ದರು. ಅವರು ಮಹರ್ಷಿಯನ್ನು ದೂಷಿಸಿದುದರಿಂದ ಆತನು ಕುಪಿತನಾಗಿ ಅವರನ್ನು ದುರುಗುಟ್ಟಿ ನೋಡಿ ಕಣ್ಣೋಟದಿಂದಲೇ ದಹಿಸಿ ಬೂದಿ ಮಾಡಿ ಬಿಟ್ಟಿದ್ದನು. ಪಾತಾಳ ಲೋಕವೆಂದು ಭಾರತಕ್ಕೆ ತಳಭಾಗದಲ್ಲಿಯೂ, ಭೂಮಿಯ ಇನ್ನೊಂದು ಪಾರ್ಶ್ವದಲ್ಲಿಯೂ ಇರುವ ಅಮೆರಿಕವನ್ನು ಅವರು ಸೂಚಿಸಿರಬೇಕು. ಅಲ್ಲಿನ ಕ್ಯಾಲಿಫೋರ್ನಿಯ ಒಂದು ವೇಳೆ ಕಪಿಲಾರಣ್ಯವಾಗಿರಬಾರದೆ? ಈ ಊಹೆಗೆ ತಕ್ಕಂತೆ ಕ್ಯಾಲಿಫೋರ್ನಿಯದಲ್ಲಿ ಒಂದು 'ಬೂದಿಬೆಟ್ಟ' (ಆಶ್ ಮೌಂಟನ್) ಇದೆ. ಮತ್ತು ಅಮೆರಿಕದ ಉತ್ತರ ಭಾಗದ ಅಲಾಸ್ಕಾದಲ್ಲಿ ಒಂದು 'ಕುದುರೆಯ ದ್ವೀಪ'ವಿದೆ (ಹಾರ್ಸ್ ಐಲೆಂಡ್).

'ಮಧ್ಯ ಆಸ್ಟ್ರೇಲಿಯದ ಮೂಲ ನಿವಾಸಿಗಳು' (*ದಿ ನೇಟಿವ್ ಟ್ರೈಬ್ಸ್ ಆಫ್ ಸೆಂಟ್ರಲ್ ಏಷ್ಯ*) ಎಂಬ ಗ್ರಂಥದ ೧೨೮ ಮತ್ತು ೧೯೯ನೆಯ ಪುಟಗಳ ಚಿತ್ರಗಳಲ್ಲಿ ಅಲ್ಲಿನ ಮೂಲನಿವಾಸಿಗಳ ವೀರಾವೇಶದಿಂದ ಕೂಡಿದ ನರ್ತನವನ್ನು ವರ್ಣಿಸಿ, ಅದನ್ನು ಶಿವನ ನೃತ್ಯವೆಂದು ಕರೆದಿದ್ದಾರೆ. ಗ್ರಂಥವು ಸ್ಪೆನ್ಸರ್ ಮತ್ತು ಗಿಲ್ಲೆನ್ ಎಂಬ ಲೇಖಕರಿಂದ ರಚಿತವಾಗಿ, ಮ್ಯಾಕ್‌ಮಿಲನ್ ಪ್ರಕಟಣಾಲಯದಿಂದ ೧೮೯೯ರಲ್ಲಿ

ಅಚ್ಚಾಗಿದೆ. ಚಿತ್ರಗಳನ್ನು ನೀವು ಗಮನವಿಟ್ಟು ನೋಡಿದರೆ ನರ್ತಕರು ಹಣೆಯ ಮೇಲೆ ಒಂದು ಕಣ್ಣನ್ನು ಬರೆದುಕೊಂಡಿರುವುದು ಕಾಣುತ್ತದೆ. ಇದರಿಂದ ಅಷ್ಟು ದೂರದ ಆಸ್ಟ್ರೇಲಿಯದ ಜನರು ಸಹ ವೇದಗಳ ವಿಚಾರ ಮತ್ತು ಅಲ್ಲಿನ ದೈವಗಳಿಂದ ಪ್ರಭಾವಿತರಾಗಿರಬಹುದೆಂದು ಕಂಡುಬರುತ್ತದೆ.

ಪೂರ್ವದೇಶದ ದ್ವೀಪಸ್ತೋಮಗಳಲ್ಲಿ ನಮ್ಮ ಧರ್ಮದ ಪ್ರಭಾವವನ್ನು ಸಾಧಾರವಾಗಿ ಪರಿಶೀಲಿಸಬಹುದು. ಜಾವಾದಲ್ಲಿ ಹಿಂದೂ ಧರ್ಮದ ಮತ್ತು ಅದರ ಪೂಜಾ ಪಳೆಯುಳಿಕೆಗಳ ವಿಧಾನಗಳ ಅಸಂಖ್ಯಾತವಾದ ನಿದರ್ಶನಗಳು ದೊರೆಯುತ್ತವೆ. ವ್ಯಾಲೆಸ್ ಎಂಬ ಗ್ರಂಥಕರ್ತನ *ಮಲಯ್ ಆರ್ಕಿಪಿಲ್ಯಾಗೊ* ಎಂಬ ಕೃತಿಯಲ್ಲಿ (ಪುಟ ೪೪–೪೫) ಬೋರ್ನಿಯೋ ದ್ವೀಪದ ಯಾವ ಜನರೂ ಮೆಟ್ಟಿನೋಡದಂತಹ ಕಾಡುಗಳ ಬಗೆಗೆ ಹೇಳಿದೆ. ಅಲ್ಲಿ ಸಂಶೋಧನೆಗಳನ್ನು ಮಾಡಲು ಹೊರಟ ಜನರಿಗೆ ಒಂದು ಬಂಡೆ ಕಂಡುಬಂದಿತು. ಅದೊಂದು ಯೂಪಸ್ತಂಭದ ಮೇಲಿನ ಶಾಸನ. ಬೋರ್ನಿಯೋ ದ್ವೀಪದ ಕೋಟಿಯ ಮೂಲವರ್ಮನು ನಡೆಸಿದ ಯಜ್ಞಗಳನ್ನು ಅಲ್ಲಿ ವರ್ಣಿಸಿ ಕೊರೆಯಲಾಗಿತ್ತು.

ಇವೆಲ್ಲ ಕುರುಹುಗಳು, ಹಿಂದೆ ನಮ್ಮ ಧರ್ಮವು ಭೂಗೋಳದಾದ್ಯಂತ ಪ್ರಚಾರದಲ್ಲಿದ್ದಿತು ಎಂಬುದನ್ನು ಹೇಳುತ್ತಿವೆ. ಕಾರಣಾಂತರಗಳಿಂದ, ನಮ್ಮ ತತ್ತ್ವಗಳಲ್ಲಿ, ಪದ್ಧತಿಗಳಲ್ಲಿ ಮತ್ತು ಧರ್ಮದಲ್ಲಿ ಅಧಃಪತನವುಂಟಾಗಿ ಅವೆಲ್ಲವೂ ಮರೆವಿಗೆ ಸರಿದುಹೋಗಿರಬೇಕು. ಭರತವರ್ಷವೆಂದು ಪ್ರಸಿದ್ಧವಾದ ನಮ್ಮ ದೇಶದಲ್ಲೂ ಸೀಮಿತವಾಗಿರಬೇಕು. ತಮ್ಮ ತತ್ತ್ವಾದರ್ಶಗಳನ್ನು ಮರೆತು ಅಲ್ಲಿನ ಜನರು ದೇವರಿಲ್ಲದೆ, ಅನೈತಿಕವಾದದ ನಡೆಗೆ ಸಂದಾಗ, ಆ ದೇಶಗಳಲ್ಲಿ ಮಹಾ ಸಂತರು ಜನಿಸಿ, ಮರೆತ ಈ ಧರ್ಮದ ತತ್ತ್ವಗಳಲ್ಲಿ ಕೆಲವನ್ನಾಯ್ದುಕೊಂಡು ಹೊಸ ಧರ್ಮವನ್ನು ಸ್ಥಾಪಿಸಿರಬೇಕು. ಅವರು ತಮ್ಮನ್ನೇ ಹೊಸಧರ್ಮದ ಸ್ಥಾಪಕರೆಂದು ಕರೆದುಕೊಂಡರು. ಎಲ್ಲರೂ ಹಾಗೆಯೇ ಭಾವಿಸಿದರು. ಆದರೆ ವೈದಿಕ ಧರ್ಮವು ಪ್ರತಿಪಾದಿಸಿರುವ ಬ್ರಹ್ಮವಿದ್ಯೆಯ ಒಂದಲ್ಲ ಒಂದು ತತ್ತ್ವವನ್ನು ಈ ಹೊಸ ಧರ್ಮಗಳು ತಮ್ಮ ಮೂಲತತ್ತ್ವವಾಗಿ ಹೊಂದಿವೆ ಎಂಬುದನ್ನು ಮರೆಯುವಂತಿಲ್ಲ.

* * * *



# ೩. ವೇದಗಳ ಕಾಲ

ವೇದಗಳ 'ಕಾಲ'ವನ್ನು ಕುರಿತು ಮಾತನಾಡುವುದು ಪದ್ಧತಿಯಾಗಿದೆ. ಬೌದ್ಧಮತ, ಕ್ರೈಸ್ತಮತ ಮತ್ತು ಇಸ್ಲಾಂ ಧರ್ಮಗಳ ಪವಿತ್ರಗ್ರಂಥಗಳ ಕಾಲವನ್ನು ಆಯಾ ಧರ್ಮಗಳ ಅನುಯಾಯಿಗಳು ನಿಷ್ಕರ್ಷೆ ಮಾಡಿದ್ದಾರೆ. ಬೌದ್ಧರ 'ತ್ರಿಪಿಟಕ'ಗಳು ಅಶೋಕನ ಕಾಲಕ್ಕೆ ರಚಿತವಾದವು ಎಂದು ತೀರ್ಮಾನವಾಗಿದ್ದರೂ ಕೆಲವರು ಸಂಶೋಧನಾಕಾರರು ಬುದ್ಧನ ಕಾಲವನ್ನು ಕೆಲವು ಶತಮಾನಗಳ ಕಾಲ ಹಿಂದಕ್ಕೆ ಹಾಕುತ್ತಾರೆ. 'ಹೊಸ ಒಡಂಬಡಿಕೆ'ಯು ಇಂದಿಗೆ ೨೦೦೦ ವರ್ಷಗಳ ಹಿಂದೆ ರಚಿತವಾಗಿದ್ದೆಂದು ತಿಳಿದೇ ಇದೆ. ದೇವವಾಣಿ ಎಂದು ಪ್ರಸಿದ್ಧವಾಗಿದ್ದು, ಪ್ರವಾದಿಗೆ ಹೇಳಲಾದ 'ಖುರಾನ್', ೧೨೦೦ ವರ್ಷಗಳು ಹಿಂದಿನದು. ಇವೆಲ್ಲ ಪವಿತ್ರಗ್ರಂಥಗಳ ಕಾಲವು ಐತಿಹಾಸಿಕ ದಾಖಲೆಗಳೊಡನೆ ನಿರ್ಧರಿಸಲ್ಪಟ್ಟಿವೆ. ಆದರೆ ವೇದಗಳ ವಿಚಾರ ಹಾಗಿಲ್ಲ. ಅವು ರೂಪುತಾಳಿದ ಬಗೆ ಮತ್ತು ಕಾಲವನ್ನು ಕುರಿತು ಯಾರೂ ಕರಾರುವಾಕ್ಕಾಗಿ ಹೇಳಲಾರರು. ಆದರೂ ಪುರಾತತ್ತ್ವ ಶೋಧಕರು ಅವು ಯಾವಾಗ ರೂಪು ತಾಳಿದವೆಂಬುದನ್ನು ತಿಳಿಯಬಯಸುತ್ತಾರೆ. ಅವರಲ್ಲಿ ಕೆಲವರು ಕ್ರಿ.ಪೂ. ೧೫೦೦ ವರ್ಷಗಳ ಹಿಂದೆ ಅವು ರಚಿತವಾದವೆನ್ನುತ್ತಾರೆ. ಇನ್ನು ಕೆಲವರು ಅವುಗಳು ಕ್ರಿ.ಪೂ. ೩೦೦೦ರಲ್ಲಿ ರೂಪ ತಾಳಿದವೆನ್ನುತ್ತಾರೆ. ಆದರೆ ಲೋಕಮಾನ್ಯ ತಿಲಕರು ಕ್ರಿ.ಪೂ.೬೦೦೦ದ ವೇಳೆಗೇ ವೇದಗಳ ರಚನೆಯಾಗಿದೆ ಎಂದಿದ್ದಾರೆ. ಹಲವಾರು ಪುರಾತತ್ತ್ವಶೋಧಕರು ಈ ವಾದವನ್ನು ಒಪ್ಪಿದ್ದಾರೆ. ಕೆಲವರು ಒಪ್ಪದವರೂ ಇದ್ದಾರೆ. ಆಧುನಿಕ ಸಂಶೋಧಕರು ಈ ಕಾಲವನ್ನು ಸಾಧ್ಯವಾದಷ್ಟು ಈಚೆಗೆಳೆಯಲು ನೋಡುತ್ತಾರೆ.

ಬೌದ್ಧಧರ್ಮವು ವೈದಿಕ ಧರ್ಮವನ್ನು ತಿರಸ್ಕರಿಸಿ ಎದುರುಬಿದ್ದಿತು. ಬೌದ್ಧ ಭಿಕ್ಷುಗಳು ಅದನ್ನು ಟೀಕಿಸತೊಡಗಿದರು. ಅವರಿಗೂ ವೇದಗಳು ಎಂದು ರೂಪುಗೊಂಡವೆಂಬ ವಿಚಾರ ತಿಳಿದಿರಲಿಲ್ಲ. ಬುದ್ಧನು ಈಗ್ಗೆ ೨೫೦೦ ವರ್ಷಗಳ ಹಿಂದೆ ಜನ್ಮ ತಾಳಿದನು. ಆತನಿಗೂ ವೇದಗಳ ಪ್ರಾಚೀನತೆಯನ್ನು ಕುರಿತ ಅರಿವು ಇರಲಿಲ್ಲ. ವೇದಗಳು ಅನಾದಿಯೂ, ನಿತ್ಯವೂ ಆದವು. ವೇದಗಳು ರೂಪುಗೊಂಡಿರುವುದೇ ಶಬ್ದ(ಧ್ವನಿ)ದ ಚೌಕಟ್ಟಿನಲ್ಲಿ. ಶಬ್ದವು ನಿತ್ಯವಾದುದು. ನಮ್ಮ ಪ್ರಕಾರವಾಗಿ ಸೃಷ್ಟಿ ಮತ್ತು ಪ್ರಳಯಗಳು ಒಂದನ್ನೊಂದು ಹಿಂಬಾಲಿಸುತ್ತವೆ. ಪ್ರಳಯದ

ಅನಂತರ ಹೊಸ ಸೃಷ್ಟಿಯ ಕಾಲಕ್ಕೆ, ಶಾಶ್ವತವೂ ನಿತ್ಯವೂ ಆದ ಶಬ್ದವನ್ನು ಮಂತ್ರದ್ರಷ್ಟಾರರು ಗ್ರಹಿಸಿ ಅನಂತರ ಪ್ರಪಂಚಕ್ಕೆ ಅದನ್ನು ತಿಳಿಯಪಡಿಸುವರು.

ವೇದಗಳ ಕಾಲ ನಿರ್ಣಯ ಮಾಡುವಲ್ಲಿ ಅದರ ಶೈಲಿಯನ್ನು ಮುಖ್ಯವಾಗಿ ಗಣನೆಗೆ ತಂದುಕೊಳ್ಳುವುದು ಒಂದು ಪದ್ಧತಿ. ಹಿಂದೂ ಪವಿತ್ರಗ್ರಂಥಗಳಾದ ವೇದ ಮತ್ತು ಉಪನಿಷತ್ತುಗಳ ಭಾಷಾಶೈಲಿಯಲ್ಲಿ ವ್ಯತ್ಯಾಸವಿದೆ. ಹಾಗೆಯೇ ಅಲ್ಲಿಂದ ಮುಂದಿನ ಸೂತ್ರಗಳ, ಪುರಾಣಗಳು ಮತ್ತು ಕಾವ್ಯಗಳ ಶೈಲಿಯಲ್ಲಿಯೂ ಭಿನ್ನತೆ ತೋರುವುದು. ಯಾವುದೇ ಆಡುಭಾಷೆಯಲ್ಲಾದರೂ ಪ್ರತಿ ೨೦೦ ವರ್ಷಗಳ ಅವಧಿಯಲ್ಲಿ ಕ್ರಮವಾದ ಬದಲಾವಣೆ ಇರುವುದು ವಿದಿತವೇ. ತಮಿಳಿನ ಉದಾಹರಣೆ ತೆಗೆದುಕೊಂಡರೆ ಆಧುನಿಕ ತಮಿಳು ಭಾಷೆಗೂ ಸಂಗಕಾಲದ ತಮಿಳು ಭಾಷೆಗೂ ವಿಶೇಷವಾದ ವ್ಯತ್ಯಾಸ ಕಾಣುತ್ತದೆ. ಪ್ರಾಚೀನವಾದ ಇಂಗ್ಲಿಷ್ ಭಾಷೆಗೂ ಇಂಗ್ಲೆಂಡಿನಲ್ಲಿ ಆಡಲ್ಪಡುವ ಆಧುನಿಕ ಇಂಗ್ಲಿಷ್ ಭಾಷೆಗೂ ಇರುವ ಅಜಗಜಾಂತರವು ಸರ್ವರಿಗೂ ವಿದಿತವೇ ಆಗಿದೆ. ಲಂಡನ್ ಪಟ್ಟಣಿಗರ ಸಾಂಪ್ರದಾಯಿಕವಾದ ಭಾಷೆಗೂ ಅಮೆರಿಕನ್ನರ ಆಡುಭಾಷೆಯಾದ ಇಂಗ್ಲಿಷ್‌ಗೂ ಉಚ್ಚರಿಸುವ, ಬರೆವಣಿಗೆಯ ಶೈಲಿಯಲ್ಲಿ ಭಿನ್ನತೆಯಿದೆ. ಒಂದು ಭಾಷೆಯನ್ನು ಉಚ್ಚರಿಸುವ, ಬರೆಯುವ ಶೈಲಿಯು ಕಾಲಾನುಕ್ರಮದಲ್ಲಿ ಸ್ವಲ್ಪಸ್ವಲ್ಪವಾಗಿ ಬದಲಾಗುತ್ತಿರುತ್ತದೆ. ಇದನ್ನೇ ಆಧಾರವಾಗಿಟ್ಟುಕೊಂಡು ಇನ್ನೂರು ವರ್ಷಗಳ ಅವಧಿಯಲ್ಲಿ ಹಿಂದಿನ ಶೈಲಿಯು ಸವೆದು, ಹೊಸ ಶೈಲಿಯು ಆವಿರ್ಭವಿಸಿರುವುದು ಕಂಡುಬರುತ್ತದೆ. ಈ ಬದಲಾವಣೆಯ ಕಾಲಮಾನವನ್ನು ಹಿಮ್ಮೊಗವಾಗಿ ಎಣಿಸಿ ನಾವು ವೇದಗಳು ಕ್ರಿ.ಪೂ. ೧೫೦೦ರಲ್ಲಿ ಗ್ರಂಥಸ್ಥವಾಗಿರ ಬೇಕೆಂದು ಭಾವಿಸುತ್ತೇನೆ.

ಮಠಗಳಲ್ಲಿಯೂ ದೇವಾಲಯಗಳಲ್ಲಿಯೂ ನೂರಾರು ಜನರ ಸಂತರ್ಪಣೆಗಾಗಿ ದೊಡ್ಡ ದೊಡ್ಡ ತಪ್ಪಲೆ, ಕೊಳಗಗಳು ಬಳಕೆಯಾಗುತ್ತವೆ. ದಿನವೂ ಉಪಯೋಗಿಸಿ, ಬೆಳಗುವುದರಿಂದ ಅವು ಕ್ರಮೇಣ ಸವೆದು ಸರಿಪಡಿಸಬೇಕಾಗುತ್ತದೆ ಅಥವಾ ಬದಲಾಯಿಸಬೇಕಾಗುತ್ತವೆ. ಇನ್ನೊಂದು ಕಡೆ ಶ್ರೀಮಂತರ ಮನೆಗಳಲ್ಲಿ ಅಂತಹ ಸಂದರ್ಭಗಳಲ್ಲಿ ಮಾತ್ರ ಬಳಸಲ್ಪಟ್ಟು, ಶುದ್ಧಪಡಿಸಿ ಅಟ್ಟಗಳಲ್ಲಿ ತೆಗೆದಿರಿಸುವಂತಹ ಪಾತ್ರಗಳಿರುತ್ತವೆ. ಮದುವೆ, ಮುಂಜಿ ಸಂತರ್ಪಣೆಗಳ ವಿನಾ ಅವು ಬಳಕೆಯಾಗುವುದಿಲ್ಲ. ಅವು ಸವೆದು ತೂತು ಬೀಳದೆ ಬಲವಾಗಿಯೇ ಇರುತ್ತದೆ. ಬಹಳ ಹಿಂದೆ ನೀರಿಗೆ ನಲ್ಲಿಗಳು ಇರದಿದ್ದಾಗ ಊರ ಜನ ರೈಲುನಿಲ್ದಾಣಗಳ ಧರ್ಮಸತ್ರಗಳ ಬಾವಿಗಳಿಂದ ನೀರು ಸೇದಿ ತಂದುಕೊಳ್ಳುತ್ತಿದ್ದರು. ಊರೊಟ್ಟಿನ ಜನರ ಬಳಕೆಯಿಂದ ಬಾವಿಯ ಕಟ್ಟೆಗಳ ಮೇಲೂ ಪಕ್ಕಗಳಲ್ಲಿಯೂ ತಗ್ಗುಗಳು, ಗುರುತುಗಳು ಏರ್ಪಡುತ್ತಿದ್ದವು. ಆದರೆ ನಲ್ಲಿಗಾಗಿ ಕಟ್ಟಲಾದ ಕಟ್ಟೆಗಳು ಮಾತ್ರ ಒಂದೇ ರೀತಿಯಾಗಿ ಕಟ್ಟಿದಾಗ ಹೇಗೋ ಹಾಗೆಯೇ ಮುಕ್ಕಾಗದೆ ಇರುತ್ತಿದ್ದವು.



ಇದರಿಂದ ಬಳಕೆಯಾಗುತ್ತಲೇ ಇರುವುದು ಯಾವುದೋ ಅದು ತನ್ನ ಮೊದಲಿನ ರೂಪರಂಗುಗಳನ್ನು ಕಳೆದುಕೊಳ್ಳುತ್ತದೆ ಎಂಬುದಾಗಿ ಗೊತ್ತಾಗುತ್ತದೆ. ಅಲ್ಲದೆ ಯಾವುದು ಎಚ್ಚರಿಕೆಯಿಂದ, ಅಪರೂಪವಾಗಿ ಬಳಕೆಯಾಗುತ್ತ ಸಿಕ್ಕಸಿಕ್ಕವರ ಕೈ ಬಾಯಿಗೆ ಬೀಳಲಿಲ್ಲವೋ ಅದು ಮೊದಲಿದ್ದಂತೆಯೇ ಇರುತ್ತೆಂದು ಸೂಚಿತವಾಯಿತು. ಭಾಷೆಯ ವಿಚಾರಕ್ಕೂ ಹೀಗೆಯೇ ನಿಜವಾಗಿ ನಡೆಯುವುದು. ಇಂಗ್ಲಿಷ್, ಹಿಂದಿ, ತಮಿಳು ಮುಂತಾದ ಯಾವುದೇ ಭಾಷೆಯಾಗಲಿ ಶತಮಾನಗಳ ಕಾಲ ನಿತ್ಯೋಪಯೋಗಿಯಾದರೆ, ಎಲ್ಲ ಸಂದರ್ಭಗಲ್ಲಿಯೂ ಬಳಕೆಯಾಗಿ ಎಳೆದಾಡಲ್ಪಟ್ಟರೆ ಅದರ ಶೈಲಿ ಹಾಗೂ ಸ್ವರೂಪಗಳಲ್ಲಿ ಸವೆತವೂ ವಿರೂಪವೂ ಕಂಡುಬರುವುದು ಸಹಜವೇ ಸರಿ.

ಅತಿಪ್ರಾಚೀನ ಕಾಲದಲ್ಲಿ ಹೇಗಿದ್ದಿತೋ ಹಾಗೆಯೇ ವೇದಗಳ ಭಾಷೆ ಇಂದಿಗೂ ಉಳಿದಿದೆ. ಭಾಷೆಯ ಆಕಾರದಲ್ಲಿಯಾಗಲೀ ಲಕ್ಷಣದಲ್ಲಿಯಾಗಲೀ ಏನೇನೂ ವ್ಯತ್ಯಾಸವಿಲ್ಲ. ಭಾಷೆ ಮತ್ತು ಪದಗಳಲ್ಲಿ ವಿರೂಪವಾಗಲೀ ಶಿಥಿಲತೆಯಾಗಲೀ ಕಾಣದು. ಇದಕ್ಕೆ ಕಾರಣ ವೇದಪಠಣವನ್ನು ಎಚ್ಚರಿಕೆಯಿಂದ ಮಾಡಿ, ರಕ್ಷಿಸಿ, ಅದರ ಆದಿಯ ನಿರ್ಮಲತೆಗೆ ಏನೇನೂ ಧಕ್ಕೆಯಾಗದಂತೆ ಕಾಪಾಡಿದ್ದೇ ಆಗಿದೆ. ಈಗಾಗಲೇ ತಿಳಿಸಿದಂತಹ ಹಲವು ಉಪಾಯಗಳ ಮೂಲಕ ಅದರ ಪರಿಶುದ್ಧತೆಯನ್ನು ಕಾಪಾಡಿದ್ದಾಗಿದೆ. ಈಗ ನೀನೇ ಕಾಣುವಂತೆ ವೇದಗಳ ಕಾಲನಿರ್ಣಯಕ್ಕೆ ಉಪಾಯಗಳು ನಿರುಪಯುಕ್ತವಾದವು. ವೇದಗಳಿಗೆ ಆದಿಯೂ ಕಾಣಲಿಲ್ಲ. ಕಾಲಪ್ರವಾಹದಲ್ಲಿ ಅದರ ಬದಲಾವಣೆಯ ಕುರುಹೂ ಇಲ್ಲ. ವೇದ ಸೃಷ್ಟಿಯ ರಹಸ್ಯವೂ ಪ್ರಕಟವಾಗದೆ ಹೋಯಿತು.

'ವಿದ್' ಎಂಬ ಧಾತುವಿನಿಂದ ವೇದ ಶಬ್ದವು ಉಂಟಾಗಿದೆ, ತಿಳಿಯುವುದು ಎಂದು ಆ ಶಬ್ದಕ್ಕೆ ಅರ್ಥ. ವೇದಗಳು ಜ್ಞಾನದ ಸಾಕ್ಷಾತ್ ರೂಪ. ಅವು ಸತ್ಯಗಳ ಸಮೂಹ. ಸತ್ಯವು ಮಾನವನಿರ್ಮಿತವಲ್ಲ. ಅತಿ ಪ್ರಾಚೀನ ಯುಗದಿಂದಲೂ ಅದು ಉಳಿದಿದೆ. ಎಂದಿಗೂ ಉಳಿದೇ ಇರುತ್ತದೆ. ಇದುವರೆಗೆ ಎಲ್ಲರೂ ಸಾಧಿಸಿದ್ದೇನೆಂದರೆ ಸತ್ಯವನ್ನರಿಯಲು ಯತ್ನಮಾಡಿದುದು, ಅದನ್ನು ಗ್ರಹಿಸುವುದು, ಅರ್ಥಮಾಡಿಕೊಳ್ಳುವುದು. ವೇದಗಳು ಸತ್ಯಗಳನ್ನು ಪಠಿಸಿ, ಇತರರಿಗೆ ತಲುಪಿಸುವುದು. ಪ್ರಾಚೀನ ಕಾಲದ ಮಹರ್ಷಿಗಳು ತಮ್ಮ ಜ್ಞಾನದೃಷ್ಟಿಯಿಂದ ಈ ಸತ್ಯಗಳನ್ನು ಕಂಡುಕೊಂಡರು. ಅವರನ್ನು ಮಂತ್ರದ್ರಷ್ಟಾರರೆನ್ನುತ್ತೇವೆ. ಅವರ ಒಳಗಣ್ಣಿಗೆ ಹೊಳೆದ ಸತ್ಯಗಳು ಇವು. ಅವರು ಆತ್ಮಜ್ಞಾನಿಗಳಾದ ಮಹಾತಪಸ್ವಿಗಳಾದ್ದರಿಂದ ತಮ್ಮ ಚೇತನವನ್ನು ವಿಶ್ವಾತ್ಮದಲ್ಲಿ ನೆಲೆಯಾಗುವಂತೆ ಮಾಡಿ, ಅಲ್ಲಿ ಸರ್ವಕಾಲದಲ್ಲಿಯೂ ಪ್ರಕಟವಾಗಿಯೇ ಇರುವ ಸನಾತನ ಸತ್ಯಗಳನ್ನು ಗ್ರಹಿಸಿ, ಅಲ್ಲಿನ ದಿವ್ಯಸ್ರೋತವನ್ನು ಗ್ರಹಿಸಿ ಯೋಗಸೂತ್ರಗಳಲ್ಲಿ ತಿಳಿಸಿದ್ದಾರೆ. ಅಲ್ಲಿಂದ ಅವರು ಹಲವು ವೇದಗಳ

ಮುಖಾಂತರ ಪ್ರತಿಪಾದಿಸಿದ್ದಾರೆ. ವೇದಗಳ ಹಲವು ಭಾಗಗಳಲ್ಲಿ ಅವನ್ನು ರಚಿಸಿದ ಋಷಿಗಳ ಹೆಸರುಗಳು ಕಂಡುಬರುತ್ತವೆ. ಅವರೇ ಅವನ್ನು ರಚಿಸಿದವರು ಎಂಬುದಕ್ಕಾಗಿಯಲ್ಲ, ಅವರು ಕಂಡು ಗ್ರಹಿಸಿದ ಸತ್ಯಗಳು ಅಲ್ಲಿವೆ ಎಂಬ ಕಾರಣದಿಂದ ಮಹರ್ಷಿಗಳ ಹೆಸರು ಉಕ್ತವಾಗಿವೆ. ಸತ್ಯಗಳು ಮತ್ತು ಆಲೋಚನೆಗಳು ಮಾತ್ರವಲ್ಲದೆ, ಭಾಷೆ, ಶಬ್ದಗಳು ಅದೇ ಬಗೆಯ ಕ್ರಮ ಪ್ರಕಾರಗಳಲ್ಲಿ ಉಚ್ಚಾರಣಾ ರೂಪದಲ್ಲಿಯೇ ಅವರಿಂದ ಗ್ರಹಿಸಲಾದವು.

ವೈದಿಕ ವಾಙ್ಮಯದ ಈ ಕಾಣ್ಕೆ ಮತ್ತು ಗ್ರಹಿಸುವಿಕೆಯು ನಮ್ಮ ರೇಡಿಯೋ ಯಂತ್ರದ ಕೆಲಸವನ್ನು ವಿಶೇಷವಾಗಿ ಹೋಲುತ್ತದೆ. ಧ್ವನಿಗ್ರಹಣ ಯಂತ್ರವು ಆಗಸದಲ್ಲಿ ಅಲೆಯುವ ವಿದ್ಯುತ್ಕಾಂತೀಯ ಅಲೆಗಳ ಮೇಲೆ ಏರಿ ಬರುವ ಧ್ವನಿಯನ್ನು ಸ್ವೀಕರಿಸಿ ಪ್ರಸರಿಸುವಂತೆ, ವೇದಕಾಲದ ಋಷಿಗಳ ಮನಸ್ಸು ಸಹ ಯೋಗಸಾಧನೆಯಿಂದ ಸಾಮಾನ್ಯವಾದ ಭೌತಿಕವಾದ ಕಿವಿಗಳಿಗೆ ಗ್ರಹಿಕೆಯಾಗಲಾರದ ಧ್ವನಿಗಳನ್ನು, ಸಾರ್ವಕಾಲಿಕವಾದ ಸಸ್ಯವನ್ನು ಹೇಳುವ ಧ್ವನಿಗಳನ್ನು ಗ್ರಹಿಸುತ್ತದೆ. ಇದೇ ರೀತಿಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ, ತನ್ನ ವಿಶ್ವರೂಪವನ್ನು ಗ್ರಹಿಸಲು ಶಕ್ತನಾಗುವಂತೆ ದಿವ್ಯಚಕ್ಷುಗಳನ್ನು ದಯಪಾಲಿಸಿದ್ದನು. ತಪಶ್ಶಕ್ತಿಯಿಂದ ಇಂತಹ ಸಾಮರ್ಥ್ಯವನ್ನು ಪಡೆಯುವುದು ಸಾಧ್ಯವೆಂಬ ವಿಚಾರವನ್ನು ಯೋಗಶಾಸ್ತ್ರಗಳಲ್ಲಿ ತಿಳಿಸಲಾಗಿದೆ. ಇದನ್ನು ಅವರು 'ಸ್ರೋತ್ರಾಕಾಶ ಸಂಯಮ'ವೆಂದು ಕರೆದಿದ್ದಾರೆ.

* * * *



## ೪. ವೇದಗಳ ಸಾರ

ಮೋಕ್ಷಸಾಧನೆಗೆ ಮಾನವರು ಪಡೆಯಬೇಕಾದ ಜ್ಞಾನವನ್ನೂ, ನಡೆದುಕೊಳ್ಳಬೇಕಾದ ರೀತಿ, ಮಾಡಬೇಕಾದ ಸಾಧನೆಗಳನ್ನು ಕುರಿತು ಹೇಳುವುದು ವೇದಗಳ ಉದ್ದೇಶ. ಮನುಷ್ಯರು ಸ್ವಸ್ವರೂಪ ಜ್ಞಾನ ಅಥವಾ ಆತ್ಮಜ್ಞಾನವನ್ನು ಪಡೆಯುವುದರಿಂದ ತಮಗೆ ಜೀವನದಲ್ಲಿ ಒದಗಿಬರುವ ಕಷ್ಟ ಮತ್ತು ದುಃಖಗಳನ್ನು ನಿವಾರಿಸಿಕೊಳ್ಳಬಹುದು. ಇದು ದೈವಜ್ಞಾನ. ಇದನ್ನು ತಿಳಿಸುವುದು ನಮ್ಮ ಧರ್ಮದ ಪ್ರಧನೋದ್ದೇಶ. ಅರಸಿ ಬರುವ ಮನುಷ್ಯರ ಶಕ್ತಿ ಮತ್ತು ತಿಳುವಳಿಕೆಗೆ ಅನುಸಾರವಾಗಿ ನಮ್ಮ ಧರ್ಮಗ್ರಂಥಗಳು ಜ್ಞಾನಪ್ರಸಾರ ಮಾಡುತ್ತವೆ. ಹೀಗೆ ಜ್ಞಾನೋಪದೇಶ ಮಾಡುವ ಗ್ರಂಥಗಳನ್ನು ವಿದ್ಯಾಸ್ಥಾನಗಳೆಂದೂ ಕರೆಯುತ್ತಾರೆ. ಒಂದು ಶ್ಲೋಕದಲ್ಲಿ ಹೀಗಿದೆ:

**"ಅಂಗಾನಿ ವೇದಶ್ಚತ್ವಾರಃ ಮೀಮಾಂಸಾ ನ್ಯಾಯ ವಿಸ್ತಾರಃ**
**ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾಃ ಧ್ಯೇತಾಶ್ಚತುರ್ದಶ॥**

ಇನ್ನೊಂದು ಪದ್ಯದಲ್ಲಿ

**ಪುರಾಣಾ ನ್ಯಾಯಮೀಮಾಂಸಾ ಧರ್ಮಶಾಸ್ತ್ರಾಂಗಮಿಶ್ರಿತಾಃ।**
**ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ವ ಚ ಚತುರ್ದಶಾ॥**

ಕೆಳಕಂಡ ಹದಿನಾಲ್ಕು ಬಗೆಯ ಪವಿತ್ರ ಗ್ರಂಥಗಳು ವಿದ್ಯಾಸ್ಥಾನಗಳು.
೧ರಿಂದ ೪ರವರೆಗೆ ನಾಲ್ಕು ವೇದಗಳು
೫ರಿಂದ ೧೦ರವರೆಗೆ ಆರು ವೇದಾಂಗಗಳು
೧೧ ಮೀಮಾಂಸಾ
೧೨ ನ್ಯಾಯ
೧೩ ಪುರಾಣಗಳು, ಮತ್ತು
೧೪ನೆಯದು ಧರ್ಮಶಾಸ್ತ್ರಗಳು.

ತಮಿಳಿನಲ್ಲಿರುವ 'ತೇವಾರಂ'ಗಳು ಭಗವಂತನನ್ನು ಪ್ರಶಂಸೆ ಮಾಡುತ್ತ, ಆತನು ಚತುರ್ವೇದಗಳಾಗಿ ಮತ್ತು ಅದರ ಆರು ಅಂಗಗಳಾಗಿ ಪರಿಣಮಿಸಿದ್ದಾನೆ ಎಂದು ಹೇಳುತ್ತವೆ. (ವೇದಮೊಡು ಆರಂಗಂ ಆಯಿನಾನೈ)

ಈ ಪವಿತ್ರ ಗ್ರಂಥಗಳಲ್ಲಿ ಬಹಳ ಮುಖ್ಯವಾದವು ವೇದಗಳು. ಅವುಗಳನ್ನು ಅನಂತವೆಂದು ತಿಳಿದಿದ್ದೇವೆ (ಅನಂತಾವೈ ವೇದಾಃ). ಐದು ಸಾವಿರ ವರ್ಷಗಳಿಗೂ ಹಿಂದೆ, ದ್ವಾಪರಯುಗವು ಮುಗಿದು ಕಲಿಯುಗವು ಪ್ರಾರಂಭಿಸುವಾಗ ವ್ಯಾಸ ಮಹರ್ಷಿಗಳು ವೇದಗಳನ್ನು ವಿಂಗಡಿಸಿ ನಾಲ್ಕು ಭಾಗವಾಗಿ ರೂಪಿಸಿದರು. ನಮ್ಮ ಧರ್ಮಗ್ರಂಥಗಳನ್ನು ರಚಿಸಿದ ಮಹಾಪುರುಷರನ್ನು ಕುರಿತು ನಮಗೆ ಯಾವ ವಿಷಯವೂ ವಿವರವೂ ತಿಳಿದಿಲ್ಲ ಎಂಬುದು ಎಲ್ಲರೂ ಗಮನಿಸಬೇಕಾದ ವಿಷಯ. ಅವರೆಲ್ಲರಿಗೂ ಅವರು ರಚಿಸಿದ ಕೃತಿಗಳು ಮುಖ್ಯವಾದುವೇ ಹೊರತು ಅವರ ಸ್ವಂತ ವಿಷಯವಲ್ಲ. 'ವ್ಯಾಸ' ಎಂಬ ಶಬ್ದದ ಅರ್ಥ ಸಂಕಲನಕಾರ ಎಂಬುದು. ವೇದಗಳು ಬಹು ವಿಸ್ತಾರವೂ ಬಹುಮುಖವಾದ ಸಂಗತಿಗಳಿಂದ ಕೂಡಿದ್ದೂ ಆಗಿರುವುದರಿಂದ, ಮಾನವರಿಗೆ ತಮ್ಮ ಜೀವಿತಕಾಲದಲ್ಲಿ ಅವನ್ನು ಸಮಪೂರ್ಣವಾಗಿ ತಿಳಿದು ಕಲಿಯುವುದು ಅಸಾಧ್ಯವಾಗಿರುತ್ತದೆ. ಆದ್ದರಿಂದ ವ್ಯಾಸ ಮಹರ್ಷಿಯು ಅವನ್ನು ವಿಷಯಾನುಗುಣವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಿ, ಕೊನೆಯಪಕ್ಷ ಒಂದು ಭಾಗವನ್ನಾದರೂ ಸಮರ್ಪಕವಾಗಿ ಕಲಿಯಲಿ, ಅದರಲ್ಲಿ ಪರಿಣತನಾಗಲಿ ಎಂದು ನಿಶ್ಚಯಿಸಿದನು. ಪ್ರತಿಯೊಂದು ಶಾಖೆಯೂ ಸ್ವಸಂಪೂರ್ಣವಾಗಿರುತ್ತ ವ್ಯಾಸಂಗ ಮಾಡುವವರ ಜ್ಞಾನ ಮತ್ತು ಮುಕ್ತಿ ಸಾಧನೆಗೆ ಪೂರಕವಾಗಿರಲಿ ಎಂದು ವ್ಯವಸ್ಥೆ ಮಾಡಿದನು. ಆತನ ನಾಲ್ವರು ಶಿಷ್ಯರಾದ ಪೈಲ, ವೈಶಂಪಾಯನ, ಜೈಮಿನಿ ಮತ್ತು ಸುಮಂತುಗಳು ಆತನ ನೇತೃತ್ವದಲ್ಲಿ ಋಕ್, ಯಜುರ್, ಸಾಮ ಮತ್ತು ಅಥರ್ವಗಳೆಂಬ ವೇದಗಳ ನಾಲ್ಕು ಶಾಖೆಗಳಲ್ಲಿ ಪರಿಣತರಾದರು. ಪ್ರತಿಯೊಂದು ವೇದವನ್ನೂ ಎರಡು ಭಾಗವಾಗಿ ವಿಂಗಡಿಸುತ್ತಾರೆ. ಸಂಹಿತ ಅಥವಾ ಮಂತ್ರ ಮತ್ತು ಬ್ರಾಹ್ಮಣಗಳು ಎಂಬುದಾಗಿ ಎರಡು ಭಾಗಗಳು. ಮಂತ್ರ ಎಂಬ ಶಬ್ದವು ಮನ್ ಎಂಬ ಧಾತುವಿನಿಂದ ಉಂಟಾಗಿದೆ. ಮಂತ್ರವನ್ನು ಧ್ಯಾನಿಸಿ ಅಲ್ಲಿರುವ ಜ್ಞಾನವನ್ನು ವಿವೇಚಿಸಿ ಪಡೆಯಬೇಕು. ಯಜ್ಞ ಮಾಡುವಾಗ ಮಂತ್ರಗಳನ್ನು ಉಚ್ಚರಿಸಿ ಅದರೊಡನೆ ಆಹುತಿಗಳನ್ನು ಕೊಡಬೇಕಾಗುವುದು.

ಋಗ್ವೇದವು ಬಹುಮಟ್ಟಿಗೆ ಕಾವ್ಯರೂಪದಲ್ಲಿದೆ. ಯಜುರ್ವೇದವು ಗದ್ಯರೂಪದಲ್ಲಿರುತ್ತೆ; ಕಾವ್ಯಭಾಗಗಳು ಕಡಿಮೆ. ಪೂಜೆ ಮತ್ತು ಆಹುತಿಗಳ ಅರ್ಪಣೆಯ ಸಮಯದಲ್ಲಿ ಉಚ್ಚರಿಸಲು ತಕ್ಕುದಾಗಿದೆ. ಯಜುರ್ವೇದದಲ್ಲಿ ಎಡು ಶಾಖೆಗಳಿವೆ. ಅವನ್ನು ಕೃಷ್ಣ ಯಜುರ್ವೇದ ಮತ್ತು ಶುಕ್ಲ ಯಜುರ್ವೇದಗಳೆಂದು ಕರೆಯುತ್ತಾರೆ. ಮೊದಲನೆಯದಾದ ಕೃಷ್ಣ ಯಜುರ್ವೇದವನ್ನು ತೈತ್ತಿರೀಯ ಸಂಹಿತೆಯವರು ಅನುಷ್ಠಾನ ಮಾಡುವರು. ಎರಡನೆಯದಾದ ಶುಕ್ಲ ಯಜುರ್ವೇದವನ್ನು ವಾಜಸನೇಯಿಗಳು ಬಳಕೆ ಮಾಡುವರು. ಸಾಮವೇದದ ಬಹುಭಾಗವನ್ನು ಅಂದರೆ ಸುಮಾರು ಎಪ್ಪತ್ತೈದು ಪದ್ಯಗಳನ್ನು ಬಿಟ್ಟು ಉಳಿದುವೆಲ್ಲ– ಋಗ್ವೇದದಿಂದಲೇ



ತೆಗೆದುಕೊಳ್ಳಲಾಗಿದೆ. ಇವನ್ನು ಸೋಮಯಜ್ಞದಲ್ಲಿ ಬಳಕೆ ಮಾಡುತ್ತಾರೆ. ಯಜ್ಞದ ಸಮಯದಲ್ಲಿ ಇವನ್ನು ರಾಗವಾಗಿ ಹಾಡುವರು. ಆದ್ದರಿಂದಲೇ ಇವನ್ನು ಪ್ರಾರ್ಥನೆಯ ವೇದ ಅಥವಾ ಪ್ರಾರ್ಥನಾ ಶ್ಲೋಕಗಳೆನ್ನುವರು. ಇವನ್ನೇ ಸಾಮಗಾನವೆನ್ನುವರು. ಇವು ಮೂರು ವೇದಗಳನ್ನು ಅಂದರೆ ಋಗ್, ಯಜುರ್ ಮತ್ತು ಸಾಮಗಳನ್ನು ತ್ರಯೋ ಅಂದರೆ ಮೂರು ವೇದಗಳ ಸಮೂಹವೆಂದು ಕರೆಯುವುದುಂಟು. ಅಥರ್ವವು ನಿಗೂಢವಾದ ಐಂದ್ರಜಾಲಿಕ ಮಂತ್ರಗಳಿಂದ ಕೂಡಿಗೆ. ಇವು ರಹಸ್ಯವಾದ ಶಕ್ತಿ ಸಾಧನೆಗೆಂದು ಮೀಸಲಾಗಿವೆ.

ಬ್ರಾಹ್ಮಣಗಳಲ್ಲಿ ಯಜ್ಞಗಳನ್ನು ಮಾಡಬೇಕಾದ ಕ್ರಮವನ್ನು ತಿಳಿಸಿದ್ದಾರೆ ಮತ್ತು ಪ್ರತಿಯೊಂದು ಶಬ್ದ, ಮಂತ್ರ ಮತ್ತು ಸೂಕ್ತಗಳ ವಿವರಣೆಯನ್ನು ಕೊಟ್ಟಿರುತ್ತಾರೆ. ಅಂದರೆ ಕ್ಲಿಷ್ಟ ಪದಗಳ ವಿವರಣೆ ಇರುತ್ತದೆ. ಪ್ರತಿಯೊಂದು ಶ್ಲೋಕ ಮತ್ತು ಅದನ್ನು ಉಚ್ಚರಿಸುವಾಗ ಕೊಡಬೇಕಾದ ಆಹುತಿ ಇವನ್ನು ತಿಳಿಸುತ್ತದೆ ಮತ್ತು ಅವೆರಡರ ನಡುವಿನ ಸಂಬಂಧ ವಿಶೇಷವನ್ನು ಸೂಚಿಸುತ್ತದೆ. ಅವುಗಳಲ್ಲಿಯೂ ಎರಡು ಬಗೆಯಿದೆ. ಆಚರಣೆಯ ವಿಧಿ ಅಥವಾ ವಿಧಾನವನ್ನು ತಿಳಿಸುವುದು ಒಂದಾದರೆ, ಅರ್ಥವಾದ ಇನ್ನೊಂದು. ಅರ್ಥವಾದವೆಂದರೆ ವಿವರಣೆ.

ಬ್ರಾಹ್ಮಣಗಳ ಕೊನೆಯ ಭಾಗವು, ವೇದಗಳಲ್ಲಿನ ಆರಣ್ಯಕವೆಂಬ ಭಾಗವನ್ನು ಒಳಗೊಂಡಿದೆ. ಅವುಗಳಲ್ಲಿ ಸುಪ್ರಸಿದ್ಧವಾದ ಕೆಲವು ಉಪನಿಷತ್ತುಗಳು ಸೇರಿವೆ. ಹೆಸರೇ ಸೂಚಿಸುವಂತೆ ಕಾಡಿನ ಪ್ರಬಂಧಗಳು. ವಾನಪ್ರಸ್ಥರಾಗಿರುವ ಸಾಧು ಸಜ್ಜನರನ್ನು ಉದ್ದೇಶಿಸಿ ಅವನ್ನು ರಚಿಸಲಾಗಿದೆ. ಅಲ್ಲಿ ಪ್ರತಿಪಾದಿಸಲಾಗಿರುವ ಅತ್ಯಂತ ಪವಿತ್ರವಾದ ವಿಚಾರಗಳನ್ನು ಕಾಡಿನ ಏಕಾಂತದಲ್ಲಿ ಮನನ ಮಾಡತಕ್ಕದ್ದು. ಆರಣ್ಯಕಗಳೂ ಬ್ರಾಹ್ಮಣಗಳ ಒಂದು ಭಾಗವೇ ಆಗಿರುವುದರಿಂದ ವೇದಗಳಲ್ಲಿ ಎರಡು ಗುಂಪಿದೆ ಎಂದು ತೀರ್ಮಾನಿಸಬಹುದು. ಸಂಹಿತೆಗಳು ಒಂದು ಭಾಗವಾದರೆ, ಬ್ರಾಹ್ಮಣಗಳು ಮತ್ತೊಂದು.

ಉಪನಿಷತ್ತುಗಳು ಅಧ್ಯಾತ್ಮ ಜ್ಞಾನವನ್ನು ಕುರಿತಾದದ್ದು. ಅವನ್ನು ಪವಿತ್ರ ಗ್ರಂಥಗಳ ಜ್ಞಾನಕಾಂಡವೆನ್ನಬಹುದು. ಇವು ಮನುಷ್ಯ, ಪ್ರಕೃತಿ ಮತ್ತು ದೈವಗಳ ನಡುವಿನ ಸಂಬಂಧವನ್ನು ಕುರಿತ ಪ್ರೌಢಪ್ರಬಂಧಗಳೆನ್ನಬಹುದು. ಸೃಷ್ಟಿಯ ಯಥಾರ್ಥತೆಯ ಪರಮ ಸ್ವರೂಪವನ್ನು ಅದರೊಡನೆ ಉಳಿದ ಎಲ್ಲದರ ಸಂಬಂಧವನ್ನು ತಿಳಿಸುವುದು ಅವುಗಳ ಉದ್ದೇಶ ಎಂದು ಬೇಕಾದರೂ ಹೇಳಬಹುದು. ಅವು ಮಾನಸಿಕ ಶಿಕ್ಷಣವನ್ನೂ ವರ್ಣಿಸಿ ಒದಗಿಸುವುದರಿಂದ, ಈ ಮೂಲಕ ಮಾನವರು ಮುಕ್ತಿದಾಯಕವಾದ ಪರಮಜ್ಞಾನವನ್ನು ಸಾಧಿಸಿ ಪುನರ್ಜನ್ಮಗಳ ಕೋಟಲೆಯಿಂದ ಪಾರಾಗಬಹುದು.

* * * *

# ೫. ಅಧ್ಯಾತ್ಮದ ಹಾದಿ

**ಅ. ಕರ್ಮಾನುಷ್ಠಾನ**

ಪ್ರತಿಯೊಬ್ಬ ಹಿಂದುವೂ ಅನುಸರಿಸಬೇಕಾದ ಅಧ್ಯಾತ್ಮದ ಹಾದಿಯನ್ನು ಪಂಚಸೂತ್ರಗಳಲ್ಲಿ ಸಂಕ್ಷೇಪವಾಗಿ ತಿಳಿಸಿದೆ. ಅದೇ ಶ್ರೀ ಶಂಕರಾಚಾರ್ಯರ ಉಪದೇಶ ಪಂಚಕವೆಂಬ ಕೃತಿ. ಅದು ನಮ್ಮ ಪರಮಾಚಾರ್ಯರ ತತ್ತ್ವಸಿದ್ಧಾಂತ. ಅದರ ಅನುಸರಣೆ-ಅನುಷ್ಠಾನಗಳಿಂದ ಜೀವಿಯು ತನ್ನ ಜನ್ಮಾಂತರ ಯಾತ್ರೆಯನ್ನು ಕೊನೆಗೊಳಿಸಿ, ಅನಾದಿಯಾದ ಅವಿದ್ಯೆಯಿಂದ ಮುಕ್ತನಾಗಿ ಪರಿಪೂರ್ಣತೆಯನ್ನು ಪಡೆದು ಮುಕ್ತನಾಗುತ್ತಾನೆ. ಪ್ರತಿಯೊಬ್ಬ ಮನುಷ್ಯನಿಗೂ ಪುನರ್ಜನ್ಮದ ಕೋಟಲೆಯಿಂದ ಪಾರಾಗಲು ದೊರಕುವ ಸದವಕಾಶವೇ ಅವನ ಇಂದಿನ ಜನ್ಮ. ಕರ್ಮಸೂತ್ರದ ಹಿಡಿತದಿಂದ ಪಾರಾಗಿ ಆತನು ಇನ್ನೊಂದು ಶರೀರವನ್ನು ಧಾರಣೆ ಮಾಡದಂತೆ ಆಗಬೇಕಾದರೆ ಕರ್ಮಶೇಷವನ್ನು ಆತನು ಕರಗಿಸಿ, ಸುಟ್ಟು ಇಹಜೀವನದಲ್ಲಿ ಮುಕ್ತಿಯನ್ನು ಪಡೆಯಬೇಕು. ಪ್ರತಿಯೊಬ್ಬರೂ ಸಾಧಿಸಬೇಕಾದ್ದು ಈ ಫಲವನ್ನೇ ಎಂಬುದು ಆಚಾರ್ಯರ ಉಪದೇಶ.

ಆಚಾರ್ಯ ಶಂಕರರು ಜನ್ಮಾಂತರ ನಿವಾರಣೆಯ ಉದ್ದೇಶದಿಂದ ಪ್ರತಿಯೊಬ್ಬರೂ ವೇದವನ್ನನುಸರಿಸಿ, ಶಿಸ್ತಿಗೆ ಒಳಪಟ್ಟು ಜೀವಿಸಬೇಕೆಂದು ಬೋಧಿಸಿದ್ದಾರೆ. ಕರ್ತವ್ಯ, ಪೂಜೆ, ವಿವೇಚನೆಗಳಿಂದ ಕೂಡಿ, ಕರ್ಮ, ಭಕ್ತಿ, ಜ್ಞಾನಗಳನ್ನೊಳಗೊಂಡ ಜೀವನ ನಡೆಸಬೇಕು ಎಂಬುದು ಅವರ ಅಪ್ಪಣೆ. ಅಧ್ಯಾತ್ಮ ಸಾಧನೆಯ ಉದ್ದೇಶವುಳ್ಳವರು, ದೃಢ ನಿಶ್ಚಯವುಳ್ಳವರಾಗಿ, ಉನ್ನತವಾದ ನೈತಿಕ ಜೀವನವನ್ನು ಒಳಗೊಳ್ಳಬೇಕು, ಅಲ್ಲದೆ ಧರ್ಮವು ನಿಷಿದ್ಧವೆಂದು ಸೂಚಿಸಿರುವುದನ್ನು ನಿವಾರಿಸತಕ್ಕುದು ಎಂದಿದ್ದಾರೆ. ಅವರು ಆಗಾಗ್ಗೆ ನಮ್ಮ ದೈನಂದಿನ ಕರ್ತವ್ಯಗಳಲ್ಲಿ ಲೋಪದೋಷಗಳಿರಬಾರದೆಂದು ಹೇಳಿದ್ದಾರೆ. ಮಹಾಜ್ಞಾನಿಯೂ, ಸುಪ್ರಸಿದ್ಧ ಮೀಮಾಂಸಕನೂ ಆದ ಕುಮಾರಿಲಭಟ್ಟನು ಹೀಗೆ ಪ್ರಶ್ನಿಸುತ್ತಾನೆ, "ಧರ್ಮವೆಂದರೇನು? ಅದಕ್ಕೆ ಆಧಾರಗಳೇನಿವೆ?" ಎನ್ನುತ್ತ ಸಾಮಾನ್ಯವಾಗಿ ನಮ್ಮ ದೇಶದ ಕಾನೂನು ನಮ್ಮ ಕರ್ತವ್ಯಗಳನ್ನು ನಿರ್ಧರಿಸುತ್ತದೆ. ಅವು ನಮ್ಮ ಧಾರ್ಮಿಕ ಗ್ರಂಥಗಳಿಗೆ ಅನುಸಾರವಾಗಿರುತ್ತವೆ. ಇಂತಹ ಕಾನೂನುಬದ್ಧವಾದ ಶಾಸನಗಳಿಗೆ ಅಧಿಕಾರ ಕೊಟ್ಟವರು ಯಾರು? ಜನರು ಆಯ್ಕೆ ಮಾಡಿದ ಪ್ರತಿನಿಧಿಗಳು ಈ



ನಿಯಮಗಳನ್ನು ರೂಪಿಸಿದ್ದಾರೆ. ಅಷ್ಟೇನೂ ತಿಳಿವಳಿಕೆ ಇಲ್ಲದ, ಉತ್ತಮವಾದ ನೈತಿಕ ಮಟ್ಟಕ್ಕೆ ಒಳಪಡದ ಎಷ್ಟೋ ಜನ ಇಂತಹ ಪ್ರತಿನಿಧಿಗಳ ಆಯ್ಕೆಗೆ ಭಾಜನರಾಗಿದ್ದಾರೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಹಾಗಾಗಿ ಜನಪ್ರತಿನಿಧಿಗಳ ಮಟ್ಟವೂ ಏರುಪೇರಾಗಿರುವುದು. ನಾವೇ ಎಷ್ಟೋ ಬಾರಿ ಕಾಣುವಂತೆ ನಮಗೆ ಕಾನೂನಿನ ಮೂಲಕ ನ್ಯಾಯ ಸಿಗುವುದೇ ಇಲ್ಲ. ಸರಿಯಾಗಿ ಹೇಳುವುದಾದರೆ ಅವು ನ್ಯಾಯಾಲಯಗಳೇ ಅಲ್ಲ. ಕೆಲವು ವೇಳೆ ನಮ್ಮ ನ್ಯಾಯಾಧೀಶರುಗಳೇ ಅಸಹಾಯಕರಾಗಿ ನ್ಯಾಯ ಕೊಡಲಾರದ ಸ್ಥಿತಿಗೆ ಬಂದು, ಕಾನೂನನ್ನು ಮಾರ್ಪಡಿಸಬೇಕೆಂದು ಹೇಳುವುದನ್ನು ಕೇಳುತ್ತೇವೆ.

ಸಾರ್ವಜನಿಕ ನಡವಳಿಕೆಯನ್ನು ರಾಜಶಾಸನಗಳು ಮತ್ತು ಕಾನೂನುಗಳು ನಿಯಂತ್ರಿಸಬಲ್ಲವು. ಆದರೆ ಪ್ರತಿಯೊಬ್ಬ ವ್ಯಕ್ತಿಯ ನೈತಿಕತೆಯ ಪಾಡೇನು? ಆತನು ತನ್ನ ವೈಯಕ್ತಿಕ ಜೀವನದಲ್ಲಿ, ತನ್ನೊಡನೆ ವ್ಯವಹರಿಸುವ ಇತರರೊಡನೆ ನಡೆದುಕೊಳ್ಳಲು ಇರುವ ಮಾನದಂಡಗಳಾವುವು? ನಮ್ಮ ಧರ್ಮವು ವೇದಗಳನ್ನನುಸರಿಸಿ ನಡೆಯಿರಿ ಎನ್ನುತ್ತದೆ. ಏಕೆಂದರೆ ವೇದವೇ ಅಖಿಲ ಧರ್ಮಗಳಿಗೂ ಮೂಲವಾದದ್ದು (ತಾಯಿಬೇರು) ವೇದಗಳು ಅಪೌರುಷೇಯವಾದವು ಅಂದರೆ ಅದನ್ನು ಮನುಷ್ಯನು ರಚನೆ ಮಾಡಿದ್ದಲ್ಲ. ಮಹಾಯೋಗಿಗಳು ತಪೋನಿರತರಾಗಿದ್ದಾಗ ಕಂಡ ಸಾರ್ವಕಾಲಿಕ ಸತ್ಯಗಳೇ ಅವು.

ಒಂದು ವೇಳೆ ಜೀವನದಲ್ಲಿ ವೇದಗಳ ಮೂಲಕ ಮಾರ್ಗದರ್ಶನ ಸಿಗಲಾರದಂತಹ ಸನ್ನಿವೇಶೊದಗಿತು ಎಂದುಕೊಳ್ಳಿ, ಎಷ್ಟೋ ವೇದಗಳು ಕಳೆದೂ ಹೋಗಿವೆ. ಅವು ನಮಗೆ ಮಾರ್ಗದರ್ಶನ ಮಾಡಲಾರದಂತಹ ಸಂದರ್ಭದಲ್ಲಿ, ಮನು, ಯಾಜ್ಞವಲ್ಕ್ಯ ಮತ್ತು ಪರಾಶರ ಮುಂತಾದ ಮುನಿವರ್ಯರು ರಚಿಸಿದ ಸ್ಮೃತಿಗಳನ್ನು ಅನುಸರಿಸಬಹುದು. ಜನರಲ್ಲಿ ರೂಢಮೂಲವಾದ ಒಂದು ತಪ್ಪು ಅಭಿಪ್ರಾಯವಿದೆ. ಅದೆಂದರೆ ಮನುವೇ ಮುಂತಾದವರು ಧರ್ಮಶಾಸ್ತ್ರಗಳನ್ನು ರಚಿಸಿದ್ದಾರೆ ಎಂಬುದು. ಆದರೆ ಹಾಗಿಲ್ಲ. ಅವರು ರಚಿಸಿರುವುದು ಸ್ಮೃತಿಗಳು. ಅಂದರೆ, ಆರ್ಷೇಯವಾಗಿ ಬಂದ ನಿಯಮಗಳು ಧರ್ಮತತ್ತ್ವಗಳನ್ನು ಅವರು ಅಲ್ಲಿ ಸ್ಮರಣೆ ಮಾಡಿಕೊಂಡಿದ್ದಾರೆ. ಅಂತಹ ಸ್ಮೃತಿಗ್ರಂಥಗಳಲ್ಲಿ ನಾವು ಈಗಾಗಲೇ ಕಳೆದುಕೊಂಡಿರುವ ವೇದವೇ ಮುಂತಾದ ಧರ್ಮಗ್ರಂಥಗಳೂ ಸೇರಿರಬಹುದು. ನಮ್ಮ ದೇಶದ ಮಹಾಕವಿಯಾದ ಕಾಳಿದಾಸನು 'ರಘುವಂಶ'ದಲ್ಲಿ ದಿಲೀಪ ಮಹಾರಾಜನು ಕಾಡಿನ ದಾರಿಯಲ್ಲಿ 'ನಂದಿನಿ'ಯನ್ನು ಮೇಯಿಸುತ್ತ ನಡೆದಾಗ, 'ಆತನ ಹಿಂದೆ ಅನತಿದೂರ ಆತನ ರಾಣಿ ಸುದಕ್ಷಿಣಾ, ಸ್ಮೃತಿಯು ಶ್ರುತಿಗಳನ್ನು ಅನುಸರಿಸುವಂತೆ ಹಿಂಬಾಲಿಸುತ್ತಿದ್ದಳು' ಎಂದು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. 'ಶ್ರುತೇರಿವಾರ್ಥಂ ಸ್ಮೃತಿರನ್ವಗಚ್ಛತ್.' ಹೀಗೆ ಮಹಾಕವಿ ಕಾಳಿದಾಸನ ಮಾತಿನ ಆಧಾರದಿಂದ ವೇದಗಳನ್ನು

ಮೂಲಕೃತಿಯಾಗಿ ಪಡೆದು ಸ್ಮೃತಿಗಳು ರಚಿತವಾಗಿವೆ ಎಂಬುದನ್ನು ತಿಳಿಯುತ್ತೇವೆ. ತಪ್ಪು ಮಾಡಿ ತಿದ್ದುಪಡಿ ಮಾಡುವುದಕ್ಕೆ ವೇದಗಳನ್ನೇನು ಮನುಷ್ಯರು ಬರೆದಿದ್ದರೆ.

ಇನ್ನೂ ಕೆಲವು ಇಕ್ಕಟ್ಟಿನ ಸಂದರ್ಭಗಳಲ್ಲಿ ಸ್ಮೃತಿಗಳಲ್ಲಿಯೂ ನಮಗೆ ಮಾರ್ಗದರ್ಶನ ಸಿಗದಿರಬಹುದು. ಆಗ ನಾವು ಮಾಡಬೇಕಾದದ್ದೇನು? ಅಂತಹ ಸಂದರ್ಭಗಳಲ್ಲಿ ಸ್ಮೃತಿಗಳನ್ನು ತಿಳಿದು ಅನುಸಂಧಾನ ಮಾಡಿದವರ ನಡವಳಿಕೆಯನ್ನು ತಿಳಿದು 'ಶೀಲಾಶ್ಚತದ್ವಿಧಾಂ' ಗಮನಿಸಿ ಅವರಂತೆ ನಡೆಯಬಹುದು. ಅವರು ಸಾರ್ವಕಾಲಿಕ ಸತ್ಯವನ್ನು ತಿಳಿದವರಾದ್ದರಿಂದ ಅವರ ನಡೆ–ನುಡಿಗಳಲ್ಲಿ ಶ್ರುತಿಯ ಚೈತನ್ಯವಿರುತ್ತದೆ. ಅಂತಹವರೂ ದೊರಕದಿರುವ ಸಮಯದಲ್ಲಿ ಸಜ್ಜನರ ನಡವಳಿಕೆಯನ್ನು ಕಂಡು ನಾವು ಅನುಸರಣೆ ಮಾಡಬೇಕು (**'ಆಚಾರಾಶ್ಚ ಸಿಂಧೂನಾಂ'**). ಸಾಧುಸಜ್ಜನರ ಹೃದಯ ಪರಿಶುದ್ಧವಾಗಿರುತ್ತದೆ. ಈ ಮೇಲ್ಕಂಡ ಎಲ್ಲ ಮಾರ್ಗದರ್ಶನಗಳೂ ನಮಗೆ ದೊರಕದೆ ಹೋದರೆ, ನಮ್ಮ ನಡವಳಿಕೆ ಸಹಾಯಕವಾಗಿ ನಮ್ಮ ಅಂತರಾತ್ಮದ ವಾಣಿಯೂ ದಾರಿ ತೋರುತ್ತದೆ. (**'ಆತ್ಮನ–ಸ್ತುಷ್ಟಿರೇವ ಚ'**). ಪರಿಶುದ್ಧ ಹೃದಯದಿಂದ ಭಗವಂತನನ್ನು ಬೇಡಿಕೊಳ್ಳಿ, ಆತನೇ ನಿಮಗೆ ದಾರಿ ತೋರುತ್ತಾನೆ. ಕಾಳಿದಾಸನ 'ಅಭಿಜ್ಞಾನ ಶಾಕುಂತಲಂ' ನಾಟಕದಲ್ಲಿ ಕಣ್ವ ಮಹರ್ಷಿಯ ಪುತ್ರಿಯನ್ನು ದುಷ್ಯಂತನು ವರಿಸುವಾಗ ಅವನಿಗೆ ದಾರಿ ತೋರಿದವನು ಅವನ ಅಂತರಾತ್ಮವೇ. ಅವನೇ ಹೇಳುವಂತೆ,

**ಸತಾಂ ಹಿ ಸಂದೇಹಪದೇಷು ವಸ್ತುಷು**
**ಪ್ರಮಾಣಮನ್ತಃಕರಣಪ್ರವೃತ್ತಯಃ।**

'ಸಂದೇಹವುಂಟಾದ ಸಂದರ್ಭದಲ್ಲಿ, ಬಗೆಹರಿಸಲು ಯಾವ ಪ್ರಮಾಣವೂ ದೊರಕದೆ ಹೋದಲ್ಲಿ ಸಜ್ಜನರು ತಮ್ಮ ಅಂತರಾತ್ಮನ ವಾಣಿಯನ್ನನುಸರಿಸುತ್ತಾರೆ.'

ಅಂದಮೇಲೆ ಶೃತಿ, ಸ್ಮೃತಿ ಮತ್ತು ಅದನ್ನನುಸರಿಸಿ ಬಾಳಿದವರ ಉಪದೇಶಗಳನ್ನು ಅನುಸರಿಸಬೇಕು. ಇವು ಅನ್ವಯವಾಗದ ಸಂದರ್ಭದಲ್ಲಿ ಸಜ್ಜನರ ಜೀವನದ ಉದಾಹರಣೆಗಳು, ಅವು ಇಲ್ಲದ ಸಂದರ್ಭದಲ್ಲಿ ಅಂತರ್ವಾಣಿಯನ್ನು ಆಲಿಸಬೇಕು ಎಂದಾಯಿತು. ಅಂತರ್ವಾಣಿಯ ಅನುಸರಣೆಗೆ ಕೊನೆಯಲ್ಲಿ ಅವಕಾಶ ಕೊಡಬೇಕು. ಆದರೆ ಇತ್ತೀಚಿನವರ ನಡವಳಿಕೆ ಎಲ್ಲವೂ ತಲೆಕೆಳಗು ಸಮಾಚಾರವೇ. ಅಂತರ್ವಾಣಿಗೇ ಮೊದಲಮಣೆ. ಪ್ರಾಚೀನವಾದ ವೇದೋಪನಿಷತ್ತುಗಳು ಇಂದಿನ ಜೀವನಕ್ಕೆ ಮಾರ್ಗ ತೋರುವಲ್ಲಿ ಅದನ್ನನುಸರಿಸುವುದು ಅರ್ಥಶೂನ್ಯವಾದದ್ದು, ತರ್ಕಕ್ಕೆ ದೂರವಾದುದು ಎನ್ನುತ್ತಾರೆ. ಆದರೆ, ಪ್ರಾಚೀನವಾದ ಪ್ರಮಾಣಗಳು, ಧರ್ಮಸಾಧನೆಗೆ ಅವರು ಕೊಡುವ ಮಾನದಂಡಗಳು ತ್ರಿಕಾಲಾಬಾಧಿತವಾದುವು. ಅವು ಮಹಾಕವಿಗಳೂ ದ್ರಷ್ಟಾರರೂ ಆದವರಿಂದ ಮನ್ನಣೆ ಪಡೆದಿವೆ. (**'ಕವಿಃ ಕ್ರಾಂತದರ್ಶೀ'**)



ನಮ್ಮ ಜೀವನದಲ್ಲಿ ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕು ಅರ್ಥಾತ್ ವಿಧಿ, ನಿಷೇಧಗಳನ್ನು ವೇದವು ಘಂಟಾಘೋಷವಾಗಿ ತಿಳಿಸಿದೆ. ಶ್ರೀಕೃಷ್ಣನು ಗೀತೆಯಲ್ಲಿ ಹೀಗೆಂದಿದ್ದಾನೆ.

**ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ**
**ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ॥** (XVI–೨೩)

"ಯಾರು ಶಾಸ್ತ್ರ ವಿಚಾರಗಳನ್ನು ನಿಯಮಗಳನ್ನು ದೂರ ತಳ್ಳಿ, ತನ್ನ ಆಸೆಗೆ ತಕ್ಕಂತೆ ನಡೆದುಕೊಳ್ಳುತ್ತಾನೋ ಆತನು ಪರಿಪೂರ್ಣತೆಯನ್ನು ಪಡೆಯಲಾರ ಅಥವಾ ಸಂತೋಷವನ್ನಾಗಲೀ ಅತ್ಯುತ್ತಮವಾದ ಮುಕ್ತಿಯನ್ನಾಗಲೀ ಪಡೆಯಲಾರನು.

"ಆದುದರಿಂದ ಶಾಸ್ತ್ರಗಳು ನಿಮ್ಮ ಜೀವನದ ಆಗುಹೋಗುಗಳಿಗೆ ವಿಧಿ, ನಿಷೇಧಗಳನ್ನು ತಿಳಿಸುವ ಅಧಿಕಾರ ಹೊಂದಿವೆ. ಅವುಗಳಿಗೆ ತಕ್ಕಂತೆ ನಿಮ್ಮ ನಡವಳಿಕೆ ಇರಲಿ" ಎಂದು ಶ್ರೀಕೃಷ್ಣನು ಗೀತೆಯಲ್ಲಿ ತಿಳಿಸುತ್ತಾನೆ.

**ತಸ್ಮಾತ್ ಶಾಸ್ತ್ರಮ್ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ।**
**ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ॥** (XVI–೨೪)

ಹೀಗೆ ನಮ್ಮ ದೈನಂದಿನ ಜೀವನದಲ್ಲಿ ಮಾರ್ಗದರ್ಶನಕ್ಕಾಗಿ ಶಾಸ್ತ್ರಗಳು ಅಂದರೆ ವೇದಗಳ ಕಡೆಗೆ ನೋಡಬೇಕು. ವೇದಗಳಲ್ಲೇನಿದೆ ಎಂಬುದನ್ನು ತಿಳಿಯಲು ಅವನ್ನು ಕಲಿಯಬೇಕು. ಮರೆಯದೆ ಇರಲು, ಏಕೆಂದರೆ, ಅವು ಅಲಿಖಿತ ಗ್ರಂಥಗಳಾದ್ದರಿಂದ ದಿನನಿತ್ಯವೂ ಪಠಿಸಿ ಅನುಸಂಧಾನ ಮಾಡಬೇಕು. ಈ ಕಾರಣದಿಂದಲೇ, ಶ್ರೀ ಶಂಕರಾಚಾರ್ಯರು ಪಂಚೋಪದೇಶದಲ್ಲಿ ತೊಡಗುವಾಗ **"ವೇದೋನಿತ್ಯಂ ಅಧೀಯತಾಂ"** ಎಂದರು.

ವೇದಗಳನ್ನು ಕಲಿಯಬೇಕು ಮತ್ತು ನಿತ್ಯವೂ ಪಠಿಸಿ ಮನಸ್ಸಿನಲ್ಲಿಧರಿಸಬೇಕು.
ಕಲಿತ ಮೇಲೆ ಮುಂದೆ ಮಾಡಬೇಕಾದುದು ಹೀಗಿದೆ:

**ತದುದಿತಂ ಕರ್ಮಸ್ವನುಷ್ಠೀಯತಾಂ॥**

ಅಲ್ಲಿ ಉಕ್ತವಾದ ಕರ್ತವ್ಯಗಳನ್ನು ಕ್ರಮವಾಗಿ ನಡೆಸತಕ್ಕುದು. ವೇದಗಳಿಗೆ ಅನುಸಾರವಾದ ಈ ಸನ್ನಡವಳಿಕೆಯ ಪರಿಣಾಮಗಳೇನು? ಇದರಿಂದ ದೈವ ಪ್ರೀತಿ ದೊರೆಯುತ್ತದೆ. "ಕೇನ ಈಶಸ್ಯ ವಿಧೀಯತಾಂ ಅಪಚಿತಿಃ" 'ಕರ್ತವ್ಯಗಳನ್ನು ಹೃದಯಪೂರ್ವಕವಾಗಿ ಪರಿಷ್ಕಾರವಾಗಿ ಮಾಡು; ಕರ್ಮವು ನಿನ್ನದು ಅದೇ ದೇವರು ಮೆಚ್ಚುವ ಪೂಜೆ' ಎಂದು ಶಂಕರರು ತಿಳಿಸುತ್ತಾರೆ.

ಮನೋ, ವಾಕ್, ಕಾಯಗಳಿಂದ ದುಷ್ಟತನವನ್ನು ತ್ಯಜಿಸಿದಾಗ ಮಾತ್ರ ನಾವು ಉತ್ತಮಮವಾಗಿ ಬಾಳಬಹುದು. ಇದನ್ನು ಸಾಧಿಸಲು ನಾವು ಉತ್ತಮವಾದ ಆಲೋಚನೆಗಳಲ್ಲಿ, ಕಾರ್ಯಗಳಲ್ಲಿ ಸರ್ವದಾ ಪ್ರವೃತ್ತರಾಗಿರಬೇಕು. ಒಬ್ಬ ವೃದ್ಧ ಸನ್ಯಾಸಿಯನ್ನು ಕುರಿತು, ಆತನು ಕಾಮವನ್ನು ಗೆದ್ದುದು ಹೇಗೆಂದು ಜನ ಪ್ರಶ್ನಿಸಿದರು. ಆತನು ಇದಕ್ಕೆ ಉತ್ತರಿಸುತ್ತ 'ಕಾಮವು ನನ್ನ ಮನಸ್ಸಿನ ಬಾಗಿಲನ್ನು ತಟ್ಟಿದಾಗ ನನಗೆ ಕೆಲಸಕಾರ್ಯಗಳಲ್ಲಿ ಬಿಡುವೇ ಇಲ್ಲದ್ದನ್ನು ಕಂಡು ತನ್ನಷ್ಟಕ್ಕೆ ತಾನೇ ಹಿಂದಿರುಗಿ ಹೋಯಿತು' ಎಂದರು. ಬರಿದಾದ ಮನಸ್ಸು ದೆವ್ವಗಳ ಕಾರಸ್ಥಾನವಾಗಿರುತ್ತದೆ. ನಾವು ಯಾವಾಗಲೂ ಸತ್ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದರೆ, ಕೇಡಿಗತನವು ನಮ್ಮ ಸನಿಹಕ್ಕೂ ಬರುವುದಿಲ್ಲ. ಸತ್ಕಾರ್ಯಗಳಲ್ಲಿ ಮಗ್ನರಾಗಿರುವಾಗ ಕೆಡುಕಿನ ಭಾವನೆಗಳು ತಾವೇ ತಾವಾಗಿ ಮಾಯವಾಗುತ್ತವೆ. ಸತ್ಕಾರ್ಯಗಳನ್ನು ಮಾಡುವಾಗ ನಾವು ಯಾವಾಗಲೂ ದೈವವನ್ನು ಕುರಿತು ಭಾವಿಸುತ್ತೇವೆ. ಆ ಮೂಲಕ ಆತನ ದಯೆಗೆ ಪಾತ್ರರಾಗುತ್ತೇವೆ. ಶ್ರೀ ಅಪ್ಪಯ್ಯ ದೀಕ್ಷಿತರು ಕಂಚಿಯ ವರರಾಜನನ್ನು ಕುರಿತು ಹಾಡುತ್ತ ಭಕ್ತಶಿರೋಮಣಿಯಾದ ಅವರು ಹೇಳಿದರು:

"ಒಡೆಯಾ, ನಮ್ಮಲ್ಲಿ ಎಷ್ಟೋ ಜನ ಕವಿಗಳಿದ್ದಾರೆ, ಕ್ಷಣಮಾತ್ರದಲ್ಲಿ ಅವರು ನಿನ್ನನ್ನು ಕುರಿತು ಸ್ತುತಿಗಳನ್ನು ರಚಿಸಬಲ್ಲರು. ನಾನಾದರೂ ನಿಧಾನದವನು, ಆದರೆ ನನ್ನ ಅದೃಷ್ಟ ಅವರಿಗಿಂತ ಉತ್ತಮವಾದದ್ದು. ಏಕೆಂದರೆ ನನ್ನ ಮನಸ್ಸು ನಿನ್ನನ್ನು ಸ್ತುತಿಸುತ್ತ ಅವನ್ನು ಪದ್ಯರೂಪಕ್ಕೆ ತರಲು ಶ್ರಮಪಡುತ್ತದೆ. ಆಗ ನನ್ನ ಮನಸ್ಸು ತೇಜೋಮಯನಾದ ನಿನ್ನ ಒಡಲಲ್ಲೇ ಬಹಳ ಕಾಲ ಉಳಿದಿರುತ್ತದೆ."

ಆದ್ದರಿಂದ ಅಧ್ಯಾತ್ಮದ ಮೆಟ್ಟಿಲುಗಳಲ್ಲಿ ಮೊದಲನೆಯದು ಶಾಸ್ತ್ರಸಮ್ಮತವಾದ ಕರ್ತವ್ಯಗಳು. ಇವು ದೈವ ಶರಣಾಗತಿಯನ್ನು ಹೊಂದಿ ಮಾಡಬೇಕಾದ ಕರ್ತವ್ಯಗಳೇ ಹೊರತು ಫಲಾಪೇಕ್ಷೆಯಿಂದ ಮಾಡತಕ್ಕುವಲ್ಲ. ಇಂತಹ ಸತ್ಕಾರ್ಯ, ಕರ್ಮಾನುಷ್ಠಾನಗಳು ನಮ್ಮ ಮನಸ್ಸನ್ನು ಪರಿಶುದ್ಧವಾಗಿಸಿ ದೈವಕಾರುಣ್ಯವನ್ನು ಪಡೆಯಲು ಸಹಾಯಕವಾಗುತ್ತವೆ. ಪ್ರಾಮಾಣಿಕವಾದ ವೈಯಕ್ತಿಕ ಧರ್ಮಸಾಧನೆಯೇ ಭಗವಂತನ ನಿಜವಾದ ಪೂಜೆ ಮತ್ತು ಸ್ತುತಿ

### ಆ. ದೈವಭಕ್ತಿ

ದೈವಾನುಸಂಧಾನದಲ್ಲಿ ಕಾಲ ಕಳೆಯುವವರನ್ನು ಭಕ್ತರೆನ್ನುತ್ತೇವೆ. ಅಲ್ಲದೆ, ಅಧ್ಯಾತ್ಮ ಜೀವಿ, ಸಾಧಕರೆಂದೂ ಹೇಳಬಹುದು. ದೈವವೆಂದರೇನು? ಎಲ್ಲ ಧರ್ಮಗಳೂ ದೇವರನ್ನು ಸೃಷ್ಟಿಕರ್ತನೆನ್ನುತ್ತವೆ. ಅವನನ್ನು ಕರ್ತನೆಂದು ಕರೆಯುತ್ತವೆ. ಪರಪಮಚದ ಸೃಷ್ಟಿಗೂ ಅದರ ಸ್ಥಿತಿಗೂ ಅವನೇ ಕಾರಣನೆಂದು ಹೇಳುತ್ತವೆ. ಯಾವುದೇ ಪರಿಣಾಮಕ್ಕೂ ಕಾರಣವೊಂದು ಇರುತ್ತದೆ. ಎಲ್ಲದಕ್ಕೂ ಕಾರಣವಾದುದು



ದೈವ. ಅಲ್ಲದೆ ನಮ್ಮ ಕರ್ಮಫಲವನ್ನು ಒಳಿತಾಗಲಿ, ಕೆಡುಕಾಗಲಿ ವಿತರಣೆ ಮಾಡುವಾತನು ಅವನೇ. ಆ ಕಾರಣ ಭಗವಂತನು ಕರ್ಮಫಲದಾತನು.

ಭಗವಂತನು ಲೋಕವನ್ನು ಸೃಷ್ಟಿಸಿರಬಹುದು. ಕರ್ಮಫಲವನ್ನು ವಿತರಿಸುವವನೂ ಇರಬಹುದು. ಆದರೆ ನಮಗೆ ಅವನಲ್ಲಿ ಭಕ್ತಿ ಏಕಿರಬೇಕು? ಇದಕ್ಕೆ ಉತ್ತರ ನಮಗೆ ಪತಂಜಲಿಯ ಯೋಗಸೂತ್ರಗಳಲ್ಲಿ ದೊರಕುತ್ತದೆ. ಚಿತ್ತವೃತ್ತಿ ನಿರೋಧವೇ ಯೋಗ. ಮನಸ್ಸಿನ ಕ್ರಿಯಾಶೀಲತೆಯನ್ನು ಅದು ನಿಯಂತ್ರಿಸುತ್ತದೆ. ಆದರೆ ಮನಸ್ಸನ್ನು ಸಂಯಮದಲ್ಲಿಟ್ಟುಕೊಳ್ಳುವುದು ಹೇಗೆ? ದೈವಾರಾಧನೆಯಿಂದ ಇದು ಸಾಧ್ಯವಾಗುತ್ತದೆ. ಲೋಕದ ತುಂಬ ಮನಸ್ಸನ್ನು ಚಂಚಲಗೊಳಿಸುವ ಸಾಮಗ್ರಿಗಳು ಅಪಾರವಾಗಿದೆ. ಅವು ಮನಸ್ಸನ್ನು ಕಂಪಿಸುವಂತೆ ಚಂಚಲವಾಗುವಂತೆ ಮಾಡುತ್ತವೆ. ನಮ್ಮ ಶರೀರವನ್ನು ತುಯ್ದಾಡದಂತೆ ಸ್ತಿಮಿತದಲ್ಲಿಡಲು, ನಾವೊಂದು ಬಲವಾದ ಕಂಬವನ್ನು ಹಿಡಿದುಕೊಳ್ಳಬೇಕು. ಹಾಗೆಯೇ ನಮ್ಮ ಮನಸ್ಸು ಸ್ಥಿರವಾಗಿ ನಿಲ್ಲಿಸಿಕೊಳ್ಳಲು ಅಪರಿವರ್ತನಶೀಲವೂ ಅಚಲವೂ ಆದ ಒಂದು ಆಧಾರಸ್ತಂಭವು ಬೇಕಾಗುತ್ತದೆ. ಅದು ಸ್ಥಾಣುವಾಗಿರಬೇಕು. ಲೋಕದ ಅಸ್ಥಿರ ಪದಾರ್ಥಗಳ ನಡುವೆ ಅದು ಸ್ಥಿರವೂ, ಶಾಶ್ವತವೂ ಆಗಿರಬೇಕು. ಪ್ರಪಂಚದ ಅಶಾಶ್ವತ ವಸ್ತುಗಳ ನಡುವೆ ಸರ್ವಜ್ಞನಾದ, ಸಚ್ಚಿದಾನಂದನಾದ ಆ ದೈವವೊಂದೇ ಶಾಶ್ವತವಾದುದು. ನಾವು ಮನಸ್ಸನ್ನು ಸಂಯಮದಲ್ಲಿ ಇಟ್ಟುಕೊಳ್ಳಲು ಅವನನ್ನು ಅಲ್ಲಿ ಸ್ಥಾಪಿಸಿಕೊಳ್ಳಬೇಕು. ಆಗ ಗಾಳಿಯಾಡದ ಸ್ಥಳದಲ್ಲಿ ಬೆಳಗುವ ದೀಪದ ಜ್ವಾಲೆಯಂತೆ ನಮ್ಮ ಮನಸ್ಸು ಇರುವುದು.

ಏಕಾಗ್ರತೆಯಿಂದ ನೀವು ಏನನ್ನಾದರೂ ಧ್ಯಾನಿಸಿದರೆ ನೀವು ಅದರ ಗುಣಗಳನ್ನೇ ಪಡೆಯುವಿರಿ. ಕೊನೆಗೆ ಅದೇ ಆಗುತ್ತೀರಿ. ಸರ್ವವ್ಯಾಪಿಯಾದ ಭಗವಂತನನ್ನು ಧ್ಯಾನಿಸಿದರೆ, ಯಾವ ಬಯಕೆಯಿಂದಲೂ ಚಂಚಲನಾಗದ, ಸ್ಥಿತಪ್ರಜ್ಞನಾದ ಭಗವಂತನಂತೆಯೇ ಆಗುತ್ತೀರಿ. ಭಗವಂತನಂತೆಯೇ ನಿಶ್ಚಲವಾದ ಆತ್ಮ ನಿಮ್ಮದಾಗಬೇಕಾದರೆ ನಿಮಗೆ ಆತನಲ್ಲಿ ಭಕ್ತಿ ಇರಬೇಕು. ಸಂತ ತಿರುವಳ್ಳುವರು ಹೇಳುವಂತೆ ನಿರ್ಲಿಪ್ತನಾದ ಭಗವಂತನನ್ನು ನಾವು ಆಸೆಯಿಂದ ಅಪ್ಪಿಕೊಂಡರೆ ಇಹದ ಬಂಧನಗಳಿಂದ ಕಳಚಿಕೊಳ್ಳಬಹುದು. ದೈವದಲ್ಲಿ ನಾವು ಆಸಕ್ತರಾದರೆ ಮಾತ್ರ ಲೋಕದಿಂದ ನಾವು ವಿರಕ್ತರಾಗಬಹುದು.

ಹಾಗಾದರೆ ಭಕ್ತಿಯೆಂದರೇನು? ಸೃಷ್ಟಿಕರ್ತನಾದ ಪಶುಪತಿಯ ಚರಣಗಳಲ್ಲಿ ಮನಸ್ಸನ್ನು ನಿಲ್ಲಿಸಿ, ಮನವನ್ನು ಅಲ್ಲೇ ನೆಲೆಸಿರುವಂತೆ ಮಾಡುವುದೇ ಭಕ್ತಿ. ಪ್ರಕೃತಿಯಲ್ಲೂ, ಮಾನವ ಸಂಬಂಧಗಳಲ್ಲೂ ಇರುವ ಸುಂದರವಾದ ಸಂಗತಿಗಳ ಹೋಲಿಕೆ ನೀಡಿ ಶ್ರೀ ಶಂಕರ ಭಗವತ್ಪಾದರು ಒಂದು ಕವಿತೆಯನ್ನು ಬರೆದಿದ್ದಾರೆ.

**'ಅಂಕೋಲವಮ್ ನಿಜಬೀಜ ಸಂತತಿಃ.'** ಕವಿ ಸಮಯದ ಪ್ರಕಾರ ಅಂಕೋಲವೆಂಬ ಒಂದು ವೃಕ್ಷವಿದೆ. ಸಂಪೂರ್ಣವಾಗಿ ಬೆಳೆದ ಮೇಲೆ ವೃಕ್ಷದಿಂದ ಬೀಜಗಳು ತಾನೇತಾನಾಗಿ ಉದುರುತ್ತವೆ. ಆಂತರಿಕವಾದ ಯಾವುದೋ ಸೆಳೆತಕ್ಕೆ ಒಳಪಟ್ಟು ಅವೆಲ್ಲ ವೃಕ್ಷಕಾಂಡದ ಸಮೀಪಕ್ಕೆ ಸರಿದುಬರುತ್ತವೆ. ಸಮೀಪಿಸಿದ ನಂತರ ಅದನ್ನೇರಿ ಅಂಟಿಕೊಂಡು ಅದರಲ್ಲಿ ಒಂದಾಗಿ ಸೇರಿಹೋಗುತ್ತವೆ.

**'ಅಯಸ್ಕಾಂತೋ ಪಲಂ ಸೂಚಿಕಾ'** ಅಯಸ್ಕಾಂತ ಶಕ್ತಿಯುಳ್ಳ ರೆಲೆಯ ಕಡೆಗೆ ಸೆಳೆಯಲ್ಪಟ್ಟ ಸೂಜಿಯ ಹಾಗೆ.

**'ಸಾಧ್ವೀ ನೈಜ ವಿಭುಂ'**; ಒಬ್ಬ ಪತಿವ್ರತೆಯು ಹೃದಯಪೂರ್ವಕವಾಗಿ ತನ್ನ ಪತಿಯ ಸಾನಿಧ್ಯವನ್ನು ಬಯಸುತ್ತಾಳೆ. ಅವನೇ ಅವಳ ಪಾಲಿಗೆ ಸರ್ವಸ್ವ.

**'ಲತಾ ಕ್ಷಿತಿರುಹಮ್'**; ನೆಲದಲ್ಲಿ ಬೆಲೆಯುತ್ತಿರುವ ಬಳ್ಳಿಯು ಸುತ್ತಿ ಹೆಣೆದುಕೊಳ್ಳಲು ಮರವೊಂದನ್ನು ಸುತ್ತಮುತ್ತ ಅರಸುತ್ತದೆ. ಕಂಡಕೂಡಲೆ, ಎಲ್ಲಾ ಕಡೆಯಿಂದಲೂ ಅದನ್ನು ಹಬ್ಬಿಕೊಂಡು ಬಿಡಿಸಲಾರದಂತೆ ವ್ಯಾಪಿಸಿಕೊಳ್ಳುತ್ತದೆ.

**'ಸಿಂಧುಸ್ಸರಿದ್ವಲ್ಲಭಮ್'**; ದೂರದ ಬೆಟ್ಟ ಗುಡ್ಡಗಳಲ್ಲಿ ಹುಟ್ಟುವ ನದಿಗಳು ರಭಸದಿಂದ ಹರಿಯುತ್ತ ಓಡಿ ಸಾಗರದ ನೀರನ್ನು ಸೇರುತ್ತದೆ. ಸಮುದ್ರದ ಉಪ್ಪು ನೀರಿನೊಡನೆ ಒಂದಾದ ನದಿಯ ನೀರು ತಾನೂ ಉಪ್ಪಾಗಿ ಪರಿಣಮಿಸುತ್ತದೆ.

ಈ ಎಲ್ಲ ಸಂದರ್ಭಗಳಲ್ಲಿಯೂ ಆಕರ್ಷಣೆಯು ಸಹಜವಾದದ್ದು ಮತ್ತು ಅಪ್ರಯತ್ನಪೂರ್ವಕವಾಗಿ ಉಂಟಾದದ್ದು. ಅದರಲ್ಲಿ ಯಾವ ಲೆಕ್ಕಾಚಾರವೂ ಕೃತ್ರಿಮವೂ ಇಲ್ಲ. ಅರಂಭದಲ್ಲಿ ಬೇರೆ ಬೇರೆಯೇ ಆಗಿದ್ದವರು ಈಗ ಪರಸ್ಪರ ಆಕರ್ಷಿತರಾಗಿದ್ದಾರೆ. ಆದರೆ ತಾವೊಬ್ಬೊಬ್ಬರೇ ಇಂತಹ ಪರಿಪೂರ್ಣತೆಯನ್ನು ಪಡೆಯರು. ಬೀಜ, ಸೂಜಿ, ಸಾಧ್ವೀ, ಬಳ್ಳಿ ಮತ್ತು ನದಿಗಳು ಸಂಪೂರ್ಣತೆಯನ್ನು ಪಡೆವುದು ತಮ್ಮ ಅಭಿಲಾಷೆ ಸಾರ್ಥಕವಾದಾಗ ಮತ್ತು ತಮ್ಮ ವ್ಯಕ್ತಿತ್ವವು ಸಂಪೂರ್ಣತೆಯನ್ನು ಪಡೆದಾಗಲೇ ಸರಿ. ಸಾಧ್ವಿಗೆ – ಅಂದರೆ ಪತಿವ್ರತೆಗೆ – ಆಕೆಯ ಗಂಡನೇ ನಿಜವಾಗಿ ಅವಳ ಸರ್ವಸ್ವ. ಅವನಿಂದ ಕ್ಷಣಮಾತ್ರ ಅಗಲಿದರೂ ತೀವ್ರವಾದ ಶೋಕಕ್ಕೆ ಗುರಿಯಾಗುತ್ತಾಳೆ. ಮೇಘಗಳು ಸಾಗರದಿಂದ ನೀರ ಹನಿಗಳನ್ನು ಸೆಳೆದು ಎತ್ತರದ ಪರ್ವತಗಳ ಮೇಲೆ ಮಳೆಗರೆಯುತ್ತವೆ. ಅಲ್ಲಿಂದ ಹೊರಟ ನೀರಪ್ರವಾಹ ತಮ್ಮ ಅಂತಿಮ ಗುರಿಯಾದ ಸಾಗರದೆಡೆಗೆ ಪುನಃ ಓಡುತ್ತವೆ. ವೇಗವಾದ ಪ್ರವಾಹವಾಗಿ ಧುಮ್ಮಿಕ್ಕುವ ಜಲಪಾತವಾಗಿ ಗರ್ಜಿಸಿ ಭೋರ್ಗರೆಯುತ್ತ ಅತ್ಯಾತುರದಿಂದ ತಮ್ಮ ಒಡೆಯನನ್ನು ಸರಿದ್ವಲ್ಲಭನನ್ನು ಸೇರಲು ತವಕಿಸಿ ಸಾಗರದೊಡಲಿನಲ್ಲಿ ಲೀನವಾಗುತ್ತದೆ.

ಇಂತಹ ಮಾರ್ಗಗಳಲ್ಲಿ ಒಬ್ಬ ನಿಜವಾದ ಭಕ್ತ ದೈವಕ್ಕಾಗಿ ಹಂಬಲಿಸಿ, ಅವನನ್ನು ಸಮೀಪಿಸುತ್ತಾನೆ. ಕೊನೆಯ ಉದಾಹರಣೆಯು ಸಂಪೂರ್ಣ ಶರಣಾಗತಿಯನ್ನು ಪರಮ ಭಕ್ತಿಯಲ್ಲಿನ ಆಕರ್ಷಣೆಯನ್ನೂ ಸೂಚಿಸುತ್ತದೆ. ಅದಕ್ಕೆ



ಹಿನ್ನೆಲೆಯಾಗಿರುವ ಅದ್ವೈತ ಸತ್ಯವನ್ನೂ ತೋರುತ್ತದೆ. ಭಕ್ತಿಯು ಭಗವಂತ ಮತ್ತು ಭಕ್ತನ ನಡುವಿನ ಸೇತುವೆ. ಭಗವಂತನನ್ನು ಅಗಲಿದ ಭಕ್ತನು ದುಃಖಿಯಾಗಿರುತ್ತಾನೆ. ಭಗವಂತನಲ್ಲಿ ಐಕ್ಯ ಹೊಂದಬೇಕೆಂಬ ಆಸೆ ಆತನದು. ಭಗವಂತನಿಂದ ಅಗಲಿದ ಭಕ್ತನು ದ್ವೈತಭಾವವನ್ನು ಅನುಭವಿಸುತ್ತಾನೆ. ಭಕ್ತಿಯ ಉದ್ದೇಶವೇ ದ್ವೈತ ಭಾವವನ್ನುಳಿಸಿ ಅವನಲ್ಲಿ ಒಂದಾಗುವುದು. ಅದೇ ಅದ್ವೈತ. ಅಂಕೋಲ ಬೀಜವು ವೃಕ್ಷದಲ್ಲಿಯೇ ಸೇರಿ ಅಭಿನ್ನವಾಗುವಂತೆ ಬಳ್ಳಿಯು ವೃಕ್ಷದ ಸುತ್ತಲೂ ಹೆಣೆದುಕೊಂಡು ಮುಂದೆ ಎಂದೆಂದಿಗೂ ಬೇರೆಯಾಗದಂತೆ, ಸೂಜಿಯು ಅಯಸ್ಕಾಂತ ಶಿಲೆಯಿಂದ ಉದ್ದೀಪ್ತವಾಗಿ ತಾನೂ ಅಯಸ್ಕಾಂತವಾಗುವಂತೆ, ಸಾಧ್ವಿಯು ತನ್ನ ವಿಶಿಷ್ಟ ವ್ಯಕ್ತಿತ್ವವನ್ನು ಕಳೆದುಕೊಂಡು, ತನ್ನೊಡೆಯನಾದ ಪತಿಯ ವ್ಯಕ್ತಿತ್ವದಲ್ಲಿ ಸೇರಿಹೋದಂತೆ. ಬೇರೆ ಬೇರೆ ರೂಪನಾಮಗಳನ್ನುಳ್ಳ ನದಿಗಳು ತಮ್ಮ ನಾಮರೂಪಗಳನ್ನಳಿದು ಸಮುದ್ರದ ನೀರಿನಲ್ಲಿ ಸೇರಿಹೋದಂತೆ; ಯಾವುದು ನದಿಯ ನೀರಾಗಿತ್ತೋ ಅದೀಗ ಸಾಗರದ ನೀರಾಯಿತು.

ಈ ಉದಾಹರಣೆಗಳು ದೈವವು ನಮಗೆ ಆದಿಯೂ ಮೂಲ ಗಂತವ್ಯವೂ ಆಗಿರುವುದುನ್ನು ಸೂಚಿಸುತ್ತವೆ. ಕೊನೆಯಲ್ಲಿ ನಾವು ಸ್ವಸ್ವರೂಪ ಜ್ಞಾನವನ್ನು ಪಡೆಯುತ್ತೇವೆ. ಅದೇ ದೈವೀಸ್ವರೂಪ. ಅದು ಭಕ್ತಿಯ ಪರಿಪೂರ್ಣಾನುಭವ. ನಿಜವಾದ ಪ್ರಾರ್ಥನೆ ಯಾವಾಗಲೂ ಅದು ಇದನ್ನು ಕೇಳುವುದಲ್ಲಿ, ನಮ್ಮಲ್ಲಿರುವುದನ್ನು ಕುರಿತು ಬೇಡುವುದೂ ಅಲ್ಲ. ನಿಜವಾದ ಭಕ್ತನು ದೈವಸಾಕ್ಷಾತ್ಕಾರವನ್ನು ಬೇಡುತ್ತಾನೆ. **'ಮದೀಯ ಏವ ಸ್ವರೂಪಂ ದೇಹಿ'** ಅಂದರೆ ನನಗೆ ಸ್ವಸ್ವರೂಪ ಜ್ಞಾನವನ್ನು ಕೊಡು ಎಂಬುದಾಗಿ ಕೇಳುತ್ತಾನೆ. ಎಲ್ಲರ ಅಂತರಾತ್ಮದಲ್ಲಿಯೂ ದೈವವೇ ನೆಲೆಸಿರುವಾಗ, ದೇವನ ಸ್ವರೂಪವನ್ನರಿಯುವುದೇ ಮುಕ್ತಿ.

ಶ್ರೀ ಶಂಕರರು 'ಸೌಂದರ್ಯಲಹರಿ' ಎಂಬ ಸುಂದರವಾದ ಸ್ತೋತ್ರ ಮಾಲಿಕೆಯಲ್ಲಿ ಹೀಗೆ ಹಾಡಿದ್ದಾರೆ. **"ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾಂ"** ವಿಶ್ವಜನನಿಯನ್ನು ಕುರಿತು ಶ್ರೀ ಶಂಕರರು ಹೀಗೆ ಪ್ರಾರ್ಥಿಸುವರು. "ತಾಯಿ, ಭೃತ್ಯನಾದ ನನ್ನನ್ನು ಕರುಣೆಯಿಂದ ನೋಡು." ಇಲ್ಲಿ ಮುಖ್ಯವಾದ ಶಬ್ದ ಓ ಭವಾನಿಯೇ ನೀನು– ಎಂಬುದು. ಲೋಕಜನನಿಯನ್ನು ಹೀಗೆ ಸಂಬೋಧಿಸಿ 'ತ್ವಂ' ಎಂದಾಗ ಇನ್ನೊಂದರ್ಥದಲ್ಲಿ 'ನೀನೇ ನಾನಾಗುತ್ತೇನೆ' (ತದೈವ) ಎಂಬುದು ಸಾಧ್ಯವಾಗುತ್ತದೆ. ಶ್ರೀಶಂಕರರು ಮುಂದುವರಿಸುತ್ತ, 'ಲೋಕಮಾತೆಯು ಭಕ್ತನ ಪ್ರಾರ್ಥನೆಯ ಮೊದಲ ಎರಡು ಶಬ್ದಗಳನ್ನು ಕೇಳುತ್ತಿದ್ದಂತೆಯೇ ಆನಂದಿತಳಾಗಿ ಮೈಮರೆತು ತನ್ನತನವನ್ನು ಅವನ ಮೇಲೆ ವರ್ಷಿಸುವಳು, '*ನಿಜಸಾಯುಜ್ಯಪದವೀಂ*'; ಇಲ್ಲಿ ದ್ವೈತಭಾವವು ಅಳಿದು, ದಾಸತ್ವವು ತೊಲಗಿ, ಭಕ್ತನು ಪರದೈವದೊಡನೆ ಒಂದಾಗಿಬಿಡುವನು. ಇದು ಭಕ್ತಿಯ ಪರಮ ಗಂತವ್ಯ.

ನಮ್ಮ ಶರೀರವನ್ನು ಭಗವಂತನ ದೇವಾಲಯವೆಂದು ಭಾವಿಸುವುದೂ ಪೂಜೆಯೇ. ಆಗ ನಾವು ಮಾಡುವುದೆಲ್ಲವೂ ಪೂಜೆಯೇ ಆಗುತ್ತದೆ. ಇನ್ನೊಂದು ಸ್ತುತಿಯಲ್ಲಿ ಶ್ರೀ ಶಂಕರರು ಶಿವನನ್ನು ಕುರಿತು ಹೀಗೆ ಧ್ಯಾನಿಸಿದ್ದಾರೆ:

"ನನ್ನ ಅಂತರಾತ್ಮವೇ ನೀನಾಗಿರುವೆ ಪ್ರಭುವೇ, ನನ್ನ ಬುದ್ಧಿಯು ನಿನ್ನ ಸಹಚರಿ. ನನ್ನ ಪ್ರಾಣಗಳು ನಿನ್ನ ಗೆಳೆಯರು. ನನ್ನ ಶರೀರವು ನಿನ್ನ ಆಲಯ. ಇಂದ್ರಿಯಗಳ ಮೂಲಕ ನಾನು ಪಡುವ ಆನಂದವು ನಿನ್ನ ಪೂಜೆಯೇ ಸರಿ. ನನ್ನ ನಿದ್ರೆಯು ನಿನ್ನ ಧ್ಯಾನಸಮಾಧಿಯೇ ಆಗಿರುವುದು. ನನ್ನ ಸುಳಿದಾಟವೆಲ್ಲ ನಿನ್ನ ಪ್ರದಕ್ಷಿಣೆಯಾಗಿರುವುದು. ನನ್ನ ಮಾತೆಲ್ಲವೂ ನಿನ್ನ ಸ್ತುತಿಯೇ ಸ್ವಾಮಿ. ನಾನು ಮಾಡುವುದೆಲ್ಲವೂ ನಿನ್ನ ಪೂಜೆಯೇ ಆಗಿದೆ."

ಇಂತಹ ಪ್ರಾರ್ಥನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಯಾರು ಬಾಳುತ್ತಾರೋ ಅವರ ಮನೋವಾಕ್ಕಾಯಗಳಲ್ಲಿ ಯಾವ ಕೆಡುಕೂ ಇರುವುದಿಲ್ಲ. ಆತನ ಜೀವನವು ಪರಿಶುದ್ಧವೂ ಶರಣಾಗತಿಯಿಂದ ಕೂಡಿದ್ದೂ ಆಗಿರುವುದು.

ಹೀಗೆ ಶಾಸ್ತ್ರೋಕ್ತವೂ, ದೈವಭಕ್ತಿಯಿಂದ ಕೂಡಿದ್ದೂ ಆದ ಜೀವನದಿಂದ ಆಧ್ಯಾತ್ಮ ಜೀವನವು ಸಫಲವಾಗುವುದು.

ಭಕ್ತಿಯಲ್ಲಿ ಪ್ರಾರ್ಥನೆಯು ಮುಖ್ಯವಾದದ್ದು. ಪ್ರಾರ್ಥನೆಯ ಉದ್ದೇಶವು ಫಲಗಳನ್ನು ಕುರಿತ ಬೇಡಿಕೆಯಲ್ಲ. ನಮಗೇನು ಬೇಕೆಂಬುದನ್ನು ಕುರಿತು ನಾವು ಭಗವಂತನನ್ನು ಬೇಡಬೇಕೆ? ಸರ್ವವ್ಯಾಪಿಯಾದ ಆತನಿಗೆ ನಮ್ಮ ಕೊರತೆಗಳು ತಿಳಿದೇ ಇರುತ್ತವೆ ಅಥವಾ ಆತನು ನೀವು ಬೇಡಲೆಂದು ಕಾದಿರುತ್ತಾನೆಯೆ? ದೇವನ ದಯೆಯಲ್ಲಿಯೂ ಸರ್ವವ್ಯಾಪಕತೆಯಲ್ಲಿಯೂ ನಂಬಿಕೆಯಿಲ್ಲದವರು ಬೇಡಬಹುದಷ್ಟೆ.

ಹಾಗಾದರೆ ನಾವೇಕೆ ಪ್ರಾರ್ಥಿಸಿ ಬೇಡಿಕೊಳ್ಳುತ್ತೇವೆ? ನೀಲಕಂಠ ದೀಕ್ಷಿತರು ಮಧುರೆಯ ಮೀನಾಕ್ಷಿಯನ್ನು ಕುರಿತು ಹೀಗೆ ಕೇಳಿಕೊಂಡರು,

"ನಿನಗೆ ತಿಳಿಯದ್ದು ಏನಿದೆ ಎಂದು ನಾನು ಕೇಳಲಿ ತಾಯೆ? ಆದರೆ ನಾವು ಹೇಳಬೇಕಾದ್ದನ್ನು ಹೇಳದೆ ಹೋದರೆ, ಹೃದಯದಲ್ಲಿರುವ ವೇದನೆ ಪರಿಹಾರವಾಗದು. ಆದ್ದರಿಂದ ನಾನು ಕೇಳುವಮಾತಿಗೆ ಕಿವಿಗೊಡು, ತಾಯಿ."

ಆದ್ದರಿಂದ ಕಿವಿಗೊಟ್ಟು ಕೇಳಬಲ್ಲ ತಾಯಿಯ ಮುಂದೆ ಹೃದಯವನ್ನಿರಿಯುವ ವೇದನೆಗಳನ್ನು ಹೇಳಿಕೊಂಡರೆ ಎಷ್ಟೋ ಸಮಾಧಾನ.

ನಾವು ಯಾವುದಕ್ಕೋಸ್ಕರ ದೇವರನ್ನು ಪ್ರಾರ್ಥಿಸಬೇಕು? ನಮ್ಮ ಹತ್ತಿರ ಜಗತ್ತಿನ ಎಲ್ಲ ಸುಖಸಾಧನಗಳೂ ಇರಬಹುದು. ಆದರೆ ಅವು ಯಾವುವೂ



ನಮಗೆ ಮನಶ್ಶಾಂತಿಯನ್ನು ಕೊಡಲಾರವು. ನಾವು ಮನಸ್ಸು ಚಂಚಲವಾಗದಿರಲೆಂದು ಪ್ರಾರ್ಥಿಸಬೇಕು. ಮನಸ್ಸನ್ನು ಕಾಡುವ ಕೆಲವಂಶಗಳಿಂದ ದೂರವಾದರೆ ಮಾತ್ರ ನಮಗೆ ಮನಶ್ಶಾಂತಿ ಸಿಗುವುದು. ಇತರರು ನಮ್ಮನ್ನು ಕೆಣಕದಂತೆ ನಾವು ಇರಲು ಬಯಸಬೇಕು.

**"ಅವಿನಯಮಪನಯ"** (ದೇವರೇ ನನ್ನ ಅವಿನಯವನ್ನು ಹೋಗಲಾಡಿಸಿ ನನ್ನನ್ನು ವಿನಯಶಾಲಿಯನ್ನಾಗಿ ಮಾಡು)

**"ದಮಯ ಮನಃ"** (ನನ್ನ ಮನವನ್ನು ಸಂಯಮದಲ್ಲಿರಿಸು)

**"ಸಮಯ ವಿಷಯ ತೃಷ್ಣಾಂ"** (ಇಂದ್ರಿಯಾಭಿಲಾಷೆಗಳನ್ನು ನಿಗ್ರಹಿಸು)

**"ವಿಸ್ತಾರಯ ಭೂತದಯಾಂ"** (ಸಕಲ ಜೀವಿಗಳಲ್ಲಿಯೂ ಪ್ರೀತಿಯನ್ನು ಬೆಳೆಸು.)

ನಿಸ್ಸಂದೇಹವಾಗಿ ಮನುಷ್ಯ ತನ್ನ ಗರ್ವವನ್ನು ತೊರೆಯಬಲ್ಲವನಾದರೆ, ಮನಸ್ಸನ್ನು ಸಂಯಮಿಸಿ, ಇಂದ್ರಿಯಗಳನ್ನು ನಿಗ್ರಹಿಸಬಲ್ಲನಾದರೆ ಸಕಲ ಜೀವ ದಯಾಪರನಾದರೆ ಅವನಿಗೆ ತನ್ನಷ್ಟಕ್ಕೆ ತಾನೇ ಮನಶ್ಶಾಂತಿ ಒದಗುತ್ತದೆ, ಆಗವನು ಸಂಸಾರ ಸಾಗರವನ್ನು ದಾಟಬಲ್ಲನು. ಇದು ಎಲ್ಲರ ತುಟಿಗಳ ಮೇಲೆ ಇರಬೇಕಾದ ಪ್ರಾರ್ಥನೆ.

ನಿಜವಾದ ದೈವಭಕ್ತ ಕಷ್ಟಕೋಟಲೆಗಳನ್ನು ಮರುಮಾತಿಲ್ಲದೆ ಸಹಿಸುತ್ತಾನೆ. ಕಷ್ಟಗಳು ಮಾನವ ಜೀವನದಲ್ಲಿ ಸಹಜವಾದವು. ಆದರೆ ಹಾಗೆ ನೊಂದಾಗ ಎಷ್ಟೋ ಜನರು ದೇವರನ್ನು ದೂಷಿಸುತ್ತಾರೆ, ಅವನು ತಮ್ಮ ಬಗ್ಗೆ ಕುರುಡಾಗಿದ್ದಾನೆ ಎನ್ನುತ್ತಾರೆ; ಅವನ ಮೇಲೆ ಸಿಟ್ಟಾಗುತ್ತಾರೆ. ಆದರೆ ಅವನಿಂದಾದ ನೂರಾರು ಸಹಾಯಗಳನ್ನು, ಬಟ್ಟೆ, ಊಟ, ವಾಸದ ನೆಲೆ ಇವುಗಳ ಮೂಲಕ ಬಂದೊದಗಿದ ನೆಮ್ಮದಿಗಳನ್ನು ಮರೆತುಬಿಡುತ್ತಾರೆ. ಅವನ ದಯೆಯಿಲ್ಲದೆ ಅವೆಲ್ಲ ದೊರಕುವವೇನು? ಅವನ ವಿಚಾರದಲ್ಲಿ ಕೃತಜ್ಞತೆ ತೋರುವುದು ಬಿಟ್ಟು, ತಮಗಾದ ಸಣ್ಣಪುಟ್ಟ ತೊಂದರೆಗಳನ್ನೇ ಅತಿ ಮಾಡುತ್ತಾರೆ. ಆದರೆ ಆ ತೊಂದರೆಗಳಿಂದ ಅವರಿಗೆ ಮುಂದೆ ಒದಗುವ ಉಪಯೋಗಗಳನ್ನು ಅವರು ಗಮನಿಸುವುದಿಲ್ಲ. ಮಗು ಮಣ್ಣನ್ನು ತಿನ್ನುತ್ತದೆಂದು ತಾಯಿ, ಮಗುವಿನ ಕೈಗೆ ಬಟ್ಟೆ ಕಟ್ಟಿಬಿಡುತ್ತಾಳೆ. ಮಣ್ಣು ತಿನ್ನದಂತೆ ನೋಡಿಕೊಳ್ಳುತ್ತಾಳೆ. ಆದರೆ ಮಗು ಅಳುತ್ತದೆ, ತಾಯಿ ಅದನ್ನು ಕಂಡು ನಕ್ಕರೆ ಮಗು ಸಿಟ್ಟಾಗುತ್ತದೆ. ದೈವಕಾರುಣ್ಯದಿಂದ ನಮಗೆ ಸತ್ಫಲಗಳು ದೊರಕಿವೆ. ಕಷ್ಟಗಳನ್ನು ತಂದುಕೊಳ್ಳುವವರು ನಾವೇ. ಸರಿಯಾಗಿ ಹೇಳುವುದಾದರೆ ಕಷ್ಟಗಳು ನಮ್ಮ ಮೌಢ್ಯದಿಂದ ಒದಗಿಬಂದು ನಮ್ಮನ್ನು ಕಾಡುತ್ತವೆ. ಕೋಟಲೆ, ನೋವುಗಳು ಜೀವನಕ್ಕೆ ಔಷಧಿ ಇದ್ದ ಹಾಗೆ. ನಾವು ದೈವವನ್ನು ಪ್ರಾರ್ಥಿಸಿ ಕಷ್ಟಗಳನ್ನು ತಾಳಿಕೊಳ್ಳುವ ಶಕ್ತಿಯನ್ನೂ ಪಡೆಯಬೇಕು. ಭಕ್ತರು ಕಷ್ಟದಿಂದ ವಿಚಲಿತರಾಗುವುದಿಲ್ಲ.

**ಇ. ಜ್ಞಾನ ಸಂಪಾದನೆ**

ಎಲ್ಲ ಬಗೆಯಾದ ಕಷ್ಟಗಳಿಗೆ ಸುಜ್ಞಾನವೇ ಪರಮ ಪರಿಹಾರ. ಶರೀರವನ್ನೇ ತಮ್ಮ ಆತ್ಮವೆಂದು ನಂಬಿದ ಜನರ ಮಾನಸ ಸ್ಥಿತಿಯೇ ಈ ಕಷ್ಟ. ಇದನ್ನೇ ದೇಹಾತ್ಮಬುದ್ಧಿ ಎನ್ನುವುದು. ಆದರೆ ಮನುಷ್ಯನ ಶಾಶ್ವತವಾದ ಅವಿನಾಶಿಯಾದ ಸ್ವಭಾವವು ಅವನ ನಿಜವಾದ ಚೇತನ. ಅದೇ ಮಾನವನ 'ನಾನು' ಎಂಬುದು. ಅದನ್ನೇ ಶರೀರದೊಡನೆ ಸಮೀಕರಿಸಿ. ಸಂಶಯಕ್ಕೆ ಒಳಗಾಗಬಾರದು. ಸಾಕಷ್ಟು ಪ್ರಯತ್ನ ಮತ್ತು ಯೋಗಸಾಧನೆಗಳಿಂದ ಶರೀರ ಮತ್ತು ಅದರ ಅವಯವಗಳು ಬೇರೆ; 'ನಾನು' ಎಂಬುದು ಬೇರೆ ಎಂಬ ತಿಳಿವಳಿಕೆ ಪಡೆಯಬೇಕು. 'ಅಹಂ'ನ ಅನುಭವ ಶರೀರದಿಂದ ಬೇರೆ ಎಂದು ತಿಳಿಯಬೇಕು. ಇದು ಸಾಧ್ಯವಾದಾಗ ಎಲ್ಲ ಬಗೆಯ ಕ್ಲೇಶಗಳೂ ಶರೀರಕ್ಕಲ್ಲದೆ, ನನಗಲ್ಲ ಎಂಬ ಭಾವನೆ ಬಲಿಯುತ್ತದೆ. ಹೀಗೆ ತನ್ನ ಆತ್ಮವನ್ನು ಶರೀರದಿಂದ ಬೇರೆಯಾಗಿ ತಿಳಿದು, ಸಮರ್ಥನಾದ ಆಧ್ಯಾತ್ಮ ಗುರುವಿನ ಮುಖಾಂತರ, ಧ್ಯಾನದ ಮಾರ್ಗವಾಗಿ ಪರಮಾತ್ಮ ಸ್ವರೂಪವನ್ನು ತಿಳಿದು ಆತ್ಮನೇ ಬ್ರಹ್ಮನೆಂಬ ವೇದಾಂತದ ತತ್ತ್ವವನ್ನು ಅರಿಯುತ್ತಾನೆ. ಅಂತಿಮವಾಗಿ ಪರಮಾತ್ಮನಲ್ಲಿ ಐಕ್ಯನಾಗಿ ಅತ್ಯಂತ ಆನಂದಮಯವಾದ, ಬ್ರಹ್ಮನಲ್ಲಿ ಅಭಿನ್ನವಾಗಿ ಉಳಿಯುವ ಅನುಭವ ಪಡೆಯುತ್ತಾನೆ. ಪರಮಾತ್ಮನಲ್ಲಿ ಐಕ್ಯವಾಗುವ ಗುರಿಯನ್ನು ಮುಟ್ಟಿದ ಮೇಲೆ ಅದಕ್ಕಿಂತ ಯಾವುದೂ ಹಿರಿದಲ್ಲವೆಂದು ತಿಳಿಯುತ್ತಾನೆ. ಇದು ಪರಮಜ್ಞಾನಿಯ ನೆಲೆ. ಇದನ್ನು ಪಡೆದವ ಮಹಾಜ್ಞಾನಿ. ಅಂತಹ ಜ್ಞಾನಿಯನ್ನು ಯಾವ ಕ್ಲೇಶವೂ ಬಾಧಿಸದು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಇದನ್ನು ಅನುಮೋದಿಸಿದ್ದಾನೆ.

**ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ**
**ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಽಪಿ ವಿಚಾಲ್ಯತೇ**

ಸ್ವಲ್ಪ ವಿವೇಚನೆ ಇದ್ದವರೂ ಸಂದರ್ಭವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಕೆಲವರು ತಮ್ಮ ವೇದನೆಗಳನ್ನೂ ಕ್ಲೇಶಗಳನ್ನು ಹಗುರವಾಗಿ ಭಾವಿಸುವುದನ್ನು ಅಲ್ಲಲ್ಲಿ ನೋಡುತ್ತೇನೆ. ಅವರ ನೋವಿಗಾಗಿ ಯಾರಾದರೂ ಮರುಗಿದರೆ ಅವರು ಹೇಳುತ್ತಾರೆ, "ಓ ಅದೇನಿಲ್ಲ ಬಿಡಿ, ಅದೆಲ್ಲ ದೈವಸಂಕಲ್ಪ, ಅವರು ತಾಳ್ಮೆ ಮತ್ತು ಚಿತ್ತಶಾಂತಿಯಿಂದ ತಮ್ಮ ಕಷ್ಟಗಳನ್ನು ಎದುರಿಸುತ್ತಾ ನಗೆಮೊಗದಿಂದ ಜತನವಾಗಿ ಕಾಲ ಕಳೆಯುವರು. ಕಾಲವು ಎಲ್ಲ ನೋವುಗಳನ್ನೂ ಮಾಯಿಸುವುದು. ನಮ್ಮ ಇಂದಿನ ವೇದನೆಗಳು ಕಾಲಾನುಕಾಲಕ್ಕೆ ಕರಗಿ ಏನೂ ಅಲ್ಲವಾಗುತ್ತವೆ. ಜ್ಞಾನಿಯು ತನಗೊದಗಿದ ವೇದನೆಗಳನ್ನು ಮೂವತ್ತು ವರ್ಷಗಳ ಅನಂತರದ ದೃಷ್ಟಿಯಿಂದ ವೀಕ್ಷಿಸುತ್ತಾನೆ. ಆತನಿಗೆ ನಗೆಯುಂಟಾಗುವುದರಲ್ಲಿ



ಆಶ್ಚರ್ಯವೇನು? ಹಾಗೆ ಮಾಡುವುದರಿಂದ ಅವನ ಕ್ಲೇಶದ ಮೊನಚು ಮಾಯವಾಗುವುದು. ಪ್ರಪಂಚದ ಇನ್ನೊಂದು ಮೂಲೆಯಲ್ಲಿ ವ್ಯಸನಪಡುತ್ತಿರುವ ಮನುಷ್ಯನ ವೇದನೆಯಿದು ಎಂಬಂತೆ ತನ್ನ ವೇದನೆಯನ್ನು ಮಮಕಾರಶೂನ್ಯವಾಗಿ ಅನುಭವಿಸುವನು. ಕಾಯದ ಕ್ಲೇಷಗಳನ್ನು ಜ್ಞಾನಿಯು ವರ್ತಮಾನದಿಂದ ಪ್ರತ್ಯೇಕಿಸಿ ನೋಡಬಲ್ಲ. ಅವನದು ಕಾಲ ದೇಶಗಳನ್ನು ಮೀರಿ ನಿಲ್ಲಬಲ್ಲ ದೃಷ್ಟಿ.

ನಮ್ಮಲ್ಲಿ ಗುರುವನ್ನು ದೈವವೆಂದು ಭಾವಿಸುತ್ತೇನೆ.

**ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ**
**ತಸ್ಯೈತೇ ಕಥಿತಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ**

ಯಾರಲ್ಲಿ ದೈವಭಕ್ತಿ ಇದೆಯೋ ಅವನು ಅಂತಹ ಭಕ್ತಿಯನ್ನು ಗುರುವಿನಲ್ಲಿಯೂ ತಳೆದಿರುತ್ತಾನೆ; ಆತನಿಗೆ ಹೇಳಿಕೊಂಡ ಎಲ್ಲ ವಿಚಾರಗಳೂ ಮತ್ತು ಹೇಳದೆಯೇ ಹೋದ ವಿಚಾರಗಳು ವಿಶದವಾಗಿತಿಳಿದುಬರುತ್ತದೆ.

ಗುರುವು ಸಮಸ್ತ ದೈವಸ್ವರೂಪನಾದವನು. ಆತನನ್ನು ಬ್ರಹ್ಮನೆಂದು ಪ್ರಾರ್ಥಿಸುತ್ತೇನೆ, ವಿಷ್ಣು ಮತ್ತು ಮಹೇಶ್ವರನೂ ಆತನೇ. ಗುರುವಿನ ಪ್ರಾರ್ಥನೆ ಹೀಗಿದೆ.

**ಗುರುರ್ಬ್ರಹ್ಮಾ ಗುರುರ್ವಿಷ್ಣು, ಗುರುರ್ದೇವೋ ಮಹೇಶ್ವರಃ**
**ಗುರುಸ್ಸಾಕ್ಷಾತ್ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ॥**

ಗುರುವನ್ನು ಸಾಕ್ಷಾತ್ ದೈವವೆಂದು ಭಾವಿಸಿ ಅಧ್ಯಾತ್ಮದ ಹಾದಿಯಲ್ಲಿ ನಡೆದ ಆಕಾಂಕ್ಷಿಯು ತನ್ನ ಶ್ರದ್ಧಾ, ವಿನಯಗಳಿಮದ ಮತ್ತು ಸೇವೆಯಿಂದ ಆತನನ್ನು ಮೆಚ್ಚಿಸುವನು. ಶಿಷ್ಯನ ಶ್ರದ್ಧಾಭಕ್ತಿಯ ಸೇವೆಗೆ ಸುಪ್ರೀತನಾದ ಗುರುವು ಸತ್ಯಶೋಧನೆಯ ಹಾದಿಗೆ ಅವನನ್ನು ಪರಿಚಯಿಸುವನು. ಶಿಷ್ಯನು ಧ್ಯಾನ ತಪಸ್ಸುಗಳ ಮೂಲಕ ತಾನೇ ಅದನ್ನು ಕಂಡುಕೊಳ್ಳುವನು. ಉಪದೇಶಪಂಚಕದಲ್ಲಿ ಹೇಳುವಂತೆ "ಬ್ರಹ್ಮಾಸ್ಮೀತಿ ವಿಭಾವ್ಯತಾಂ"; ಆತನು ತಾನೇ ಬ್ರಹ್ಮನೆಂದು ಧ್ಯಾನಿಸುತ್ತಾನೆ. ಜ್ಞಾನಮಯಾತ್ಮನಾಗಿ ತನ್ನ ಪ್ರತ್ಯೇಕತೆಯ ಕುರುಹು ಅಳಿದು ಪರಮಾತ್ಮನಲ್ಲಿ ನೆಲೆಸಿರುವನು. "ಪರಬ್ರಹ್ಮಾತ್ಮನಾ ಸ್ಥೀಯತಾಮ್."

ಪರಮಜ್ಞಾನವು ಗುರುಮುಖೇನ ಪಡೆದ, ಮತ್ತು ಶಿಷ್ಯನ ಧ್ಯಾನ ತಪೋವಿಧಾನಗಳಿಂದ ದೊರಕಿದ ಪರಮಾರ್ಥ. ಈ ಸ್ಥಿತಿಯಲ್ಲಿ ಶಿಷ್ಯ ಕರ್ಮದ ಶೃಂಖಲೆಗಳಿಂದ ಮುಕ್ತನಾಗಿದ್ದಾನೆ ಮತ್ತು ಇಹಜೀವನದಲ್ಲಿಯೇ ಮುಕ್ತನಾಗಿರುತ್ತಾನೆ ಇದನ್ನೇ 'ಜೀವನ್ಮುಕ್ತಿ' ಎಂದು ಕರೆಯುವುದು. ನಮ್ಮ ಧರ್ಮದಲ್ಲಿ ಇದನ್ನೇ ಸತ್ಯದ ಪಥವೆಂದು ಕರೆದಿದೆ. ಇದು ನಮ್ಮ ಜೀವನೋದ್ದೇಶವಾಗಿದೆ.

* * * *

## ೬. ಗೀತೆಯು ತೋರುವ ದಾರಿ

ಶ್ರೀಕೃಷ್ಣನು ಹಲವಾರು ಬಗೆಯಲ್ಲಿ ಅರ್ಜುನನಿಗೆ ಉಪದೇಶಿಸಿ ಕೊನೆಯಲ್ಲಿ ಹೀಗೆ ಸಮಾರೋಪಿಸುತ್ತಾನೆ : "ಓ ಭಾರತ, ನೀನು ಈ ಕಾರಣಗಳಿಗಾಗಿ ಯುದ್ಧ ಮಾಡು." ಈ ಕಾರಣಗಳಿಗಾಗಿ ಎನ್ನುತ್ತ, ಯುದ್ಧವನ್ನೇಕೆ ಮಾಡಬೇಕು ಎಂಬುದಕ್ಕೆ ಹಲವು ಕಾರಣಗಳನ್ನು ಕೊಡುತ್ತಾನೆ. "ಯುದ್ಧವು ನಿನ್ನ ಧರ್ಮ, ಆದ್ದರಿಂದ ಹೋಗಿ ಯುದ್ಧ ಮಾಡು. ನಿನ್ನ ಕರ್ಮವನ್ನು ಮಾಡು" ಎನ್ನುತ್ತಾನೆ ಕೃಷ್ಣ. "ಅರ್ಜುನನ ಕರ್ತವ್ಯವು ಹೋರಾಟ ಮಾಡುವುದು. ಅದು ಅವನ ಕರ್ಮವಾಗಿದೆ." ಅಲ್ಲದೆ ಯಾರು ತಮ್ಮ ಕರ್ತವ್ಯವನ್ನು ಅಂದರೆ, ಕರ್ಮವನ್ನು ನಿಷ್ಠೆಯಿಂದ ಮಾಡುವದೋ ಅವರನ್ನು ಕೃಷ್ಣನು ಪ್ರಶಂಸೆ ಮಾಡುತ್ತಾನೆ.

**ಯಜ್ಞಾರ್ಥಾತ್ ಕರ್ಮಣಾನ್ಯತ್ರ ಲೋಕೋಯಂ ಕರ್ಮಬಂಧನಃ**
**ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ॥**

ಕರ್ಮವನ್ನು ಅತೀವ ಶ್ರದ್ಧೆಯಿಂದ ಮಾಡುತ್ತ ದೇವಾರ್ಪಿತವೆಂದು ಭಾವಿಸಬೇಕು. "ನಿನ್ನ ಕರ್ಮವನ್ನು ಮಾಡು; ಫಲವು ದೈವಾರ್ಪಿತವಾಗಲಿ." ಪ್ರತಿಯೊಬ್ಬ ಮನುಷ್ಯನೂ ತನಗೆಂದು ನಿಗದಿಯಾದ ಕರ್ಮವನ್ನು ಮಾಡಲೇಬೇಕು. ಅವರವರಿಗೆ ತಕ್ಕ ಕೆಲಸವನ್ನು ಭಗವಂತನು ನಿಗದಿಮಾಡಿಯೇ ಇರುತ್ತಾನೆ. ಭಗವಂತನ ಅಭಿಪ್ರಾಯದಂತೆಯೇ ಯಾರ ಪಾಲಿಗೆ ಎಂತಹ ಕೆಲಸವೋ ಅದು ನಿಗದಿಯಾಗಿರುತ್ತದೆ ಎಂದು ಶಾಸ್ತ್ರಗಳಿಂದ ತಿಳಿದುಬರುತ್ತದೆ.

**ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ**
**ಕಾರ್ಯಾಕಾರ್ಯ ವ್ಯವಸ್ಥಿತೌ॥**

"ನಿಮಗೆ ಯಾವುದು ಸೂಕ್ತವೆಂದು ತಿಳಿಯಬೇಕಾದರೆ ನೀವು ಶಾಸ್ತ್ರಗಳನ್ನು ಓದಿ ತಿಳಿದುಕೊಳ್ಳಬೇಕು. ಶಾಸ್ತ್ರವು ನಿಮಗೆ ಯಾವ ಕರ್ತವ್ಯ ತಕ್ಕುದೆಂದು ಹೇಳಿದೆಯೋ ಅದನ್ನೇ ನೀವು ಮಾಡಬೇಕು. ನೀನೊಬ್ಬ ಕ್ಷತ್ರಿಯ. ಯುದ್ಧ ಮಾಡುವುದು ನಿನ್ನ ಕರ್ತವ್ಯವೆಂದು ತಿಳಿ."



ಕರ್ಮಗಳನ್ನು ನಡೆಸಬೇಕು ಎಂಬುದೇ ಶ್ರೀಕೃಷ್ಣನ ಅಭಿಪ್ರಾಯವೆಂದು ಮೇಲುನೋಟಕ್ಕೆ ನಿಮಗೆ ತೋರಬಹುದು. ಲೋಕಮಾನ್ಯ ಬಾಲಗಂಗಾಧರ ತಿಲಕರು ಗೀತೆಯನ್ನು ಕರ್ತವ್ಯ ಉಪದೇಶಾಮೃತವೆಂದು ಕರೆದಿದ್ದಾರೆ. ಭಗವಂತನ ವಾಣಿಯೂ ಈ ಅಭಿಪ್ರಾಯವನ್ನು ಪುಷ್ಟೀಕರಿಸುವಂತಿದೆ. ಆತನು ಪುನಃ ಪುನಃ "ಕಲಿತನದಿಂದ ಹೋರಾಡು; ಅದುವೇ ನಿನ್ನ ಧರ್ಮ. ಪ್ರತಿಯೊಬ್ಬರಿಗೂ ಅವರ ಧರ್ಮವೇ ಬಲವತ್ತರವಾದ ಆಧಾರ."

**'ಸ್ವಕರ್ಮಣಾ ತಮಭ್ಯರ್ಚ್ಯ'**; ಸ್ವಕರ್ಮ ನಿರತನಾಗಿರುವುದೇ ಭಗವಂತನಿಗೆ ನಾವು ಮಾಡುವ ಪೂಜೆ.

**ಯಜ್ಞಾರ್ಥಾತ್ ಕರ್ಮಣೋನ್ಯತ್ರ** – ಇಲ್ಲಿ ಯಜ್ಞವೆಂಬ ಪದಕ್ಕೆ ಪರಮಗುರುವಾದ ಪರಮಾತ್ಮ, ವಿಷ್ಣು ಎಂಬುದೇ ಅರ್ಥ. ಯಜ್ಞವೆಂದರೆ ಆಹುತಿ ಎಂದೂ ಅರ್ಥವಿದೆ. ದೈವವನ್ನು ಪರಿಭಾವಿಸಿ ನಿನ್ನ ಕರ್ಮಗಳನ್ನು ನಡೆಸು, ನೀನೇನು ಮಾಡುತ್ತೀಯೋ ಅದನ್ನು ಆತನಿಗೇ ಸಮರ್ಪಿಸು.

ಇವೆಲ್ಲದರಿಂದ ಸೂಚಿತವಾಗುವುದೇನು? ಗೀತೆಯು ಕರ್ಮಕ್ಕೆ ಪ್ರಾಧಾನ್ಯ ಕೊಡುತ್ತದೆ,

ಆದರೆ ಗೀತೆಯ ಕೆಲವು ವಾಕ್ಯಗಳು ವಿರುದ್ಧಾರ್ಥವನ್ನು ಹೇಳುವಂತಿವೆ.

**'ತೂಷ್ಣೀಂ ಕಿಂಚಿದಚಿಂತಯನ್'**

'ಬೇರೇನನ್ನೂ ಆಲೋಚಿಸದೆ ಉಸಿರು ಬಿಗಿ ಹಿಡಿದು ಕುಳಿತುಕೊ.'

**'ಮೂರ್ಧನ್ಯಾಧಾಯ ಆತ್ಮನಃ ಪ್ರಾಣಂ'**; ಉಸಿರನ್ನು ನೆತ್ತಿಯಲ್ಲಿ ನಿಲ್ಲಿಸಿ ಪರಮಾತ್ಮನ ಸ್ವರೂಪವನ್ನು ಕುರಿತು ಧ್ಯಾನಿಸು.

**ಯಃ ಸರ್ವತ್ರಾನಭಿಸ್ನೇಹಃ ತತ್ತತ್ ಪ್ರಾಪ್ಯ ಶುಭಾಶುಭಂ**
**ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ॥**

ಅಲ್ಲದೆ,

**ಯಸ್ತ್ವಾತ್ಮರತಿರೇವ ಸ್ಯಾತ್ ಆತ್ಮತೃಪ್ತಶ್ಚ ಮಾನವಃ**
**ಆತ್ಮನ್ಯೇವ ಚ ಸಂತುಷ್ಟಃ ತಸ್ಯ ಕಾರ್ಯಂ ನ ವಿದ್ಯತೇ॥**

ಮೇಲ್ಕಂಡ ಶ್ಲೋಕಗಳಲ್ಲಿ ಶ್ರೀಕೃಷ್ಣನು ಯಾರ ಮನಸ್ಸು ಸಂಯಮವನ್ನು ಪಡೆದಿರುವುದೋ ಅವರಲ್ಲಿ ಆಲೋಚನೆ, ಮಾತು, ದೃಷ್ಟಿ ಅಥವಾ ಶ್ರವಣಗಳು ಇರುವುದಿಲ್ಲ. ಯಾರು ಸಮಾಧಿಸ್ಥರೊ ಅವರು ಏನನ್ನೂ ಮಾಡಬೇಕಿಲ್ಲ. 'ತಸ್ಯ ಕಾರ್ಯಮನವಿದ್ಯತೇ.'

ಪುನಃ ಭಗವಂತನು ಹೇಳುತ್ತಾನೆ: 'ಜನಜಂಗುಳಿಯ ನಡುವೆ ವಾಸ ಮಾಡಬೇಡಿರಿ. ಏಕಾಂತದ ಬಾಳುವೆಗೆ ತಕ್ಕ ಸ್ಥಳವನ್ನು ಹುಡುಕಿಕೊಳ್ಳಿ. ಬೆಟ್ಟದ ಮೇಲಾದರೂ ಸರಿ ಕಾಡಿನೊಳಗಾದರೂ ಸರಿಯೆ. ಯಾರೊಂದಿಗೂ ನುಡಿಯದಿರಿ.' ಇದೂ ಆತನ ಉಪದೇಶವೇ.

ಯಾರಾದರೂ ಮನುಷ್ಯರ ಬಿಡಾರಗಳಿಂದ ದೂರ ಉಳಿದು ಹೋರಾಡುವುದು ಹೇಗೆ? ಏಕಾಂತವಾಸಕ್ಕೂ ಹೋರಾಟಕ್ಕೂ ನಡುವೆ ಏನು ಹೊಂದಾಣಿಕೆ ಇದ್ದೀತು? ಭಗವಂತನೂ ಹೀಗೆಯೇ ಹೇಳಿದ್ದಾನೆ. ಹಾಗೆಯೂ ಹೇಳಿದನಲ್ಲದೆ,

ಇನ್ನೊಂದು ಸಂದರ್ಭದಲ್ಲಿ '**ವಾಸುದೇವಂ ಸರ್ವಂ ಇತಿ**'. ಎಲ್ಲದರಲ್ಲಿಯೂ ವಾಸುದೇವನನ್ನೇ ಕಾಣುವ ಕೆಲವು ಅಪರೂಪದ ಸಂತರನ್ನು ಆತನು ಪ್ರಶಂಸೆ ಮಾಡುತ್ತಾನೆ.

ಏಕಾಂಗಿಯಾಗಿ ಇರು. ಅತಿಯಾಗಿ ಭೋಜನ ಮಾಡಬೇಡ. ಯಾರು ಬಹಳ ತಿನ್ನುವರೋ ಅವರು ಯೋಗಾಭ್ಯಾಸ ಮಾಡಲಾರರು. 'ನಾಸ್ತ್ಯಾಶನಸ್ತು ಯೋಗಃ'. ಆದರೆ ಹಸಿದು ಇರಬೇಡ; '*ನಚೈಕಾಂತಮನಸ್ನಾತಃ*.'

ಹೀಗೆಯೇ ನೋಡುತ್ತ ಹೋದರೆ ಗೀತೆಯ ತುಂಬಾ ವಿರೋಧಾಭಾಸದ ಹೇಳಿಕೆಗಳೇ ಇರುವವು. ವಿದ್ವಾಂಸರೂ ಮಹಾಜ್ಞಾನಿಗಳೂ ತದ್ವಿರುದ್ಧವಾದ ಈ ಹೇಳಿಕೆಗಳಿಗೆ ಸುಸಂಗತವಾದ ತೀರ್ಮಾನಗಳನ್ನು ಕೊಡಲು ಪ್ರಯತ್ನ ಪಟ್ಟಿದ್ದಾರೆ. ಈ ಪ್ರಯತ್ನದಲ್ಲಿ ಭಕ್ತಿ, ಕರ್ಮ ಮತ್ತು ಜ್ಞಾನಗಳಲ್ಲಿ ಯಾವುದಾದರೂ ಒಂದನ್ನು ಇನ್ನೆರಡು ತತ್ತ್ವಗಳಿಗೆ ಅಧೀನಪಡಿಸುವ ಪ್ರಯತ್ನವೂ ಆಗಿದೆ. ಇವೆರಡು ತತ್ತ್ವಗಳನ್ನು ಮೂರನೆಯ ತತ್ತ್ವವು ಅನುಸರಿಸಿಕೊಂಡಿರುವುದೆಂದು ಅವರ ತೀರ್ಮಾನ.

ಗೀತೆಯ ಒಂದು ಹೇಳಿಕೆಯು ಮೇಲ್ನೋಟದ ವಿರೋಧಾಭಾಸಗಳಿಗೆ ಹೊಂದಾಣಿಕೆಯ ಪ್ರಯತ್ನಕ್ಕೆ ಅವಕಾಶವನ್ನು ನೀಡಿದೆ.

**ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ**

'ಪ್ರತಿಯೊಬ್ಬರೂ ತಮಗೆಂದು ನಿಗದಿಯಾದ ಕರ್ಮಗಳನ್ನು ಶಾಸ್ತ್ರೋಕ್ತವಾಗಿ ಮಾಡಲಿ. ಮಾಡುತ್ತ ಅದನ್ನು ದೈನಾರ್ಪಿತವೆನ್ನಲಿ.'

ಈ ರೀತಿಯಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾದಾಗ ಅದರ ಪರಿಣಾಮವೇನಾಗುವುದು? ಇಂತಹ ಕಾರ್ಯಗಳಿಂದ ಚಿತ್ತ ಶುದ್ಧಿಯಾಗುವುದು.



ಈ ಚಿತ್ತಶುದ್ಧಿಯೇ ಮೋಕ್ಷ. ಹಾಗಿದ್ದರೆ ಕರ್ಮಗಳನ್ನು ನೆರವೇರಿಸಿದರೆ ಸಾಕು. ಗೀತೆಯಲ್ಲಿ ತಿಳಿಸಿದ ಭಕ್ತಿ, ಜ್ಞಾನ, ಯೋಗಗಳ ಆವಶ್ಯಕತೆಯೇ ಇಲ್ಲ. ಭಗವಂತನು ಮುಂದುವರಿಸುತ್ತಾನೆ.

**'ಸ್ವಕರ್ಮನಿರತಃ ಸಿದ್ಧಿಂ ಯಥಾವಿಂದತಿ ತಚ್ಛೃಣು'**

"ಚಿತ್ತ ಶುದ್ಧಿಯುಳ್ಳ ಮಾನವನು ಹೇಗೆ ಸಫಲತೆಯನ್ನು ಪಡೆಯುವನೆಂಬುದನು ಹೇಳುತ್ತೇನೆ ಕೇಳು. ಪರಮಾತ್ಮನನ್ನು ಅರಿಯಲು ಚಿತ್ತಶುದ್ಧಿಯೇ ಮಾರ್ಗ. ಮುಂದಿನ ಸಾಧನೆಗಳಿಗೆ ಅದುವೇ ತಳಹದಿ. ಅಥವಾ ಪ್ರಥಮ ಸೋಪಾನ. ಮೊದಲು ಮನಃಶುದ್ಧಿ, ಅನಂತರ ಆತ್ಮಸಂಯಮ. ಹೀಗೆ ಒಂದಾದ ಮೇಲೊಂದು ಹೆಜ್ಜೆ ಇಡತಕ್ಕದ್ದು."

ಒಬ್ಬ ಮನುಷ್ಯ ದುಃಖದಲ್ಲಿ ಮುಳುಗಿಹೋಗುತ್ತಾನೆ ಎಂದುಕೊಳ್ಳಿ. ಅವನು ಅಳತೊಡಗುವನು. ಅಥವ ಭಯದಲ್ಲಿ ಮುಳುಗುವನು ಅಥವ ಅವನು ಕಾಮಪೀಡಿತ ನಾಗುತ್ತಾನೆ. ಇದರ ಅರ್ಥವೇನು? ಏನೆಂದರೆ ಅವನು ಚಿತ್ತಶುದ್ಧಿಯನ್ನು ಪಡೆದಿಲ್ಲವೆಂದರ್ಥ. ಯಾರು ದುಃಖ, ಕ್ರೋಧ, ಕಾಮ, ಮಾಯೆಗಳಿಂದ ಬಿಡುಗಡೆ ಹೊಂದಿರುತ್ತಾರೋ ಅವರು ಮಾತ್ರ ದೈವ ಸಾಯುಜ್ಯವನ್ನು ಪಡೆಯಬಲ್ಲರು. ಚಿತ್ತಶುದ್ಧಿಯನ್ನು ಪಡೆಯಬೇಕೆನ್ನುವವರು ತಮ್ಮ ತಮ್ಮ ಕರ್ಮಗಳನ್ನು ಉತ್ತಮವಾಗಿ ಮಾಡಬೇಕು. 'ನೀನು ಕ್ಷತ್ರಿಯನಾದುದರಿಂದ ಹೋರಾಟವು ನಿನ್ನ ಕರ್ತವ್ಯ. ಅದನ್ನು ಮನಸ್ಸಿಟ್ಟು ಸಾಧಿಸು.'

"ಉತ್ತಮವಾದ ರೀತಿಯಲ್ಲಿ, ಸಂಪೂರ್ಣವಾಗಿ ನಿನ್ನ ಕರ್ಮಗಳನ್ನು ನೆರವೇರಿಸು, ಆ ಮೂಲಕವಾಗಿ ನಿನ್ನ ಮನಸ್ಸನ್ನು ಕಲುಷಿತವಾಗಿಸುವ ಎಲ್ಲ ದುಷ್ಟ ಕಾಮನೆಗಳೂ ದೂರವಾಗುತ್ತವೆ. ನಿನ್ನ ಮನಸ್ಸನ್ನು ಕವಿಯುವ ಮಾಯಾಪಾಶಗಳು, ನಿರಾಶೆ, ಕ್ರೋಧ, ದ್ವೇಷ, ಅಸೂಯೆಗಳೆಲ್ಲದರಿಂದ ನೀನು ಪಾರಾಗುವೆ. ಇಂದ್ರಿಯಗಳು ಹತೋಟಿಗೆ ಬರುತ್ತವೆ. ನಿನ್ನ ಮನಸ್ಸು ಪರಿಶುದ್ಧವಾಗುವುದು. ಆಗ ಪರಿಪೂರ್ಣತೆಯ ಹಾದಿ ಸುಲಭವಾಗುತ್ತದೆ. ಆದ್ದರಿಂದ ಮನಸ್ಸನ್ನು ಪರಿಶುದ್ಧವಾಗಿಟ್ಟುಕೊಳ್ಳಲು ನಾವು ನಮ್ಮ ಕರ್ಮಗಳನ್ನು ಶ್ರದ್ಧೆಯಿಂದ ಮಾಡತಕ್ಕುದು.

ಅನಂತರ ಭಗವಂತನು ಮುಂದುವರಿಸುತ್ತಾನೆ,

**ಸಿದ್ಧಿಂ ಪ್ರಾಪ್ತೋ ಯದಾ ಬ್ರಹ್ಮ ತಥಾಽಽಪ್ನೋತಿ ನಿಬೋಧ ಮೇ**
**ಸಮಾಸೇನೈವ ಕೌಂತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ॥**

ಜ್ಞಾನದ ಅಂತಿಮ ಗುರಿಯೇ ಪರಮಾತ್ಮನ ಅರಿವು. ಇದು ಚಿತ್ತಶುದ್ಧಿಯ ಸಾಧನೆಯನ್ನು ಹಿಂಬಾಲಿಸಿ ಒದಗಿಬರುವುದು. ಚಿತ್ತಶುದ್ಧಿಯು ಮುಂದೆ ಯೋಗಸಿದ್ಧಿಗೆ

ದಾರಿ ಮಾಡಿಕೊಡುತ್ತದೆ. ಅಲ್ಲಿಂದ ಅದು ಜ್ಞಾನಸಿದ್ಧಿಯ ಮಾರ್ಗವನ್ನು ತೆರೆಯುವುದು. ಜ್ಞಾನಸಿದ್ಧಿಯ ತುದಿಯನ್ನು ಮುಟ್ಟುತ್ತಿರುವಂತೆಯೇ ಪರಮಾತ್ಮನ ಅರಿವು ಮೈದೋರುತ್ತದೆ. ತಾನು ಪರಮಾತ್ಮನಲ್ಲಿ ಅವಿನಾಭಾವವನ್ನು ತಾಳುತ್ತಾನೆ. ಮಾತು ಅಲ್ಲಿ ಮೌನದಲ್ಲಿ ಕರಗಿ ಹೋಗುತ್ತದೆ. ಮಾತನಾಡಲು ಅಲ್ಲಿ ಇನ್ನೊಬ್ಬರು ಇದ್ದರೆ ತಾನೇ! ಪರಿಪೂರ್ಣತೆಯ ಹಂತದಲ್ಲಿ ನಮಗೆ ಸ್ನೇಹಿತರು ಶತ್ರುಗಳು ಎಂಬ ಭೇದವೇ ಕಾಣದು. ಅಲ್ಲಿ ಅನ್ಯರು ಯಾರೂ ಇಲ್ಲ. ಅನ್ಯರು ಇಲ್ಲದಿದ್ದಾಗ ಕ್ರಿಯೆಗಳು ಇಲ್ಲ. ನಮ್ಮ ಸಾಮಾನ್ಯಲೋಕಕ್ಕೆ ದೂರವಾದ, ವಿಶ್ವಾತ್ಮ ಸಾಧಾರಣವಾದ ಆಸ್ಥಿತಿ ಹೇಗಿರುವುದೆಂದರೆ 'ತಸ್ಯ ಕಾರ್ಯಂ ನ ವಿದ್ಯತೇ' ಆತನಿಗೆ ಅಲ್ಲಿ ಮಾಡುವುದಕ್ಕೇನೂ ಇಲ್ಲ. ಏಕೆಂದರೆ ಏನಾದರೂ ಮಾಡಬೇಕೆಂದರೆ ಇಬ್ಬರ ಅಸ್ತಿತ್ವವಿರಬೇಕು.

ಆದರೆ ಅರ್ಜುನನ ಮನಸ್ಥಿತಿಯನ್ನು ಕುರಿತು ಹೇಳುವಾಗ, ಯುದ್ಧವು ಇನ್ನೂ ತೊಡಗುವ ಮೊದಲು, ಅವನ ಕರ್ತವ್ಯವೇನು? ತನ್ನ ಪಾಲಿನ ಕರ್ಮವನ್ನು ಕೈಗೊಳ್ಳುವುದು. ಕರ್ಮವನ್ನು ನಡೆಸಿದುದರಿಂದ ಚಿತ್ತಶುದ್ಧಿಯನ್ನು ಪಡೆಯುತ್ತಾನೆ. ಆಗ ಆತನು ದಾಯಾದಿಗಳನ್ನು ಕೊಲ್ಲಬೇಕಲ್ಲ ಎಂದು ದುಃಖಿತನಾಗುವುದಿಲ್ಲ. ಪರಿಪೂರ್ಣತೆಯ ಹಾದಿಯಲ್ಲಿ ನಡೆಯತೊಡಗಿದ್ದಾನೆ. ಆ ದಾರಿಯಲ್ಲಿ ಮೊದಲ ಹಂತವೇ ಕರ್ಮ.

ಭಗವಂತನ ಅಭಿಪ್ರಾಯದಂತೆ ಚಿತ್ತಶುದ್ಧಿಯನ್ನು ಹಿಂಬಾಲಿಸಿ ಭಕ್ತಿಯು ಹಿಂಬಾಲಿಸುತ್ತದೆ. ಭಕ್ತಿಯ ಮೂಲಕವಾಗಿಯೇ ನೀವು ನನ್ನ ನಿಜಸ್ವರೂಪವನ್ನು ಅರಿಯುವಿರಿ.

**ಭಕ್ತ್ಯಾ ಮಾಮ್ ಅಭಿಜಾನಾತಿ**
**ಯಾವಾನ್ ಯಶ್ಚಾಸ್ಮಿ ತತ್ತ್ವತಃ**
**ತತೋ ಮಾಂ ತತ್ತ್ವತೋ ಜ್ಞಾತ್ವ ವಿಶತೇ ತದನಂತರಂ॥**

ಭಕ್ತಿಯ ಮೂಲಕವಾಗಿ ಮಾತ್ರ ನಾವು ದೈವಸ್ವರೂಪವನ್ನರಿಯುತ್ತೇವೆ ಎನ್ನುವುದಾದರೆ, ದೇವನನ್ನರಿಯದೆ ಅವನ ಬಗೆಗೆ ಭಕ್ತಿಯನ್ನು ತಾಳುವುದೆಂತು ಎಂದು ಹಲವರು ಕೇಳುವರು. ಭಕ್ತಿಯುಂಟಾಗಬೇಕಾದರೆ ಅವನ ಸ್ವರೂಪ ತಿಳಿಯಬೇಕಲ್ಲವೆ? ಆದರೆ ಕೃಷ್ಣನು ಹೇಳುತ್ತಾನೆ. "ಭಕ್ತಿಯ ಮೂಲಕವಾಗಿ ಮಾತ್ರ ನೀವು ನನ್ನನ್ನು ಅರಿಯಬಲ್ಲಿರಿ." ಇದು ಪರಸ್ಪರ ವಿರುದ್ಧವಾಯಿತಲ್ಲವೇ."

ಭಗವಂತನಲ್ಲಿ ಭಕ್ತಿಯುಂಟಾಗುವುದಕ್ಕೆ ಆತನನ್ನು ಮೊದಲೇ ತಿಳಿದಿರುವ ಆವಶ್ಯಕತೆಯಿಲ್ಲ. ಮೊದಲಿಗೆ ನಾವು ದೇವಸ್ಥಾನದಲ್ಲಿ ದೇವರಿದ್ದಾನೆ ಎಂದುಕೊಳ್ಳುತ್ತೇವೆ. ಅನಂತರ ಆತನು ಗರ್ಭಗುಡಿಯಲ್ಲಿದ್ದಾನೆ ಎಂದುಕೊಳ್ಳುವೆವು. ಅಲ್ಲಿ ಆತನು



ಶಿಲಾಮೂರ್ತಿಯಲ್ಲಿ ನೆಲೆಸಿದ್ದಾನೆ, ಬೇರೆಲ್ಲಿಯೂ ಅಲ್ಲ ಎನ್ನಿಸಿತು, ಅಥವಾ ಆತನು ಶಿಖರದಲ್ಲಿ ನೆಲೆಸಿರುತ್ತಾನೆ ಎಂದುಕೊಂಡೇವು.

ವಿಷ್ಣುವಿನ ದೇವಾಲಯಗಳಲ್ಲಿ ಭಕ್ತಾದಿಗಳಿಗೆ ಪ್ರಸಾದ ವಿತರಿಸುವುದುಂಟು. ಪೂಜೆಯ ಅಂಗವಾಗಿ ಈ ಕ್ರಮವಿರುವುದು. ದೇವಾರ್ಪಿತನಾದ ಆಹಾರವನ್ನು ಪ್ರಸಾದವೆಂದು ಎಲ್ಲರಿಗೂ ಹಂಚುವರು. ಅದನ್ನು ಭಕ್ತಿಯಿಂದ ಅಂಗೈಗಳಲ್ಲಿ ಸ್ವೀಕರಿಸಿ ತಿನ್ನುವರು. ಕೈಯಲ್ಲಿ ಉಳಿದ ಶೇಷವನ್ನು, ಕಂಬಗಳಿಗೆ ಒರೆಸಿಬಿಡುತ್ತಾರೆ. ಈಗ ಕಂಬದಲ್ಲಿಯೂ ದೇವರಿದ್ದಾನೆಂದು ತಿಳಿದರೆ ಜನ ಹಾಗೆ ಮಾಡುವರೆ? ಆ ಹೊತ್ತಿನಲ್ಲಿ ಅವರು ದೇವರ ಗರ್ಭಗುಡಿಯ ಮೂರ್ತಿಯಲ್ಲಿ ಮಾತ್ರ ನೆಲಸಿದ್ದಾನೆಂದು ಚೆನ್ನಾಗಿ ತಿಳಿದಿದ್ದರು. ಆತನು ಕಂಬದಲ್ಲಿ ಇಲ್ಲವೆಂದುಕೊಂಡರು.

ಭಕ್ತಿಯ ಪಥದಲ್ಲಿ ನಡೆಯಲು ಈ ಆಲೋಚನೆ ಸಾಕು. ನಮ್ಮ ಶಾಸ್ತ್ರ ಪುರಾಣಗಳಲ್ಲಿ ಭಗವಂತನನ್ನು ಯಾವ ರೂಪ ರೀತಿಗಳಲ್ಲಿ ವರ್ಣಿಸಿದ್ದಾರೋ ಅದನ್ನು ಮೊದಲು ಅರಿತು, ಅನಂತರ ಆತನ ನಾಲ್ಕು ಕೈಗಳಲ್ಲಿ ಅವುಗಳಲ್ಲಿ ಹಿಡಿದ ಶಂಖಚಕ್ರಗದಾಪದ್ಮಗಳನ್ನು, ಆತನ ವರ್ಣ, ಉಡುಪು ಎಲ್ಲವನ್ನೂ ಮನಸ್ಸಿನಲ್ಲಿಟ್ಟು ಕೊಳ್ಳುತ್ತಾರೆ. ಹೀಗೆ ಭಾವಿಸುತ್ತ ದಿನವೂ ದೇವಾಲಯಕ್ಕೆ ಹೋಗಿ ಪ್ರಾರ್ಥಿಸಿ ಬರುವ ಅಭ್ಯಾಸವಾದರೆ ಕ್ರಮವಾಗಿ ಭಕ್ತಿ ಬೆಳೆಯತೊಡಗುವುದು. ಹೀಗೆ ನೈಜವಾದ ಭಕ್ತಿ ಮೂಡಿದಾಗ, ದೇವರು ಮೂರ್ತಿಯಲ್ಲಿ ಮಾತ್ರವಲ್ಲ, ಎಲ್ಲೆಲ್ಲಿಯೂ ಇರುವನೆಂಬ ಭಾವ ಮೊಳೆಯುತ್ತದೆ. ಅಲ್ಲಿಂದ ದೈವದ ನೈಜಸ್ವರೂಪವನ್ನು ಭಕ್ತನು ಅರಿಯ ತೊಡಗುವನು. ದೇವರು ಯಾರು? (***ಯಾವನ್ ಯಶ್ಚಾಸ್ಮಿ ತತ್ವತಃ***)

ಮನುಷ್ಯರ ವೈಯಕ್ತಿಕ ಸಾಮರ್ಥ್ಯಗಳಿಗೆ ಅನುಸಾರವಾಗಿ, ಪರಿಪೂರ್ಣತೆಯ ದಾರಿಯಲ್ಲಿ ವಿವಿಧ ಹಂತಗಳನ್ನು ಕುರಿತು ವಿವರಿಸಿದ್ದಾನೆ. ದೇವನ ಒಂದು ರೂಪವನ್ನು ಭಾವಿಸಿ ಧ್ಯಾನಿಸುತ್ತ ಹೋದರೆ, ಭಕ್ತಿಯ ಸಾಧನೆಯನ್ನು ನಡೆಸುತ್ತಿದ್ದರೆ, ಆ ಮೂಲಕ ಅನಂತರೂಪಗಳಲ್ಲಿ ಅವನನ್ನು ಗುರುತಿಸಬಲ್ಲನು. ವಿಶ್ವಾತ್ಮದ ಅನಂತತೆಯನ್ನು ಅರಿಯಬಲ್ಲನು. ಈ ತತ್ತ್ವವು ಯಾವಾಗ ಅವನಿಗೆ ತಿಳಿಯುವುದು (***ತತೋ ಮಾಮ್ ತತ್ವತೋ ಜ್ಞಾತ್ವಾ***). ಆಗ ಸಹಜವಾದುದು ಅನಂತವೆಂದೂ, ನಿರಾಕಾರವೆಂದೂ, ನಾಮರೂಪಗಳನ್ನು ಮೀರಿದುದೆಂದೂ ತಿಳಿಯುತ್ತದೆ. ಇಂತಹ ಅರಿವು ಒದಗಿದ ಕೂಡಲೆ ವಿಶ್ವಾತ್ಮನು ಸರ್ವವ್ಯಾಪಿಯೆಂದು ಅವನ ನೋಟಕ್ಕೆ ಕಣ್ಗಳ ಆವಶ್ಯಕತೆ ಇಲ್ಲ; ಕೇಳುವುದಕ್ಕೆ ಕಿವಿಗಳು ಬೇಕಿಲ್ಲ; ಚಲನೆಗೆ ಕಾಲ್ಗಳೂ ಬೇಡ. ಆತನು ಎಲ್ಲೆಲ್ಲಿಯೂ ಇದ್ದಾನೆ ಎಂದರಿಯುತ್ತಾನೆ.

ಆದರೆ ಈ ಅತ್ಯಂತ ಶ್ರೇಷ್ಠವಾದ ಜ್ಞಾನವು, ಮೊದಲ ಹೆಜ್ಜೆಗಳನ್ನಿಟ್ಟು ನಡೆದಿರುವ ಭಕ್ತನಿಗೆ ಬೇಕಾಗಿಲ್ಲ. ಪ್ರಾರಂಭದಲ್ಲಿ ಭಕ್ತನು ನಿರಾಕಾರ ಸ್ವರೂಪವನ್ನು ಧ್ಯಾನಿಸುವುದಕ್ಕಿಂತ

ಆಕಾರತಳೆದ ಮೂರ್ತಿಯನ್ನು ಧ್ಯಾನಿಸುವುದೊಳ್ಳೆಯದು. ಆಕಾರವುಳ್ಳ ದೈವವನ್ನು ಧ್ಯಾನಿಸಿ ಭಕ್ತಿ ಮಾಗಿದಂತೆಲ್ಲ ಅದು ನಿರಾಕಾರದೆಡೆಗೆ ತಾನೇ ಸಹಜವಾಗಿ ನಡೆಯುತ್ತದೆ.

ಮುಂದಿನ ಹೆಜ್ಜೆ ನಿರಾಕಾರದ ಅರಿವಿನಿಂದ ನಿರಾಕಾರದ ಅನುಭವದ ಕಡೆಗೆ. ಆಗ ಭಕ್ತನು ದೇವರಿಗಿಂತ ಭಿನ್ನನಾಗಿರದೆ ಅವನಲ್ಲಿಯೇ ಒಂದಾಗಿರುತ್ತಾನೆ (**ತತೋ ಮಾಮ್ ತತ್ವತೋ ಜ್ಞಾತ್ವದ ವಿಶತೇ ತಮ್‌ನಂತರ**).

ಬ್ರಹ್ಮಜ್ಞಾನಿಯಾದವನು ಸ್ವತಃ ಬ್ರಹ್ಮನೇ ಆಗುತ್ತಾನೆ. ಅದಕ್ಕಿಂತ ಮೊದಲು ಭಕ್ತನು ಸಾಧನೆ ಮಾಡುತ್ತಿದ್ದಾಗ ದೇವರ ಬಗೆಗೆ ಸ್ವಲ್ಪ ತಿಳುವಳಿಕೆ ಇದ್ದರೆ ಸಾಕು, ಅಷ್ಟು ಅರಿವೂ ಇಲ್ಲದೆ ಭಕ್ತಿಭಾವ ಇರುವುದಿಲ್ಲ. ಭಕ್ತಿಭಾವ ತೊಡಗಿದಂತೆ ಭಗವಂತನಿಗೆ ನಾಮ ರೂಪಗಳ ಮಿತಿ ಉಂಟಾಗುವುದು. ಅನಂತರ ನಿರಾಕಾರ ರೂಪಿಯಾದ ದೇವನನ್ನು ನಾಮರೂಪಗಳಿಲ್ಲದ ಪರಮಶಕ್ತಿಯನ್ನು ಅನುಭವಿಸುತ್ತಾನೆ. ತೊಡಗುವುದು ಮಾತ್ರ ನಾಮರೂಪ ದೇವ ಪೂಜೆಯಿಂದಲೇನೆ.

ದೇವರ ಸಹಜಗುಣಗಳ ಅರಿವಿನಿಂದ, ಅಂತಹ ಭಕ್ತಿಯಿಂದ ಭಕ್ತನು ದೇವಸಾನ್ನಿಧ್ಯದಲ್ಲಿಯೇ ಇರುವನು. (**ವಿಶತೇ ತದನಂತರಂ**) ಆ ಕ್ಷಣದಿಂದ ಅವನೇ ದೈವ. ಭಕ್ತನು ಜ್ಞಾನಿಯಾಗಿ ಅನಂತ ಸಾಗರದಲ್ಲಿ ಒಂದು ಗಡ್ಡೆ ಹಿಮ ಕರಗಿನಂತೆ ಕರಗಿಹೋಗುವನು. ಹಿಮಗಲ್ಲಿನ ಆಕಾರಕ್ಕೂ ಸಾಗರದ ನಿರಾಕಾರಕ್ಕೂ ನಡುವಣ ವ್ಯತ್ಯಾಸವು ಮಾಯವಾಗುವುದು.

ಸಾಗರ ಸೇರುವ ಮೊದಲು ನದಿಗಳಿಗೆ ಬೇರೆ ಬೇರೆ ಹೆಸರುಗಳೂ ರೂಪವೂ ಇರುತ್ತದೆ. ಒಂದು ಸಲ ಅಲ್ಲಿ ಸೇರಿದ ಮೇಲೆ ಅವುಗಳ ಪ್ರತ್ಯೇಕತೆ ಅಳಿದು, ಸರ್ವವನ್ನೂ ಒಳಗೊಳ್ಳುವ ಅಪ್ರಮೇಯವಾದ ನೀರಿನಲ್ಲಿ ಅವು ಇಲ್ಲವಾಗುತ್ತವೆ.

ನಾವು ಬೇರೆ ಬೇರೆ ಸಂದರ್ಭ ಸನ್ನಿವೇಶಗಳಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಹೀಗೆ ಭಗವಂತನು ಅರ್ಜುನನ ಮೂಲಕವಾಗಿ ನಮಗೆ ಬೋಧಿಸಿದ್ದಾನೆ. ಅರ್ಜುನನಿಗೆ ಆತನು ತಿಳಿಸಿದ್ದಾನೆ, "ನಿನ್ನ ಇಂದಿನ ಸಂದರ್ಭವು ಹೋರಾಟಕ್ಕೆ ತಕ್ಕದಾಗಿದೆ (**ತಸ್ಮಾತ್ ಯುದ್ಧ್ಯಸ್ವ ಭಾರತ**). ದುಃಖಕ್ಕೆ ವಶನಾಗಬೇಡ."

ಭಗವಂತನ ಉಪದೇಶವು ಪ್ರತಿಯೊಬ್ಬ ಮನುಷ್ಯನಿಗೂ ಅವನಿರುವ ಪರಿಸ್ಥಿತಿಯಲ್ಲಿ, ಅವನು ಪಡೆದುಕೊಂಡಿರುವ ಶಕ್ತಿಗೆ ತಕ್ಕುದಾಗಿದೆ.

* * * *



## ೭. ನಮ್ಮ ಧರ್ಮದ ಶಕ್ತಿ

ನಮ್ಮ ಧರ್ಮವನ್ನು ಅಸಂಖ್ಯಾತ ದೇವದೇವಿಯರ ಧರ್ಮವೆಂದೂ ಬಹುದೇವತಾ ಪೂಜೆ ನಡೆಯುವುದೆಂದೂ ಸಾಮಾನ್ಯವಾಗಿ ಜನರು ಟೀಕೆ ಮಾಡುವುದುಂಟು. "ಏನಪ್ಪ, ನಿಮ್ಮ ದೇವರುಗಳ ಸಂತೆ! ಎಷ್ಟು ಜನಕ್ಕೆಂತ ಪೂಜೆ ಮಾಡ್ತೀರಿ" ಎಂದು ನಮ್ಮ ಧರ್ಮದ ಕಡೆಗೆ ಟೀಕಾಸ್ತ್ರಗಳ ಸುರಿಮಳೆಯೇ ಆಗುವುದುಂಟು. ಎಲ್ಲ ಪ್ರಾಚೀನವಾದ ಧರ್ಮಗಳಲ್ಲಿಯೂ ಬಹುದೇವ ದೇವತೆಗಳಿರುವುದೂ; ಧರ್ಮವು ಪರಿಷ್ಕಾರವಾಗುತ್ತ ಹೋದಂತೆ ಅವರುಗಳು ಒಟ್ಟುಗೂಡಿ ಒಂದಾಗುತ್ತ ಹೋಗುವುದೂ ಕಂಡುಬಂದಿದೆ. ಮಹಮ್ಮದ್ ಪೈಗಂಬರರು ಹಿಂದೆ ತಮ್ಮ ಬುಡಕಟ್ಟು ಜನರು ಪೂಜಿಸುತ್ತಿದ್ದಂತಹ ಹಲವು ದೈವಗಳನ್ನು ಬಹಿಷ್ಕರಿಸಿ, ಎಲ್ಲರೂ ಒಂದೇ ದೈವವನ್ನು ಪೂಜಿಸತಕ್ಕುದೆಂದು ಕಟ್ಟು ಮಾಡಿದರು.

ಯಾವ ವಿಷಯದಲ್ಲಿಯೂ ಸತ್ಯವನ್ನು ಶೋಧನೆ ಮಾಡುವಾಗ ನಾವು ಮಹಾಕವಿಗಳನ್ನು ಆಶ್ರಯಿಸಬೇಕಾಗುತ್ತದೆ. ಅವರು ಸಾಮಾನ್ಯ ಮನುಷ್ಯರಿಗಿಂತ ಸ್ಫುಟವಾದ ದೂರದೃಷ್ಟಿಯುಳ್ಳವರು. ನಮ್ಮ ದೇಶದ ಮಹಾಕವಿಗಳಲ್ಲಿ ಬಾಣಭಟ್ಟ ಮತ್ತು ಕಾಳಿದಾಸರು ಪ್ರಮುಖರಾದವರು. ಅವರು ನಮ್ಮ ದೈವಗಳನ್ನು ಕುರಿತು ಏನು ಹೇಳುತ್ತಾರೋ ನೋಡೋಣ. ಬ್ರಹ್ಮ ವಿಷ್ಣು ಮಹೇಶ್ವರರನ್ನು ಕುರಿತು ಬಾಣಭಟ್ಟನು, ಒಂದೇ ದೈವಸತ್ವವು ತನ್ನ ಮೂರು ಉದ್ದೇಶಗಳ ಸಾಧನೆಗಾಗಿ ಮೂರು ರೂಪಗಳಲ್ಲಿ ಕಾಣಿಸಿಕೊಂಡಿದೆ ಎನ್ನುತ್ತಾನೆ. ರಜಸ್, ಸತ್ತ್ವ, ಮತ್ತು ತಮೋಗುಣಗಳನ್ನು ಕ್ರಮವಾಗಿ ಹೊಂದಿ, ಸೃಷ್ಟಿಸ್ಥಿತಿ ಹಾಗೂ ಲಯಕಾರಿಗಳಾದ ದೈವವೇ ಅವರು. 'ಅಜ' ಎಂದರೆ ಹುಟ್ಟು ಇಲ್ಲದ, ಸ್ವಯಂಭುವಾದ ದೈವ ಮೂರು ಉದ್ದೇಶಗಳ ಸಾಧನೆಗೆ, ಮೂರು ರೂಪಗಳನ್ನು ತಾಳಿದೆ. ಬ್ರಹ್ಮ, ವಿಷ್ಣು, ಮಹೇಶ್ವರರು ಒಂದೇ ಸತ್ವದ ರೂಪಗಳು. ಕಾಳಿದಾಸನು ಸಹ ಹೀಗೆಯೇ ಭಾವಿಸಿದ್ದಾನೆ. ಒಂದೇ ದೈವವು ಮೂರು ರೂಪ ತಾಳಿರುವುದಲ್ಲದೆ ಬೇರೆಯಲ್ಲ. ಅವರಲ್ಲಿ ಮೇಲುಕೀಳುಗಳೂ ಇಲ್ಲ. ತ್ರಿಮೂರ್ತಿಗಳೂ ಒಂದೇ ದೈವದ ರೂಪ ಎಂದಂತೆಯೇ ಇತರ ದೇವರುಗಳ ಸಮೂಹವು ಅಂತ್ಯದಲ್ಲಿ ಒಂದೇ ಆಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ಆದರೆ ಜನರು ತಾವು ಪೂಜಿಸುವ ದೈವ ಇತರ ದೈವಗಳಿಗಿಂತ ಶ್ರೇಷ್ಠವೆಂದೂ ತಮ್ಮ ದೈವ ಸರ್ವೋತ್ತಮವೆಂದು ಕದನಮಾಡುವುದೇಕೆ? ಒಂದು ನದಿಯ ಮೇಲೆ ಸೇತುವೆ ನಿರ್ಮಿಸಿದ್ದಾರೆಂದುಕೊಳ್ಳಿ. ಅದು ಹಲವಾರು ಕಮಾನುಗಳಿಂದ (ಕಂಬಗಳಿಂದಲೂ) ಕೂಡಿದೆ. ಯಾವುದಾದರೂ ಒಂದು ಕಮಾನಿನ ಕೆಳಗೆ ನಿಂತಿರುವ ಮನುಷ್ಯನಿಗೆ ಅದು ವಿಸ್ತಾರವೂ ಎತ್ತರವೂ ಆಗಿ ಕಂಡುಬರುತ್ತದೆ, ಉಳಿದ ಕಮಾನುಗಳು ಕಿರಿಕಿರಿಯಾಗಿ ಕಾಣುತ್ತವೆ. ಅವನ ಕಣ್ಣಿಗೆ ಉಳಿದೆಲ್ಲಕ್ಕಿಂತ ಈ ಕಮಾನು ಅಗಲವಾಗಿ, ಎತ್ತರವಾಗಿ ಕಂಡುಬರುತ್ತದೆ. ಹಾಗೆ ಒಬ್ಬ ದೈವವನ್ನು ಕುಲದೈವವೆಂದು ಅಥವಾ ಇಷ್ಟದೈವವೆಂದು ಪೂಜಿಸುವಾತನಿಗೆ ಉಳಿದ ದೇವರುಗಳು ಕಡಿಮೆಯಾಗಿ ತೋರಬಹುದು. ಆದರೆ ಯಾವುದು ಸತ್ಯಸಂಗತಿ? ಎಲ್ಲ ದೇವರುಗಳೂ ಒಬ್ಬನೇ ಪರಮಶಕ್ತನಾದ ಪರಮಾತ್ಮನ ವಿವಿಧರೂಪಗಳು. ಎಲ್ಲ ಕಮಾನುಗಳನ್ನೂ ಒಂದೇ ಅಳತೆಯಲ್ಲಿ ಗಾತ್ರದಲ್ಲಿ ನಿರ್ಮಿಸಿರುತ್ತಾರೆ.

ಇನ್ನೊಂದು ಕಾವ್ಯವಾಣಿ ಹೀಗೆ ಮೊಳಗಿದೆ:

"ಯಾರನ್ನು ಶೈವರು ಶಿವನೆನ್ನುತ್ತಾರೋ ವೇದಾಂತಿಗಳು ಬ್ರಹ್ಮನೆನ್ನುತ್ತಾರೊ ಬೌದ್ಧರು ಯಾರನ್ನು ಬುದ್ಧನೆಂದು ಪೂಜಿಸುವರೊ, ಸೃಷ್ಟಿಕರ್ತನೆಂದು ಯಾರನ್ನು ನೈಯ್ಯಾಯಿಕರು ಭಾವಿಸುವರೋ, ಯಾರನ್ನು ಅರ್ಹಂತನೆಂದು ಜೈನರು ಕರೆಯುವರೊ, ಕರ್ಮನೆಂದು ಮೀಮಾಂಸಕರು ಹೇಳುತ್ತಾರೋ ಆ ಹರಿಯು ನಿಮ್ಮ ಆಸೆಗಳನು ಫಲಿಸುವಂತೆ ಮಾಡಲಿ."

ಆಶ್ವಾಸನೆ ಕೊಡುತ್ತ ಗೀತೆಯನ್ನು ಬೋಧಿಸಿದ ಆಚಾರ್ಯನು "ಭಕ್ತರು ಯಾವ ರೂಪದಿಂದ ನನ್ನನ್ನು ಭಾವಿಸಿ ಶ್ರದ್ಧೆಯಿಂದ ಅರ್ಚಿಸುವರೋ, ನಾನು ಅದೇ ರೂಪದಲ್ಲಿ ಅವರ ಶ್ರದ್ಧಾಭಕ್ತಿಗಳು ಫಲಿಸುವಂತೆ ಮಾಡುತ್ತೇನೆ."

ನಮ್ಮಲ್ಲಿ ಬಹಳ ಜನ "ದೇವರು"ಗಳು ಇಲ್ಲ. ಸತ್ಯಸಂಗತಿ ಏನೆಂದರೆ ನಾವು ದೇವನನ್ನು ಹಲವು ರೂಪಗಳಲ್ಲಿ ಭಾವಿಸಿ ಹಲವು ವಿಧಾನಗಳಲ್ಲಿ ಪೂಜಿಸುತ್ತೇವೆ. ನಾನು ಒಂದೊಂದು ಆಕಾರಕ್ಕೆ ಒಂದೊಂದು ಹೆಸರನ್ನು ಕೊಡುತ್ತೇವೆ, ನಮ್ಮ ಧ್ಯಾನ ಪೂಜೆಗಳಿಗೆ ಅದರಿಂದ ಸಹಕಾರವಾಗುತ್ತದೆ. ಒಬ್ಬನೇ ಪರಮಾತ್ಮನನ್ನು ಮೂರು ದೇವರಾಗಿ ಕಲ್ಪಿಸಿಕೊಂಡಿದ್ದೇವೆ, ಅಲ್ಲಿಂದ ಮೂವತ್ತುಮೂರಾಗಿ ಭಾವಿಸುತ್ತೇವೆ, ಮುಂದೆ ಮುವತ್ತು ಮೂರುಕೋಟಿಯಾಗಿಯೂ ಭಾವಿಸಬಲ್ಲೆವು. ಏಕೆಂದರೆ ನಮ್ಮ ಅಭಿರುಚಿ, ಆವಶ್ಯಕತೆ ಸಾಮರ್ಥ್ಯಗಳಿಗೆ ತಕ್ಕಂತೆ ಪೂಜಾಕಾರ್ಯಗಳಿಗೆ ಅನುವಾಗಿ ಅನಂತವಾದ ಶಕ್ತಿಯುಳ್ಳ ಪರಮಾತ್ಮನು ಅಸಂಖ್ಯ ರೂಪಗಳನ್ನೂ ಹೆಸರುಗಳನ್ನೂ ತಾಳಬಲ್ಲದು. ಆಕಾರಗಳೂ, ಹೆಸರುಗಳೂ ಬೇರೆ ಬೇರೆಯಾಗಿರಬಹುದು, ಆದರೆ ಅಂತಿಮ ಸತ್ಯರೂಪಿಯಾದ ದೈವವು ಒಂದೇ ಆಗಿದೆ.



ಪರದೈವದ ಎರಡು ಬೇರೆ ಬೇರೆ ರೂಪಗಳನ್ನು ಪೂಜಿಸಿದ ಮಾತ್ರಕ್ಕೆ ಭಕ್ತರು ಪರಸ್ಪರ ಕಲಹ ಮಾಡಬೇಕೆಂದೇನೂ ಇಲ್ಲ. ಶಿವಪುರಾಣಗಳು ಶಿವನನ್ನು ಪರಮನೆನ್ನುತ್ತವೆ, ವಿಷ್ಣುಪುರಾಣಗಳು ವಿಷ್ಣುಪಾರಮ್ಯವನ್ನು ಬೋಧಿಸುತ್ತವೆ. ಆದರೆ ಸರಿಯಾದ ವಿವೇಚನೆಯು ಈ ತಪ್ಪು ತಿಳುವಳಿಕೆಯನ್ನು ದೂರಮಾಡುತ್ತದೆ. ಪುರಾಣದಲ್ಲಿ ವರ್ಣಿಸಲಾದ ಆಯಾ ದೈವ ಪಾರಮ್ಯದ ವರ್ಣನೆಯನ್ನು ಆ ಸಂದರ್ಭಕ್ಕೆ ಅನುಸಾರವಾಗಿ ತಿಳಿಯಬೇಕು. ಒಂದೇ ದೈವವು ಬೇರೆ ಬೇರೆ ರೂಪ ತಾಳಿದ ಮಾತ್ರಕ್ಕೆ ಒಂದು ಉತ್ತಮ ಮತ್ತೊಂದು ಅಧಮವಾಗುವುದು ಹೇಗೆ ಸಾಧ್ಯ? ಎಷ್ಟೋ ಗ್ರಂಥಗಳಲ್ಲಿ ಶಿವ ಬೇರೆಯಲ್ಲ, ವಿಷ್ಣು ಬೇರೆಯಲ್ಲ ಎಂದು ಘೋಷಿಸಿರುವಾಗ, ಹರಿ ಹರರಲ್ಲಿ ಭೇದವಿಲ್ಲವೆಂದು ಸ್ಥಾಪಿಸಿರುವಾಗ ನಾವದನ್ನು ಮರೆಯಬಾರದು. ಶಿವನ ಶತ್ರುಗಳು ವಿಷ್ಣುವಿಗೂ ಶತ್ರುಗಳೇ; ಹಾಗೆಯೇ ವಿಷ್ಣುವಿನ ಹಗೆಗಳು ಶಿವನಿಗೂ ಹಗೆಗಳೇ ಎಂದು ಆ ಗ್ರಂಥಗಳೇ ಸಾರಿವೆ.

ನಮ್ಮಲ್ಲಿ ಇಷ್ಟದೇವತೆಯ ಉಪಾಸನೆ ಇರುತ್ತದೆ. ದೇವನ ಯಾವುದಾದರೊಂದು ರೂಪವನ್ನು ಭಕ್ತರು ತಮ್ಮ ಧ್ಯಾನ ಪೂಜೆಗಳಿಗೆ ಆಯ್ದುಕೊಳ್ಳುತ್ತಾರೆ. ಪರಮಶಕ್ತನನ್ನು ತಲುಪುವುದಕ್ಕೆ ನಾವು ಆತನ ಯಾವುದಾದರೊಂದು ರೂಪದ ಧ್ಯಾನದಿಂದ ಪ್ರಾರಂಭಿಸಬೇಕಾಗುತ್ತದೆ; ಅದನ್ನೇ ನಾವು ಇಷ್ಟದೇವತೆ ಎಂದು ವ್ಯವಹರಿಸುತ್ತೇವೆ. ಭಕ್ತಿ ಸಾಧನೆ, ಏಕಾಗ್ರತೆಯಲ್ಲಿ ಪ್ರಗತಿಯನ್ನು ಸಾಧಿಸಿದಂತೆಲ್ಲ ಭಕ್ತನು ಭಗವಂತನ ಏಕಮೇವಾದ್ವಿತೀಯ ಸ್ವರೂಪವನ್ನರಿತು ಇತರ ವ್ಯತ್ಯಾಸಗಳು ಕರಗಿಹೋಗುವುವು. ಇದುವರೆಗೆ ನಮ್ಮ ಮಹರ್ಷಿಗಳ ಮತ್ತು ಸಂತರ ಅನುಭವವು ಇದೇ ಆಗಿದೆ. ಒಬ್ಬ ನಿಜವಾದ ಶಿವಭಕ್ತನಿಗೂ ಒಬ್ಬ ನಿಜವಾದ ವಿಷ್ಣುಭಕ್ತನಿಗೂ ನಡುವೆ ಕಲಹವು ಸಾಧ್ಯವೇ ಇಲ್ಲ.

ಈ ಸಂದರ್ಭದಲ್ಲಿ ಒಬ್ಬ ವಿಷ್ಣು ಭಕ್ತನ ಸ್ತುತಿಯನ್ನೂ, ಮತ್ತೊಬ್ಬ ಶಿವಭಕ್ತನು ಮಾಡಿದ ಸ್ತೋತ್ರವನ್ನು ನೆನೆಯುವುದು ಉಚಿತವಾಗಿದೆ. ಆಂಡಾಳ್ ದೇವಿಯ 'ತಿರುಪ್ಪಾವೈ' ಮತ್ತು ಮಾಣಿಕ್ಯವಾಚಕರ 'ತಿರುವೆಣ್ಪಾವೈ' ಎಂಬುವೇ ಆ ಸ್ತುತಿಗಳು. ಎರಡು ಕಾವ್ಯಗಳಲ್ಲಿಯೂ, ಸೊಂಪಾಗಿ ನಿದ್ರಿಸುತ್ತಿರುವ ಭಕ್ತರನ್ನು ಮುಂಜಾವಿನಲ್ಲಿ ಎಚ್ಚರಿಸುವಂತಹ ಸನ್ನಿವೇಶವಿದೆ. ಭಾಷೆ ಮತ್ತು ಭಾವಗಳಲ್ಲಿ ಗಮನಾರ್ಹವಾದ ಏಕರೂಪತೆ ಕಂಡುಬರುತ್ತದೆ. ದೇವರು ಶಿವನಾದರೂ ಸರಿಯೆ ವಿಷ್ಣುವಾದರೂ ಸರಿಯೆ, ಭಕ್ತನು ಬೇರೆ ಬೇರೆಯವನೇ ಆಗಿದ್ದಾನು. ಆದರೆ ಭಕ್ತಿ ಮಾತ್ರ ಏಕಪ್ರಕಾರವಾದದ್ದು, ಅಲ್ಲಿ ಭೇದಕಾಣದು ಎಂಬ ತೀರ್ಮಾನ ಮೂಡುತ್ತದೆ. ಒಬ್ಬ ದೈವಭಕ್ತನು ಇತರ ದೇವರೂಪಗಳಿಗೂ ಭಕ್ತನೇ ಆಗಿರುತ್ತಾನೆ.

ಇದು ದೈವ ಭಾವ ಸಂಗಿಗಳ ನಡುವೆ ಇರಬೇಕಾದ ಹೊಂದಾಣಿಕೆ. ನಮ್ಮ ಧರ್ಮದಲ್ಲಿ ಹುಟ್ಟಿಕೊಂಡ ಎಲ್ಲ ಮತ ಪಂಥಗಳೂ ವೈದಿಕ ಧರ್ಮದಿಂದಲೇ

ಕುಡಿಯೊಡೆದಿವೆ. ವೇದಗಲು ಈಗಾಗಲೇ ಸಾರಿರುವ ಸತ್ಯವಿದು "ಸತ್ಯವು ಒಂದೇ, ಋಷಿಗಳು ಅದನ್ನು ಬಗೆಬಗೆಯಾಗಿ ವರ್ಣಿಸಿದ್ದಾರೆ" (**ಏಕಂ ಸತ್ ವಿಪ್ರಾ ಬಹುಧಾ ವದಂತಿ**). ಅಂತಿಮವಾಗಿ ಸತ್ಯದ ರೂಪವೊಂದೇ ಅದರ ಆಕಾರ ಮತ್ತು ಹೆಸರುಗಳು ಎಷ್ಟು ಬಗೆಯಾಗಿ ಬೇಕಾದರೂ ಇರಬಹುದು.

ದೈವ ಸಾಧನೆಗೆ– ಪೂಜೆಗೆ ಒಂದು ದೇವರ ರೂಪವನ್ನು ಆಯ್ಕೆ ಮಾಡಿಕೊಳ್ಳುವಾಗ, ವಾಡಿಕೆಯಾದ ಒಂದು ಮಾರ್ಗವಿದೆ. ಅದೇನೆಂದರೆ ಮನೆತನದ ಸಂಪ್ರದಾಯವನ್ನು ಅನುಸರಿಸಿ ನಡೆಯುವುದು. ನಾವು ಇದುವರೆಗೆ ಪೂಜಿಸುತ್ತಿದ್ದ ದೇವರನ್ನು– ಆಕಾರವನ್ನು ಬದಲಿಸಿ ಇನ್ನೊಂದನ್ನು ಆಯ್ಕೆ ಮಾಡಿಕೊಳ್ಳ ಬೇಕಾದದ್ದೇನೂ ಇಲ್ಲ. ಹಾಗೆಯೇ ನಾವು ನಮ್ಮ ಧರ್ಮವನ್ನು ತ್ಯಜಿಸಿ ಇನ್ನೊಂದು ಧರ್ಮವನ್ನು ಅನುಸರಿಸಬೇಕೆಂದೇನೂ ಇಲ್ಲ. ನಾವು ಯಾವ ಧರ್ಮದಲ್ಲಿ ಜನಿಸಿರುತ್ತೇವೆ ಅಲ್ಲಿಯೇ ಸಾಧನೆ ಮಾಡಬಹುದು. ಹಾಗೆನೋಡಿದರೆ ನಮ್ಮ ಧರ್ಮವನ್ನು ತೊರೆದು, ಇನ್ನೊಂದು ಧರ್ಮವನ್ನು ಸ್ವೀಕರಿಸುವುದು ಅಪಚಾರ ಅಥವಾ ಪಾಪಕೃತ್ಯವೇನೂ ಅಲ್ಲ. ಆದರೆ ಪರಧರ್ಮ ಸ್ವೀಕಾರ ಮಾಡಿದವನು, ತನ್ನ ಹಿಂದಿನ ಧರ್ಮದ ದೇವಾಧಿದೇವತೆಗಳನ್ನು ಹೀಯಾಳಿಸಿ ತಿರಸ್ಕರಿಸಬಹುದು. ಇದು ಪಾಪಕೃತ್ಯವೇ ಸರಿ (**ಪೂರ್ವೈರಾಚರಿತಂ ಕುರ್ಯಾತ್ ಅನ್ಯಥಾ ಪತಿತೋ ಭವೇತ್**).

ಅಂದರೆ ಸಂಪ್ರದಾಯಾನುಸಾರವಾಗಿ, ಪದ್ಧತಿಯಂತೆ ಧರ್ಮವನ್ನಾಚರಿಸಬೇಕು. ಅಲ್ಲದಿದ್ದರೆ, ಅವನು ಪತಿತನೇ ಸರಿ. ಹೊಸ ಧರ್ಮಕ್ಕೆ ಆಹ್ವಾನ ಬಂತೆಂದರೆ ಹಳೆಯ ಧರ್ಮದಲ್ಲಿದ್ದವರ್‍ಯಾರಿಗೂ ಮುಕ್ತಿಯೇ ಸಿಗಲಿಲ್ಲೆಂದೂ, ಆ ಧರ್ಮಕ್ಕೆ ಸೇರಿದವರ್‍ಯಾರಿಗೂ ಬಿಡುಗಡೆಯೇ ಇಲ್ಲವೆಂದೂ ಅರ್ಥವಾಗುತ್ತದೆಯಲ್ಲವೇ? ಇದು ಮೂರ್ಖತನದ ಪರಮಾವಧಿಯೇ ಸರಿ. ಒಬ್ಬ ಶೈವವನ್ನು ವೈಷ್ಣವನಾಗು ಎಂಬುದೂ ಅಥವಾ ವೈಷ್ಣವನನ್ನು ಶೈವನಾಗು ಎಂಬುದೂ ತಪ್ಪು. ಧರ್ಮ ಹೊಸದಾಗಲಿ, ಹಳೆಯದಾಗಲಿ ದೇವರು ಎಲ್ಲರಿಗೂ ಒಬ್ಬನೇ. ಒಬ್ಬ ಮನುಷ್ಯನನ್ನು ನಿನ್ನ ಹಳೆಯ ಧರ್ಮವನ್ನು ತೊರೆದು ಬಾರೆಂದು ಕರೆಯುವುದು ಸರಿಯಲ್ಲ. ಏಕೆಂದರೆ ಆತನು ತಾನು ಪೂಜಿಸುತ್ತಿದ್ದ ದೈವವನ್ನು ತೊರೆದು ಬರಬೇಕಾಗುತ್ತದೆ. ಇದು ದೈವದ್ರೋಹ. ದೇವರು ಎಲ್ಲ ಬಗೆಯಾದ ಪೂಜೆಯನ್ನು ಸ್ವೀಕರಿಸುತ್ತಾನೆ. ವಿಧಿವತ್ತಾಗಿ ಮಾಡದಿದ್ದರೂ, ನಂಬಿ ಮಾಡಿದ ಪೂಜೆ ಅವನಿಗೆ ಪ್ರಿಯವೇ. ಭಕ್ತನನ್ನು ಉದ್ಧರಿಸಿ, ಪವಿತ್ರವಾದ ದಾರಿಯಲ್ಲಿ ನಡೆದರೆ, ತನ್ನೊಳಗೆ ಸೇರಿಸಿಕೊಳ್ಳುತ್ತಾನೆ. ಏಕೆಂದರೆ ಎಲ್ಲ ಧರ್ಮಗಳೂ ಒಂದೇ. ಎಲ್ಲ ಧರ್ಮಗಳೂ, ಪೂಜಿಸುವ ದೈವವೂ ಒಂದೇನೆ.



ಇದರಿಂದ ನಮ್ಮ ಧರ್ಮವು ಮತಾಂತರವನ್ನು ಏಕೆ ಪ್ರೋತ್ಸಾಹಿಸುವುದಿಲ್ಲ ಎಂಬುದು ವಿಶದವಾಗುತ್ತದೆ. ಇತರ ಧರ್ಮಗಳನ್ನು ಅನುಸರಿಸುವ ಜನರು ಆಯಾ ಧರ್ಮದ ಅಪ್ಪಣೆಯಂತೆ ನಡೆದರೆ ಅಲ್ಲಿಯೂ ಮುಕ್ತಿ ದೊರೆಯುತ್ತದೆ ಎಂಬುದನ್ನು ನಾವು ತಿಳಿದಿದ್ದೇವೆ. ಅಲ್ಲದೆ, ನಮ್ಮ ಧರ್ಮದ ಶಕ್ತಿಯು ಅದನ್ನು ಅನುಸರಿಸವವರ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡಿದೆ ಎಂದು ನಾವು ನಂಬಿಲ್ಲ. ನಮ್ಮ ಧರ್ಮವು ಪ್ರಚಾರದಿಂದ ಬೆಳೆದದ್ದಲ್ಲ. ಅದು ಅನುಷ್ಠಾನದಿಂದ ವಿಕಸಿತವಾದದ್ದು. ಯಾರು ನಮ್ಮ ಧರ್ಮದ ಅನುಯಾಯಿಗಳೋ, ಅವರ ಅನುಷ್ಠಾನದಿಂದ ಅದು ಪಲ್ಲವಿಸಿದೆ. ಪ್ರಚಾರಮಾಡುವುದು, ಮತಾಂತರವನ್ನು ಉದ್ದೇಶವಾಗಿವುಳ್ಳ ಧರ್ಮಗಳ ಕರ್ತವ್ಯವಾಗಿರುತ್ತದೆ. ನಾವಾದರೋ ಅದಕ್ಕೆ ವಿರುದ್ಧವಾಗಿ ನಡೆಯುವವರು. ನಮ್ಮ ಧರ್ಮವು (ನಾಪೃಷ್ಟಃ ಕಸ್ಯಚಿತ್ ಭೂಯಾತ್) ಕೇಳದೇ ಇರುವವರಿಗೆ ಹೇಳುವ ಆವಶ್ಯಕತೆ ಇಲ್ಲ ಎಂದು ಹೇಳುತ್ತದೆ. ಧರ್ಮವನ್ನು ತಿಳಿಯಬೇಕು ಎಂಬ ಆಸಕ್ತಿಯಿಲ್ಲದವರ ಬಳಿಗೆ ನಾವದನ್ನು ಕೊಂಡೊಯ್ದು ಹೇಳತಕ್ಕದ್ದಲ್ಲ. ಧರ್ಮಗಳಲ್ಲಿ ನಾವು ಅನುರೂಪವನ್ನು ತರುವ ಆವಶ್ಯಕತೆಯಿಲ್ಲ. ಐಕಮತ್ಯವು ಮುಖ್ಯವೇ ಹೊರತು ಎಲ್ಲವೂ ಒಂದೇ ಬಗೆಯಾಗಿ ಇರುವುದಿಲ್ಲ. ವೈವಿಧ್ಯಮಯವಾದ ಈ ಲೋಕದಲ್ಲಿ ಏಕತೆಯೂ ಇದೆ. ನಮ್ಮ ಧರ್ಮದಲ್ಲಿ ಒಬ್ಬನೇ ಪರಮಾತ್ಮನೆಂದರೂ ಅಸಂಖ್ಯಾತವಾದ ನಾಮರೂಪಗಳಿಂದ ಕೂಡಿ, ವೈವಿಧ್ಯಮಯವಾದ ಪೂಜಾವಿಧಾನಗಳಿಂದ ನಮ್ಮ ಧರ್ಮದಲ್ಲಿ ಏಕತೆಯೂ ಇದೆ. ಇಂತಹ ವೈವಿಧ್ಯತೆಯು ನಮ್ಮ ಧರ್ಮದ ಒಳನೆಲೆಯ ಏಕತೆಗೆ, ನಂಬಿಕೆಗೆ ಹಾನಿ ತರಲಿಲ್ಲ. ನಾವೆಲ್ಲರೂ ವೇದಗಳನ್ನು ಆಧಾರವಾಗಿವುಳ್ಳ ಧರ್ಮಕ್ಕೆ ಸೇರಿದ್ದೇವೆ. ಯಾವುದಾದರೊಂದು ಸಂಪ್ರದಾಯದಲ್ಲಿ ಜನಿಸಿ, ಪದ್ಧತಿಗೆ ಅನುಸಾರವಾಗಿ ಸಾರ್ವಕಾಲಿಕವಾದ ನಮ್ಮ ಗುರಿಗಳೆಡೆಗೆ ಸಾಗುತ್ತೇವೆ. ಇದು ನಮ್ಮ ಧರ್ಮದ ವಿಚಾರದಲ್ಲಿಯೂ, ಈಗಾಗಲೇ ಪ್ರಪಂಚದಲ್ಲಿ ವ್ಯಾಪಕವಾಗಿರುವ ಇತರ ಧರ್ಮಗಳ ವಿಚಾರದಲ್ಲಿಯೂ ಸಸ್ಯ. ಒಬ್ಬ ಪ್ರಯಾಣಿಕನು ರೈಲಿನಿಂದ ಇಳಿದು ತನ್ನ ಸಾಮಾನುಗಳೊಡನೆ ಸ್ಟೇಷನ್ನಿನಿಂದ ಹೊರಬರುತ್ತಾನೆಂದುಕೊಳ್ಳಿ; ಆಗ ಬೇರೆ ಬೇರೆ ಗಾಡಿಗಳು, ರಿಕ್ಷಾದವರು ಎಲ್ಲರೂ ಬಂದು ನಮ್ಮ ಗಾಡಿಗೆ ಬನ್ನಿ, ನಿಮ್ಮನ್ನು ಸುಖವಾಗಿ ಸುಲಭವಾಗಿ ನೀವು ತಲುಪಬೇಕಾದ ಸ್ಥಳಕ್ಕೆ ಒಯ್ಯುತ್ತೇವೆ, ಎನ್ನುತ್ತಾ ಅವನ ಸಾಮಾನುಗಳನ್ನು ಸೆಳೆದು ತಮ್ಮ ಗಾಡಿಗಳಲ್ಲಿಟ್ಟುಕೊಳ್ಳಲಿಕ್ಕೆ ಹೋಗುತ್ತಾರೆ. ಹೀಗೆ ಬೇರೆ ಬೇರೆ ಧರ್ಮದ ಪ್ರಚಾರಕರು ಮನುಷ್ಯರನ್ನು ಆಕರ್ಷಿಸಿ ತಮ್ಮ ಧರ್ಮದ ಕಡೆಗೆ ಸೆಳೆದು ಸುಲಭವಾದ, ಖಾತರಿಯಾದ ಸತ್ಯಾನ್ವೇಷಣೆಯ ದಾರಿ ತೋರುತ್ತೇವೆ ಎನ್ನುತ್ತಾರೆ. ಯಾವಾಗ ನಮಗೆ ಎಲ್ಲ ಧರ್ಮಗಳೂ ಭಗವಂತನನ್ನು ಸೇರುವೆಡೆಗೆ ನಡೆದಿವೆ ಎಂದು ತಿಳಿಯುವುದೋ ಆಗ ನಾವು ಧರ್ಮವನ್ನು ಬದಲಿಸುವ ಪ್ರಮೇಯವೇ ಇಲ್ಲ. ನಾವೀಗ ನಡೆಯುತ್ತಿರುವ ಧರ್ಮದ

ದಾರಿಯೇ ಸಾಕು ಎಂಬುದು ತಿಳಿಯುವುದು. ಇತರ ಧರ್ಮದವರನ್ನು ದ್ವೇಷಿಸುವ ಅವಶ್ಯವಿಲ್ಲ. ದೇವಸ್ಥಾನವೂ ಅಲ್ಲಿ ಪ್ರತಿಷ್ಠಾಪಿತನಾದ ದೈವ, ಆತನ ಆಕಾರ ವಿಶೇಷ, ಪೂಜಾವಿಧಾನಗಳು– ಇವೆಲ್ಲವೂ ಬೇರೆಬೇರೆಯಾಗಿರಬಹುದು, ಅದೆಲ್ಲ ಅಭಿರುಚಿಯಲ್ಲಿನ ವ್ಯತ್ಯಾಸಗಳಷ್ಟೆ. ಆದರೆ ನಿಜವಾಗಿ ಬೇಕಾಗಿರುವುದೇನು ಗೊತ್ತೇ?; ಏಕಮುಖವಾದ ಶ್ರದ್ಧೆಯಿಂದ ತಮ್ಮ ಸಾಧನೆಯಲ್ಲಿ ತೊಡಗುವುದು.

ಒಂದು ಧರ್ಮದ ಶಕ್ತಿಯು ಅದರ ಪ್ರವರ್ತಕರ ಶೀಲ, ಆತ್ಮಶಕ್ತಿ ಮತ್ತು ಅಧ್ಯಾತ್ಮ ಸಾಧನೆಗಳನ್ನು ಅವಲಂಬಿಸಿರುತ್ತದೆ. ವೈದಿಕ ಧರ್ಮವು ಪ್ರಾಚೀನ ಕಾಲದಿಂದ ಇಂದಿನವರೆಗೂ ಉಳಿದುಬಂದಿರುವುದಕ್ಕೆ ಕಾರಣ ನಮ್ಮ ಧರ್ಮ ಪ್ರವರ್ತಕರು ಕಾಲಕಾಲಕ್ಕೆ ಉದಯಿಸಿ ಅವನ್ನು ವಿವರಿಸಿರುವುದೇ ಆಗಿದೆ. ವಿವಿಧ ದೇಶಗಳಲ್ಲಿ ಬಗೆಬಗೆಯ ಧರ್ಮಗಳೂ ಉದಿಸಿರುವುದು ಇತಿಹಾಸವೇ. ಆ ಧರ್ಮಗಳ ಪ್ರತಿಯೊಬ್ಬ ಸಂಸ್ಥಾಪಕನೂ ತನ್ನ ಹೊಸ ಧರ್ಮವನ್ನು ಸಾರಿ ಹಿಂದಿನ ಧರ್ಮವನ್ನು ಅಲ್ಲಗಳೆದುದನ್ನು ತಿಳಿದೇ ಇದ್ದೀರಿ. ಇದುವರೆಗೆ ಎಷ್ಟೋ ಧರ್ಮಗಳು ಹುಟ್ಟಿದುದನ್ನೂ, ಹೇಳಹೆಸರಿಲ್ಲದಂತೆ ಲಯವಾಗಿ ಹೋದುದನ್ನೂ ನೀವು ಕಂಡಿದ್ದೀರಿ. ಅವು ಹುಟ್ಟಿದುದು ಹೇಗೆ, ಮುಳುಗಿ ಹೋದುದು ಹೇಗೆ? ಇದೊಂದು ಸ್ವಾರಸ್ಯವಾದ ಸಂಗತಿ. ಪ್ರತಿಯೊಂದು ಧರ್ಮವೂ ಉದಯಿಸುತ್ತಿದ್ದಂತೆ ಸತ್ಯವನ್ನು ಸಂಪೂರ್ಣವಾಗಿ ತಿಳಿಸುವೆನೆಂದೂ, ತಾನೇ ಅದರ ಸಂಪೂರ್ಣ ಒಡೆಯನಂತೆಯೂ, ತನ್ನ ಧರ್ಮದಲ್ಲಿ ಸತ್ಯದ ಆಮೂಲಾಗ್ರವು ತಿಳಿಸಲ್ಪಡುತ್ತದೆ ಎಂದೂ ಘೋಷಿಸುತ್ತಾರೆ. ಸಸ್ಯವು ಒಂದೇ ಅಲ್ಲಿ ಎರಡು ಸತ್ಯಗಳು ಇಲ್ಲ. ಆದರೂ ಈ ಧರ್ಮಸಂಸ್ಥಾಪಕರು ತಮ್ಮ ಕಾಲಕ್ಕೆ ದೊಡ್ಡ ಜನಜಂಗುಳಿಯನ್ನು ಆಕರ್ಷಿಸಿ ಹಿಂಬಾಲಕರನ್ನಾಗಿ ಮಾಡಿಕೊಳ್ಳಬಲ್ಲವರಾಗಿದ್ದರು. ಹಾಗಾದರೆ ಒಂದು ಮತಕ್ಕೆ ದೊಡ್ಡಗುಂಪಿನ ಅನುಮೋದನೆ ಇದ್ದ ಮಾತ್ರಕ್ಕೆ ಅಲ್ಲಿ ಸತ್ಯ ಕಂಡಿದೆ ಎಂದು ಅರ್ಥವೇ?

ಇಲ್ಲಿ ಎರಡು ಪ್ರಶ್ನೆಗಳು ಏಳುತ್ತವೆ. ಒಂದು ಧರ್ಮವು ಸತ್ಯವನ್ನು ಕಂಡಿದೆ ಎಂಬ ಕಾರಣಕ್ಕೆ ಜನಪ್ರಿಯವಾಯಿತೆ ಅಥವಾ ಜನಪ್ರಿಯವಾದ್ದರಿಂದ ಅಲ್ಲಿರುವುದು ಸತ್ಯವಾಯಿತೆ? ಜನರು ಅಲ್ಲಿ ಸತ್ಯವಿದೆ ಎಂಬ ಕಾರಣಕ್ಕೆ ಆ ಧರ್ಮವನ್ನು ಅವಲಂಬಿಸಿದರೆ? ಅಲ್ಲಿ ಸತ್ಯವಿಲ್ಲ ಎಂಬ ಕಾರಣಕ್ಕೆ ಧರ್ಮವೇ ಅಳಿದುಹೋಯಿತೆ? ಯಾವ ಧರ್ಮವೇ ಆಗಲಿ, ಬೆಳೆದು ಸ್ಥಾಪಿಸಿಕೊಳ್ಳಬೇಕಾದರೆ ಅದು ಸತ್ಯವನ್ನು ಕಂಡಿದ್ದೇನೆ ಎಂದು ಘೋಷಿಸಿಕೊಂಡ ಮಾತ್ರಕ್ಕೆ ಅಲ್ಲ. ಯಾವ ಕಾರಣದಿಂದ ಒಂದು ಧರ್ಮವು ಬಹಳ ಜನಪ್ರಿಯವಾಯಿತೋ ಆ ಕಾರಣದಲ್ಲೇ ಅದರ ಮುಂದಿನ ನಾಶಕ್ಕೂ ಬೀಜವಿರುತ್ತದೆ. ಮಹಾಬಲಿಪುರದ ರಾಜ ಮಹೇಂದ್ರವರ್ಮನು ಒಂದು ನಾಟಕ ರಚಿಸಿದ್ದಾನೆ. ಅದರ ಹೆಸರು 'ಮತ್ತವಿಲಾಸ ಪ್ರಹಸನ'. ಅದರಲ್ಲಿ ಅವನ ಕಾಲದ ಬೌದ್ಧಭಿಕ್ಷುಗಳ ಸ್ವೇಚ್ಛಾಚಾರದ ನಡವಳಿಕೆಗಳನ್ನು ಕುರಿತು ಆಡಿದ್ದಾನೆ.



ಅವನ ಕಾಲ್ಕಕೆ ಬೌದ್ಧಭಿಕ್ಷುಗಳು ಬುದ್ಧನು ರೂಪಿಸಿದ ನಿಯಮ ನಿಬಂಧನೆಗಳಿಂದಲೂ ನೈತಿಕ ಪಥದಿಂದಲೂ ದೂರ ಸರಿದು ಬಾಳುತ್ತಿದ್ದ ಬಗೆಯನ್ನು ಅಣಕಿಸಿದ್ದಾನೆ. ಮಹಿಳೆಯರಿಗೆ ಬೌದ್ಧಧರ್ಮದ ಸನ್ಯಾಸ ದೀಕ್ಷೆಯನ್ನು ಕೊಡುವಾಗ ಸ್ವತಃ ಬುದ್ಧನೇ ಬರಲಿರುವ ಅಪಾಯವನ್ನು ಮನಗಂಡಿದ್ದನು. ಆದ್ದರಿಂದ ಬೌದ್ಧ ಧರ್ಮದ ಅವನತಿಗೆ ಅದನ್ನು ನಂಬಿದ ಭಿಕ್ಷುಗಳ ಚಂಚಲತೆಯೇ ಕಾರಣವಾಯಿತು. ಅದಕ್ಕೆ ಪ್ರತಿಯಾದ ಸನ್ನಿವೇಶ ಅಂದರೆ ಧರ್ಮದ ಅನುಯಾಯಿಗಳ ವಿಸ್ತಾರವಾದ ಹೃದಯ, ಉದಾತ್ತ ನಡವಳಿಕೆಗಳು, ಆಧ್ಯಾತ್ಮಿಕ ಸಾಧನೆಗಳು, ಕುಂದಿಲ್ಲದ ಚಾರಿತ್ರ್ಯಗಳು ಅವರು ಅನುಸರಿಸುವ ಧರ್ಮದ ಜನಪ್ರಿಯತೆಗೆ ಕಾರಣವಾಗುತ್ತದೆ. ಹಲವಾರು ವಿಪರ್ಯಯಗಳನ್ನು ಹಾಯ್ದರೂ, ಮತಾಂತರವನ್ನು ಪ್ರಚೋದಿಸದಿದ್ದರೂ ವೈದಿಕ ಧರ್ಮವು ಇಂದಿಗೂ ಸತ್ಯ ಸ್ವರೂಪದಲ್ಲಿಯೇ ಉಳಿಯಲು ಕಾಲಕಾಲಕ್ಕೆ ಉದಿಸಿದ ಮಹಾಮಹಿಮರಾದ, ದೈವಸ್ವರೂಪಿಗಳೂ, ನಿಸ್ವಾರ್ಥಿಗಳೂ, ಪವಿತ್ರವಾದ ಚಾರಿತ್ರ್ಯ ಮತ್ತು ಆಳ ಭಕ್ತಿಯುಳ್ಳವರೂ ಆದ ಆಚಾರ್ಯರುಗಳೇ ಕಾರಣ. ಇದಕ್ಕೆ ಹಿಂದೂ ಧರ್ಮದ ತತ್ತ್ವಗಳಲ್ಲಿ ಅವರಿಗೆ ಇರುವ ಅಸೀಮವಾದ ಶ್ರದ್ಧೆಯೇ ಕಾರಣವಾಗಿದೆ.

* * * *

# ೮. ನಮ್ಮ ಧರ್ಮವು ಅನುಸರಿಸುತ್ತಿರುವ ಕೆಲವು ಪದ್ಧತಿಗಳು

ನಮ್ಮ ಧರ್ಮವು ಕೆಲವು ಪದ್ಧತಿಗಳನ್ನು ಪ್ರಯತ್ನಪೂರ್ವಕವಾಗಿ ಉಳಿಸಿಕೊಂಡು ಬಂದಿದೆ. ಅವುಗಳಲ್ಲಿ ಒಂದು ಜಾತಿ ಪದ್ಧತಿ, ಇನ್ನೊಂದು ದೇವಾಲಯದಲ್ಲಿ ಪೂಜೆ. ನಮಗೀಗ ಈ ಪದ್ಧತಿಗಳ ಆಂತರ್ಯವನ್ನು ತಿಳಿದು, ಆ ಬಗೆಗೆ ಜನರಲ್ಲಿರುವ ತಪ್ಪು ಅಭಿಪ್ರಾಯಗಳನ್ನು ನಿವಾರಿಸುವುದು ಮುಖ್ಯವಾಗಿದೆ.

ಪಾಶ್ಚಾತ್ಯರು ನಮ್ಮ ಜಾತಿಪದ್ಧತಿಯನ್ನು ಕಟುವಾಗಿ ಟೀಕಿಸುತ್ತಾರೆ. ನಮ್ಮಲ್ಲಿಯೂ ಕೆಲವರ ಅಭಿಪ್ರಾಯ ಅದೇ ಆಗಿದೆ. ಸರ್ಕಾರದವರು ಸಹ ಈ ಪದ್ಧತಿಯ ಇತಿಶ್ರೀ ಹಾಡುವ ಪ್ರಯತ್ನದಲ್ಲಿದ್ದಾರೆ. ಅಲ್ಲಿಗೆ ಆಧುನಿಕ ಯುಗದಲ್ಲಿ ಹಿಂದಿನಂತೆ ಜಾತಿಪದ್ಧತಿಯನ್ನು ನಡೆಸಲಾಗುವುದಿಲ್ಲ. ಆದರೂ ಪರಿಸ್ಥಿತಿ ಏನೇ ಇರಲಿ, ಜಾತಿ ಪದ್ಧತಿಯ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡುವುದು ಒಳ್ಳೆಯದು. ಎಲ್ಲರೂ ಹೇಳುವಂತೆ ಮಾನವ ಸಮಾಜವನ್ನು ಅದು ಹೇಳುಮಾಡುವಂಥದ್ದೇ?

ಜಾತಿಯನ್ನು ವಿರೋಧಿಸಲು ಮುಖ್ಯ ಕಾರಣವೆಂದರೆ, ಅದರಿಂದ ಸಂಘರ್ಷಗಳು ಉಂಟಾಗುತ್ತವೆ ಎಂಬ ತಿಳುವಳಿಕೆ. ಆದರೆ ಜಾತಿಯನ್ನು ಕುರಿತ ಹೋರಾಟಗಳು ಇತ್ತೀಚಿನವು ಎಂಬುದನ್ನು ಎಲ್ಲರೂ ಮರೆಯುತ್ತಾರೆ. ಸಾವಿರಾರು ವರ್ಷಗಳಿಂದ ಈ ಪದ್ಧತಿ ಇದ್ದೇ ಇದೆ. ಇಷ್ಟು ಕಾಲ ಅದು ಉಳಿದು ಬಂದಿರುವುದಕ್ಕೆ ಕಾರಣ ಅದು ಅಷ್ಟೇನೂ ಕೆಟ್ಟದಲ್ಲ ಎಂಬುದೇ ಆಗಿದೆ. ಅದು ಹಾಗೆ ಸಮಾಜಕೆಕ ವಿನಾಶಕಾರಿಯಾಗಿದ್ದರೆ ನಮ್ಮ ಪೂರ್ವಿಕರು ಅದನ್ನು ಹಿಂದೆಂದೋ ತೊಡೆದು ಹಾಕಿರುತ್ತಿದ್ದರು. ಆದರೆ ಅವರು ಹಾಗೆ ಮಾಡಲಿಲ್ಲ. ಈಗ ಇರುವ ವಿಚಾರವೇನೆಂದರೆ ಘರ್ಷಣೆಗಳು, ಜಾತಿಗಾಗಿ ನಡೆದಿಲ್ಲ; ಅದರ ಹಿನ್ನೆಲೆಯಲ್ಲಿ ಸ್ವಹಿತಾಸಕ್ತಿವುಳ್ಳ ಜನರಿದ್ದಾರೆ. ಅವರಿಂದ ಘರ್ಷಣೆಗಳು ಪ್ರಚೋದಿತವಾಗಿವೆ. ಜಾತಿಯ ಕಲಹಕ್ಕಿಂತ ಧರ್ಮಗಳ ನಡುವಿನ ಕಲಹ ಕ್ರೂರಹಿಂಸೆಯಿಂದ ಕೂಡಿದುದು. ಇದರ ಹತ್ಯಾಕಾಂಡದ ಇತಿಹಾಸವೇ ಇದೆ. ಧರ್ಮಗಳ ನಡುವೆ ಕಲಹ ಮಾತ್ರವಲ್ಲ, ಒಂದೇ ಧರ್ಮದೊಳಗಿನ ಗುಂಪುಗಳಲ್ಲಿ ಹೊಡೆದಾಟ ನಡೆದಿದೆ. ಇದರಿಂದ ಕೆಲವು ಜನರು ವಿಚಾರ ಮಾಡುವುದೇನೆಂದರೆ ಜಾತಿಗಳು, ಧರ್ಮಗಳು ಇರುವುದರಿಂದಲೇ ಇಂತಹ ಹೋರಾಟಗಳು, ರಕ್ತಪಾತಗಳು ನಡೆದಿವೆ; ಆದ್ದರಿಂದ ಧರ್ಮ ಮತ್ತು ಜಾತಿಗಳನ್ನೆಲ್ಲ ತೊಡೆದುಹಾಕಿಬಿಡೋಣ, ಸಂಪೂರ್ಣ ಪರಿವರ್ತನೆಯಾಗಿಬಿಡಲಿ.



ಇಂತಹುದೇ ಕದನ ಇತ್ತೀಚೆಗೆ ಸರ್ಕಾರಗಳ ಪಕ್ಷಗಳು ಅವುಗಳ ಆಡಳಿತ ಸಿದ್ಧಾಂತಗಳನ್ನು ಕುರಿತು ನಡೆದಿತ್ತು. ಹಿಂದೆ ರಾಜರಲ್ಲಿ ಪರಸ್ಪರ ಯುದ್ಧಗಳು ನಡೆಯುತ್ತಿದ್ದವು. ಈಗ ಅವುಗಳ ಸ್ಥಾನವನ್ನು ಆಕ್ರಮಿಸಿಕೊಂಡ ತತ್ತ್ವಸಿದ್ಧಾಂತಗಳ ನಡುವೆ ಆದರ್ಶಗಳ ಘರ್ಷಣೆ ನಡೆದಿದೆ. ಇವು ಇನ್ನೂ ಭಯಂಕರ ಪರಿಣಾಮಗಳುಂಟುಮಾಡಿವೆ. ಈಗ ಪ್ರಶ್ನೆ ಎಂದರೆ, ಸರ್ಕಾರದ ಪಕ್ಷಗಳಲ್ಲಿ ಸದಸ್ಯರ ಹೋರಾಟವೆದ್ದಿರುವುದರಿಂದ, ನಮಗೆ ಯಾವ ಸರ್ಕಾರವೂ ಬೇಡ. ನಾವು ಹಿಂದೆ ಕಾಡುಮನುಷ್ಯರಾಗಿ ಬಾಳುತ್ತಿದ್ದೆವಲ್ಲ, ಹಾಗೆ ಬಾಳುವುದೇ? ಭಾಷೆಗಳ ನಡುವೆ ವೈರ ಬೆಳೆದು ಹೋರಾಟ ನಡೆದಾಗಲೂ ಇದೇ ಪರಿಸ್ಥಿತಿ. ಸಮಾಜದಲ್ಲಿ ಮನಸ್ಸುಗಳ ಆಲೊಚನೆಗಳ ಸದಸ್ಯರ ವಿನಿಮಯಕ್ಕೆ ಭಾಷೆ ಬೇಕು. ಪ್ರತಿಯೊಂದು ಭಾಷೆಯೂ ಅದನ್ನಾಡುವ ಮನುಷ್ಯರ ಆವಶ್ಯಕತೆಗಳಿಗೆ ತಕ್ಕಂತೆ ಬೆಳೆದಿರುತ್ತದೆ. ಹೀಗೆ ನಾವು ಸಮಾಧಾನಚಿತ್ತರಾಗಿ ಆಲೋಚಿಸಿದರೆ ಭಾಷೆಗಳ ನಡುವೆ ಸಮಸ್ಯೆಯೇ ಇರದು. ಆದರೆ ಜನರು ನಮ್ಮ ಭಾಷೆ ಅಧಿಕ, ನಮ್ಮದು ಉತ್ತಮ ಎಂದು ಕಾದಾಟ ನಡೆಸುತ್ತಾರೆ. ಈ ಕಾರಣಕ್ಕೆ ನಮಗೆ ಭಾಷೆಗಳನ್ನೇ ತೊಡೆದುಹಾಕಲು ಬರುವುದೆ?

ಒಳ್ಳೆಯ ಪದ್ಧತಿಗಳಲ್ಲಿ ಕೆಲವೊಮ್ಮೆ ದೋಷಗಳು ಸೇರಿಕೊಳ್ಳುತ್ತವೆ. ಆಗ ನಾವು ದೋಷಗಳನ್ನು ಪರಿಹರಿಸಿ ಒಳ್ಳೆಯ ವಿಚಾರಗಳನ್ನು ಉಳಿಸಿಕೊಳ್ಳಬೇಕು. ಇಂತಹ ವಿಚಾರಗಳು ಜಾತಿ ಮತ್ತು ಧರ್ಮಗಳ ವಿಚಾರದಲ್ಲಿಯೂ ಅನುಸರಿಸತಕ್ಕದ್ದು. ಈಗ ಜಾತಿಪದ್ಧತಿಯನ್ನೇ ತೆಗೆದುಕೊಳ್ಳಿ. ಸಮಾಜದ ಸಮಸ್ತ ಅವಶ್ಯಕತೆಗಳೂ, ಕರ್ತವ್ಯಗಳೂ ಸುಸೂತ್ರವಾಗಿ ನಡೆಯಲು ಇದನ್ನು ರೂಪಿಸಿದೆ. ಇದು ಕೆಲಸ ಕಾರ್ಯಗಳಿಗಾಗಿ ಮಾಡಿಕೊಂಡ ವಿಭಜನೆ. ಪ್ರತಿಯೊಬ್ಬರೂ ತಮಗೆ ನಿಗದಿಯಾದ ಕರ್ತವ್ಯವನ್ನು ಸರಿಯಾಗಿ ಮಾಡಿದರೆ, ಸಮುದಾಯದ ಒಳಿತಿನ ಸಾಧನೆಯಾಗುವುದು. ತಮ್ಮ ಕಾರ್ಯಚಟುವಟಿಕೆಗಳಿಗೆ ತಕ್ಕಂತೆ ಅವರು ಆಹಾರ ಪದ್ಧತಿಗಳನ್ನು ದೈನಂದಿನ ಜೀವನ ವಿಧಾನವನ್ನೂ ರೂಪಿಸಿಕೊಂಡಿರುತ್ತಾರೆ. ಇದೇ ಉದ್ದೇಶದಿಂದಲೇ ಆಶ್ರಮಗಳ (ಬ್ರಹ್ಮಚರ್ಯ, ಗೃಹಸ್ಥ ಮುಂತಾದ) ಪರಿಪಾಲನೆಯನ್ನೂ ಇದೇ ಉದ್ದೇಶದಿಮದ ವಿಧಿಸಿದೆ. ಆದರೆ ಒಂದು ಜಾತಿಯು ಇನ್ನೊಂದಕ್ಕಿಂತ ಮೇಲ್ಮಟ್ಟದ್ದು ಎಂದು ಭಾವಿಸಲಾಗದು. ಇದಕ್ಕೆ ಯಾವ ಆಧಾರವೂ ಇಲ್ಲ, ನ್ಯಾಯವೂ ಅಲ್ಲ. ಆದರೆ ಕೆಲವು ಮಿತಿಗಳಿವೆ. ಮದುವೆಗಳ ವಿಚಾರದಲ್ಲಿ ಮತ್ತು ಕೆಲವು ವೈಯಕ್ತಿಕವಾದ ಆಚರಣೆಗಳಲ್ಲಿ ಕೆಲವು ಕಟ್ಟುಪಾಡುಗಳಿವೆ. ಆ ಕಟ್ಟುಪಾಡುಗಳನ್ನು ಆಯಾ ಜಾತಿಯವರೇ ಹಾಕಿಕೊಂಡಿರುವುದಲ್ಲದೆ ಹೊರಗಿನಿಂದ ಹೇರಿದಂತವಲ್ಲ.

ಹಲವಾರು ಕಬ್ಬಿಣದ ಸರಳುಗಳನ್ನು ಒಂದುಗೂಡಿಸಿ, ಒಂದು ಹಗ್ಗದಿಂದ ಕಟ್ಟಿರುತ್ತದೆ ಎಂದುಕೊಳ್ಳಿ. ಅದರಿಂದ ಒಂದು ಕಡ್ಡಿಯನ್ನು ಕಳಚಿದರೂ ಉಳಿದುವೆಲ್ಲ ಸಡಿಲವಾಗಿ ಉದುರುತ್ತವೆ. ಒಂದುವೇಳೆ ಆ ಕಡ್ಡಿಗಳನ್ನು ಮೂರು ನಾಲ್ಕುಕಟ್ಟುಗಳಂತೆ

ಮಾಡಿ, ಎಲ್ಲವನ್ನೂ ಸೇರಿಸಿ, ಒಟ್ಟಾಗಿ ಒಂದು ಹಗ್ಗದಲ್ಲಿ ಕಟ್ಟಿದರೆ, ಅವುಗಳಲ್ಲಿ ಒಂದೊಂದು ಉದುರಿದರೂ ಕಟ್ಟುಗಳು ಸಡಿಲವಾಗದು. ಹಾಗೆಯೇ ಒಂದು ಸಮಾಜದ ಜನರು ಹಲವಾರು ಜಾತಿಗಳಾಗಿ ವಿಂಗಡಿಸಲ್ಪಟ್ಟಿದ್ದು, ಪರಸ್ಪರ ಪೂರಕವಾಗಿರುತ್ತ ಒಂದು ವಿಸ್ತಾರವಾದ ಧರ್ಮದಿಂದ ಅವು ಬಂಧಿಸಲ್ಪಟ್ಟಿದ್ದರೆ ಅದು ಉತ್ತಮ ಸಮಾಜ ಜೀವನದಲ್ಲಿ ಪರಿಣಮಿಸುವುದು. ಜಾತಿಗಳೂ ಮತ್ತು ಧರ್ಮವೂ ಸಮಾಜವನ್ನು ಉತ್ತಮವಾಗಿಸುವ ದೃಷ್ಟಿಯಿಂದಲೇ ರಚಿತವಾಗಿವೆ. ಏಕೆಂದರೆ, ಆಗ ಸಮಾಜದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯುಂಟಾಗುವುದು. ಇವೆಲ್ಲ ಒಂದು ಸಹಕಾರ ಮನೋಭಾವದಿಂದ ಕೂಡಿರಬೇಕಲ್ಲದೆ, ದ್ವೇಷಾಸೂಯೆಗಳನ್ನು ಸೃಷ್ಟಿಸಬಾರದು.

ಯಾರೂ ತಮ್ಮ ಜಾತಿಯ ಬಗ್ಗೆ ಹೆಮ್ಮೆಪಡುವುದಾಗಲೀ, ತಮ್ಮ ಉತ್ತಮಿಕೆಯ ಬಗೆಗೆ ಅಭಿಮಾನ ಹೊಂದುವುದಾಗಲೀ ಅನಾವಶ್ಯಕ. ನಾವು ನಮ್ಮ ಜಾತಿಯ ಕರ್ತವ್ಯಗಳ ಬಗೆಗೆ ಚಿಂತಿಸಬೇಕು, ಅಲ್ಲಿ ಹಿರಿತನವಾಗಲಿ, ಹೀಯಾಳಿಕೆಯಾಗಲಿ ಕೂಡದು. ಮನುಷ್ಯನ ಜಾತಿ ಯಾವುದಾದರೂ ಆಗಿರಲಿ, ಅವನಲ್ಲಿ ದೈವಭಕ್ತಿಯಿದ್ದರೆ, ಅವನಲ್ಲಿ ದೈವಿಕತೆಯ ಸತ್ವವುಇರುವುದು. ಜಾತೀಯತೆಯ ಭಾವನೆಗಳನ್ನು ಮರೆತು, ಧರ್ಮವನ್ನು ಶ್ರೇಷ್ಠವೆಂದು ಭಾವಿಸಿ ನಡೆದಾಗ, ಅವನಲ್ಲಿ ಭಕ್ತಿಜ್ಞಾನಗಳನ್ನು ತುಂಬಿಕೊಳ್ಳುತ್ತವೆ. ಯಾವಾಗ ಧರ್ಮ, ಭಕ್ತಿ, ಜ್ಞಾನಗಳು ಆಳವಾಗಿ ಬೇರೂರುತ್ತವೆಯೋ ಆಗ ಜಾತಿಗಳ ನಡುವಿನ ಭಿನ್ನತೆಯು ಹಿಂದಕ್ಕೆ ಸರಿಯುತ್ತವೆ. ನಾವು ಭಕ್ತರನ್ನು, ಜ್ಞಾನಿಗಳನ್ನು ಅವರ ಜಾತಿ ಯಾವುದೆಂದು ಪರಿಗಣಿಸದೆ ಮೆಚ್ಚಿ ಕೊಂಡಾಡುತ್ತೇವೆಯೇ? ನಮ್ಮಲ್ಲಿ ಮಹಾಮಹಿಮರಾದ ಜ್ಞಾನಿಗಳು ಭಕ್ತರು ತಮ್ಮನ್ನು ಅಲ್ಪರೂ, ಹೀನರೂ, ದಾಸರೂ ಎಂದು ಭಾವಿಸುತ್ತರೆ. ನಮ್ಮ ಶಾಸ್ತ್ರಗಲಲ್ಲಿ ಹೇಳುವಂತೆ ಜಾತಿಯ ಹೆಮ್ಮೆ ಹಿರಿತನಗಳು ಪಾಪವೇ ಸರಿ. ಮಾನವರು ತಮ್ಮ ಜಾತಿಗೆ ಬಂದ ಕರ್ತವ್ಯಗಳನ್ನು ಅತ್ಯಂತ ವಿನೀತರಾಗಿ, ಶ್ರದ್ಧೆಯಿಂದ ನಡೆಸತಕ್ಕುದು ಮತ್ತು ತಮ್ಮ ಕರ್ತವ್ಯಗಳ ವಿಚಾರದಲ್ಲಿ ತಾವೇ ಹೆಮ್ಮೆಯಿಂದ ಇರಬೇಕು.

ಚತುರ್ವರ್ಣಗಳಿಂದ ಕೂಡಿದ ನಮ್ಮ ಸಮಾಜದ ಜಾತೀಯತೆಯ ವ್ಯವಸ್ಥೆಯಲ್ಲಿ ಇನ್ನೊಂದು ಮುಖ್ಯವಾದ, ನಾವು ಒತ್ತುಕೊಟ್ಟು ಹೇಳಲೇಬೇಕಾದ ಅಂಶವೊಂದಿದೆ. ಜನರು ನ್ಯಾಯವಾಗಿ ನೇರವಾಗಿ ನಡೆಯಲು ಬಾಳುವಂತೆ ಪ್ರೇರೇಪಿಸಲು ಹಿಂದೆ ಅದೊಂದು ಪರಿಣಾಮಕಾರಿಯಾದ ಸಾಧನವಾಗಿದ್ದಿತು. ಯಾರಾದರೊಬ್ಬರು ತಮ್ಮ ಜಾತಿಯ ಕಟ್ಟನ್ನು ಮೀರಿ, ಅನೈತಿಕವಾದ ಕಾರ್ಯಗಳಲ್ಲಿ ಮಗ್ನನಾದರೆ, ಆತನನ್ನು ಜಾತಿಯಿಂದ ಅಟ್ಟಿ, ಸಮುದಾಯದಿಂದ ಬಹಿಷ್ಕರಿಸಲಾಗುತ್ತಿದ್ದಿತು. ಜನಜೀವನದ ಮೇಲೆ ಇದರ ಪರಿಣಾಮ ಬಲವತ್ತರವಾಗಿರುತ್ತ, ಸಮಾಜವು ನೀತಿನಿಯಮಗಳ ವಿಚಾರದಲ್ಲಿ ಎಚ್ಚರಿಕೆಯನ್ನು ತಾಳಿರುತ್ತಿದ್ದಿತು. ಈಗ ಅಂತಹ ಕಟ್ಟುಪಾಡುಗಳು



ಸಡಿಲವಾಗಿ, ಜನರನ್ನು ಧಾರ್ಮಿಕರನ್ನಾಗಿ ಉಳಿಸಲು ಕಾನೂನಿನ ಸಹಾಯ ಪಡೆಯಬೇಕಾಗಿದೆ. ಹಿಂದಿನ ಕಾಲದ ಬಹಿಷ್ಕಾಕ್ಕಿದ್ದಂತ ಭಯ ಈಗ ಕಾನೂನಿಗೆ ಇಲ್ಲವೆನ್ನಬೇಕು.

ಧರ್ಮಸಾಧನೆಯಲ್ಲಿ ದೇವಾಲಯಗಳು ಮುಖ್ಯಪಾತ್ರ ವಹಿಸಿವೆ. ಸುಪ್ರಸಿದ್ಧ ಭಕ್ತೆಯಾದ ಅವ್ವಯಾರ್, 'ದೇವಾಲಯವಿಲ್ಲದ ಊರಿನಲ್ಲಿ ವಾಸವನ್ನೇ ಮಾಡಬೇಡಿ' ಎಂದಿದ್ದಾಳೆ.ಹಿಂದೂಗಳು ವಾಸಿಸುವ ಪ್ರತಿ ಗ್ರಾಮದಲ್ಲಿಯೂ, ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ಒಂದು ಶಿವನ ಆಲಯ, ಇನ್ನೊಂದು ತುದಿಗೆ ವಿಷ್ಣುವಿನ ದೇವಾಲಯವಿದ್ದೇ ಇರುತ್ತದೆ. ನದೀತೀರವೋ ಸ್ನಾನಘಟ್ಟವೋ ಇದ್ದರೆ ದಡದಲ್ಲಿ ಗಣಪತಿಯ ದೇವಾಲಯ ಖಾತ್ರಿಯಾಗಿರುವುದು. ದೇವಾಲಯಗಳನ್ನು ನಿರ್ಮಿಸುವ ಉದ್ದೇಶವೇನು? ಕ್ರೈಸ್ತರೂ, ಮುಸಲ್ಮಾನರೂ ಸಾಮೂಹಿಕ ಪ್ರಾರ್ಥನೆಗಳನ್ನು ಮುಖ್ಯವೆಂದು ಭಾವಿಸಿದರೂ, ನಮಗೆ ಏಕಾಂತಪೂಜೆಯೇ ಮುಖ್ಯ. ದೈವಾರಾಧನೆಯು ನಮಗೆ ಅಂತರಂಗದ ವಿಚಾರ. ನಾವು ಸೂರ್ಯನ ಮುಂದೆ ಏಕಾಂಗಿಗಳಾಗಿ ನಿಂತು ಅಲ್ಲಿಂದ ಸತ್ಯವರ್ಧನೆ ಮಾಡಿಕೊಳ್ಳುತ್ತೇವೆ. ಆದರೆ ದೇವಸ್ಥಾನಗಳನ್ನು ಏಕೆ ಕಟ್ಟುತ್ತೇವೆ? ನಾವು ಅಲ್ಲಿಗೆ ಹೋಗುವುದೇಕೆ? ಎಂದು ತಿಳಿಯುವುದು ಆವಶ್ಯಕ.

ನಾವು ಅನುಭವಿಸುತ್ತಿರುವ ಸುಖಸೌಕರ್ಯಗಳ ಅಂದರೆ ಊಟ ಬಟ್ಟೆ ಮುಂತಾದ ಒಳ್ಳೆಯ ಜೀವನಾವಶ್ಯಕವಾದವುಗಳು, ನಮಗೆ ದೈವದತ್ತವಾದವು. ಸುಂದರವಾದ ನೋಟಗಳು, ರುಚಿಯಾದ ಅನ್ನಪಾನಾದಿಗಳು, ಘ್ರಾಣೇಂದ್ರಿಯಕ್ಕೆ ಸೊಗಸುವ ಸುವಾಸನೆಗಳು, ಕರ್ಣಾನಂದಕರವದ ಸಂಗೀತ ಇವೆಲ್ಲವೂ ನಮಗೆ ಪ್ರಿಯವಾದವು. ಇವುಗಳನ್ನನುಭವಿಸುವಾಗ, ಇದನ್ನು ಕೊಡಮಾಡಿದ ದೈವವನ್ನು ನಾವು ನೆನೆಯಬೇಕು. ದೇವನ ರೂಪವು ಪಂಚಭೂತಗಳ ಆಕಾರವನ್ನು ತಾಳಿ ಪಂಚೇಂದ್ರಿಯಗಳನ್ನೂ ಅವುಗಳ ಅನುಭವ ಗ್ರಹಣ ಶಕ್ತಿಯನ್ನೂ ನಿಯಂತ್ರಿಸುತ್ತದೆ. ಆ ಕಾರಣದಿಂದಲೇ ಕೃತಜ್ಞತೆಯಿಂದ ನಾವು ಅನುಭವಿಸುವ ಸಂತೋಷವನ್ನು ಅವನಿಗೆ ಅರ್ಪಿಸಿ ಅವನ ದಯೆ ಎಂದೂ, ಅವನು ಕೊಟ್ಟ ಬಹುಮಾನವೆಂದೂ, ಪ್ರಸಾದ ರೂಪವಾಗಿ ಆ ಸಂತೋಷವನ್ನು ಪಡುವುದು ಉತ್ತಮ. ದೇವರಿಗೆ ಅರ್ಪಿಸುವ ಸಂತೋಷವೇ ತಾವು ನೀಡುತ್ತಿರುವ ಪೂಜೆ. ಇದು ಗ್ರಾಮದ ಸಮಸ್ತರ ಪರವಾಗಿ ನಡೆಯುತ್ತದೆ. ಪೂಜಾವಿಧಾನದಲ್ಲಿ ಶಿಕ್ಷಣ ಹೊಂದಿದ ಒಂದು ಗುಂಪಿನ ಜನ ನಿಯಮಿತ ಕ್ರಮದಲ್ಲಿ ಪ್ರತಿ ದಿನ ಇದನ್ನು ನಡೆಸಬಲ್ಲರು. ಆ ಹೊತ್ತಿನಲ್ಲಿ ಗ್ರಾಮದ ಜನರೆಲ್ಲ ಅಲ್ಲಿ ಸೇರಿ ದೇವರಲ್ಲಿ ತಮ್ಮ ಕೃತಜ್ಞತೆಯನ್ನು ಸಲ್ಲಿಸಬೇಕು. ಪ್ರಾರ್ಥಿಸಿ, ಹಾಡಿ, ಪ್ರಸಾದ ಸ್ವೀಕಾರ ಮಾಡಬೇಕು.

ನಮ್ಮ ಧರ್ಮದಲ್ಲಿ ಇನ್ನೊಂದು ವ್ಯವಸ್ಥೆಯಿದೆ. ಅದೆಂದರೆ ತೀರ್ಥಗಳು ಮತ್ತು ಕ್ಷೇತ್ರಗಳು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಇವು ಅಪಾರವಾಗಿವೆ. ನಮ್ಮ ದೇಶವನ್ನು ಮೂರು ದಿಕ್ಕಿನಿಂದಲೂ ಸುತ್ತಿಕೊಂಡಿರುವ ಜಲರಾಶಿಯೂ ನಮ್ಮ ಪಾಲಿಗೆ ತೀರ್ಥಕ್ಷೇತ್ರವೇ. ಕೆಲವು ಪಟ್ಟಣಗಳನ್ನು ಮೋಕ್ಷಪುರಿಗಳೆಂದು ಕರೆಯುತ್ತೇವೆ. ಪವಿತ್ರ ಸರೋವರಗಳಿವೆ, ಪುಣ್ಯನದಿಗಳೂ ಇವೆ. ಅವುಗಳ ಔಚಿತ್ಯವೇನು? ಈ ಸ್ಥಳಗಳಿಗೆ ಅಂತಹ ಮಹಿಮೆಯುಂಟಾದುದು ಹೇಗೆ? ಹಿಂದಿನ ಯುಗಗಳಲ್ಲೂ ಎಷ್ಟೋ ಮುನಿಜನರು ತಪಶ್ಚರಣೆ ಮಾಡುತ್ತ, ಪರಿಶುದ್ಧ ಜೀವನ ನಡೆಸುತ್ತ ಎಷ್ಟೋ ವರ್ಷಗಳವರೆಗೆ ತಪಃಫಲವನ್ನು ಸಂಚಯಿಸಿಕೊಂಡಿರುತ್ತಿದ್ದರು. ಕಾಲಕ್ರಮದಲ್ಲಿ ಮನುಷ್ಯರಿಗೆ ತಪಸ್ಸು ಮಾಡುವ ತಾಳ್ಮೆಶಕ್ತಿಗಳು ಕಡಿಮೆಯಾಗುತ್ತ ಬಂದಿವೆ. ಆದರೆ ನಮ್ಮ ಪೂರ್ವದ ಮಹರ್ಷಿಗಳಿಗೆ ಮುಂದಿನ ತಲೆಮಾರುಗಳಲ್ಲಿ ಬರುವ ಮನುಷ್ಯರ ಬಗೆಗೆ ಎಷ್ಟು ಸಹಾನುಭೂತಿ ಎಂದರೆ, ತಾವು ವಾಸ ಮಾಡಿ, ತಪಸ್ಸು ಮಾಡಿದ ಕ್ಷೇತ್ರಗಳಿಗೇ ತಮ್ಮ ತಪಃಫಲವನ್ನು ದಾನಮಾಡಿ, ಅಲ್ಲಿನ ದರ್ಶನ ಪ್ರಾರ್ಥನೆಗಳಿಗಾಗಿ ಮುಂದೆ ಎಂದೆಂದಿಗೂ ಬರುವ ಜನರಿಗೆ, ಆ ತಪಃ ಫಲವು ಲಭಿಸಿ, ಅವರು ಉನ್ನತವಾದ ಭಾವನೆಗಳನ್ನು ಹೊಂದಲು ಅವಕಾಶ ಮಾಡಿದ್ದಾರೆ. ಈ ಕಾರಣದಿಂದಲೇ ನಮ್ಮಲ್ಲಿ ತೀರ್ಥಯಾತ್ರೆಗಳನ್ನು ಕೈಗೊಳ್ಳುವ ಪದ್ಧತಿ ಬೆಳೆಯಿತು. ಹೀಗೆ ಜನ ಪವಿತ್ರಸ್ನಾನ ಮತ್ತು ದರ್ಶನಗಳ ದೃಷ್ಟಿಯಿಂದ ತಾಯ್ನಾಡಿನ ತುಂಬ ಸುತ್ತಾಡಿ ತಮ್ಮಲ್ಲಿರುವ ಜಾತಿ, ಭಾಷೆ, ಅಭ್ಯಾಸಗಳ ಭೇದಗಳನ್ನೆಲ್ಲ ಮರೆತು ಭಿನ್ನಭಾವವಿಲ್ಲದೆ ಒಟ್ಟಾಗಿ ಭಾವಿಸಲು ಕಲಿತಿದ್ದಾರೆ. ಯಾರನ್ನಾದರೂ ನೀವು 'ಹಿಂದೂಗಳೆಂದರೆ ಯಾರು?' ಎಂದು ಕೇಳಿದರೆ, 'ವಿಷ್ಣುವಿನ ರಥವನ್ನು ಯಾರ್ಯಾರು ಎಳೆಯುತ್ತಾರೋ ಅವರೆಲ್ಲ ಹಿಂದೂಗಳೇ' ಎಂಬ ಉತ್ತರ ಬರುತ್ತದೆ. ನಾವೊಂದು ವೇಳೆ 'ಶಿವನ ರಥ ಎಳೆದವರೆಲ್ಲ ಹಿಂದೂಗಳು ಎನ್ನುವಂತಿಲ್ಲ, ಏಕೆಂದರೆ ವೈಷ್ಣವರು ಶಿವನ ರಥವನ್ನು ಎಳೆಯಲಾರರು. ಆದರೆ ವಿಷ್ಣುವಿನ ರಥವನ್ನು ನಾವೆಲ್ಲರೂ ಎಳೆಯುತ್ತೇವೆ. ಎಲ್ಲ ಜಾತಿಯ ಜನರೂ ಉಚ್ಚರು ನೀಚರು ಎನ್ನದೆ ಒಟ್ಟಾಗುತ್ತೇನೆ. ಈ ರೀತಿಯಲ್ಲಿ ನಮ್ಮ ದೇವಾಲಯಗಳ ತೀರ್ಥಗಳು, ಕ್ಷೇತ್ರಗಳು ನಮ್ಮ ಸಮಾಜವನ್ನು ಪರಿಶುದ್ಧತೆಯ ಕಡೆಗೆ ಒಂದುಗೂಡಿಸುವುವು.

ವರ್ಣಾಶ್ರಮಗಳನ್ನು ಆಧಾರವಾಗಿ ಹೊಂದಿ ನಮ್ಮ ಧರ್ಮವು ರಚಿತವಾಗಿದೆ. ಜೀವನದ ಕಾಲಘಟ್ಟಗಳಿಗೆ ಅನುಸಾರವಾಗಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ. ಸನ್ಯಾಸಿಗಳು ಸಮಾಜದ ಪರಾವಲಂಬಿ ಜೀವಿಗಳು ಎಂಬ ಒಂದು ತಪ್ಪು ಅಭಿಪ್ರಾಯ ಕೆಲವು ಕಡೆ ಕಂಡುಬರುತ್ತದೆ. ಏಕೆಂದರೆ ಲಾಭ ಕಂಡುಬರುವ ಯಾವ ಕೆಲಸವನ್ನೂ ಅವರು ಕೈಗೊಂಡಿಲ್ಲ. ಅಲ್ಲದೆ, ರಾಜ್ಯದ ಬೊಕ್ಕಸಕ್ಕೆ ಅವರು ಐಶ್ವರ್ಯವನ್ನು ತುಂಬುತ್ತಿಲ್ಲ, ಬದಲಾಗಿ ಭಿಕ್ಷುಕರಂತೆ ಸಮಾಜವನ್ನು ಅವಲಂಬಿಸಿ ಬದುಕುತ್ತಾರೆ. ಇಂತಹ ಅಭಿಪ್ರಾಯ ಏಕೆ ಉಂಟಾಗಿದೆ ಎಂದರೆ ಸಮಾಜದಲ್ಲಿ ಸನ್ಯಾಸಿಗಳ ಸ್ಥಾನವನ್ನು ಜನರು ಸರಿಯಾಗಿ ತಿಳಿದಿಲ್ಲ. ಒಂದು ವಿಚಾರವೇನೋ ನಿಜ; ನಮ್ಮ ಸಮಾಜದಲ್ಲಿ ಬಹಳ ಜನ ಸನ್ಯಾಸಿಗಳಾಗಿದ್ದಾರೆ; ಅವರಲ್ಲಿ ಎಷ್ಟೋ ಜನ ನಿಜವಾಗಿ ಪರಾವಲಂಬಿಗಳೂ ಆಗಿರುತ್ತಾರೆ. ಇದು ಸರಿಯಲ್ಲ. ಒಬ್ಬ ನಿಜವಾದ ಸನ್ಯಾಸಿ ತನ್ನ ಆಸ್ತಿಪಾಸ್ತಿಗಳನ್ನು ದಾನ ಮಾಡಿ ಸನ್ಯಾಸ ತೆಗೆದುಕೊಳ್ಳುತ್ತಾನೆ. ಆದರೆ ಎಷ್ಟೋ ಜನರು ತಮ್ಮ ಸಂಸಾರಗಳನ್ನು ಕಾಪಾಡುವ ಜವಾಬ್ದಾರಿಯನ್ನು ತೊರೆದು ಓಡಿಬಂದು ಬದುಕಲು ಸುಲಭವಾದ ಮಾರ್ಗವೆಂದು ಸನ್ಯಾಸಿಯ ವೇಷಧರಿಸಿ ಬೇಡಲು ತೊಡಗುವರು. ನಿಜವಾದ ಸನ್ಯಾಸಿಯು ಆಧ್ಯಾತ್ಮ ವಿದ್ಯೆಯನ್ನು ಸಾಧನೆ ಮಾಡುತ್ತ, ಧ್ಯಾನದಲ್ಲಿ ಕಾಲಕಳೆಯುತ್ತ, ಪರಮಾತ್ಮನನ್ನು, ಧರ್ಮವನ್ನು ಕುರಿತು ಇತರರೊಡನೆ ಚರ್ಚಿಸುತ್ತಾನೆ. ಪ್ರಾಪಂಚಿಕ ವಿಚಾರಗಳಿಂದ ಅವನು ಸಂಪೂರ್ಣ ವಿಮುಖನಾಗಿರುವನು. ತನ್ನ ಯೋಗಕ್ಷೇಮ ಸಾಧನೆಯನ್ನು ಲಕ್ಷ್ಯಮಾಡುವುದಿಲ್ಲ. ಆತನಿಗೆ ಮನೆ ಮಠಗಳೂ ಇಲ್ಲ; ಯಾವ ಪ್ರಾಪಂಚಿಕವಾದ ಸ್ವತ್ತುಗಳೂ ಇಲ್ಲ. ತನ್ನ ಅಡುಗೆಯನ್ನೂ ತಾನು ಮಾಡಿಕೊಳ್ಳಲಾರನು. ಭಿಕ್ಷಾನ್ನದಿಂದಲೇ ಜೀವಿಸುತ್ತಾನೆ, ಇತರ ಬ್ರಹ್ಮಚಾರಿಗಳ ಹಾಗೆ. ಸನ್ಯಾಸಿಯೂ ಬ್ರಹ್ಮಚಾರಿಗಳು ಭಿಕ್ಷೆ ಬೇಡಿಯೇ ತಿನ್ನಬೇಕು. (**ಯತಿಶ್ಚ ಬ್ರಹ್ಮಚಾರೀ ಚ ಪಕ್ವಾನ್ನಸ್ವಾಮಿನಾ ಉಭೌ**) ಅವರಿಬ್ಬರೊಡನೆ ಸಮಾಜಕ್ಕೆ ಕೊಳುಕೊಡುವ ಸಂಬಂಧವಿದೆ. ಸಮಾಜವು ಅವರಿಬ್ಬರಿಗೂ ಪಕ್ವಾನ್ನವನ್ನು ಕೊಡಬೇಕು. ಇದರಿಂದ ಸಮಾಜಕ್ಕೆ ಆಗುವ ನಷ್ಟಕ್ಕಿಂತ ಅಪರಿಮಿತ ಲಾಭವಾಗುತ್ತದೆ. ಭಿಕ್ಷೆ ಬೇಡುತ್ತ ಬ್ರಹ್ಮಚಾರಿಯು ವಿನಯ ಸಂಪನ್ನನಾಗುವನು; ಅದರಿಂದ ಅವನ ವಿದ್ಯಾಭ್ಯಾಸದಲ್ಲಿ ಏಕಾಗ್ರತೆಯು ಬೆಳೆಯುವುದು; ಆ ಮೂಲಕ ಸಮಾಜಕ್ಕೆ ಪ್ರಯೋಜನಕಾರಿಯಾಗುವನು. ನಿಜವಾದ ಸನ್ಯಾಸಿಯು ಆತ್ಮಸಾಧನೆಯಲ್ಲಿ ಮಗ್ನನಾಗಿ, ಆತ್ಮಶಾಂತಿಯನ್ನು ಸಾಧಿಸಿ ಸಮಾಜಕ್ಕೆ ಅವುಗಳನ್ನು ಕಲಿಸುವನು. ಜೀವನದ ಪರಮಾರ್ಥವನ್ನು ತಿಳಿದು ಬೋಧಿಸಿ ಸಮಾಜಕ್ಕೆ ಭೂಷಣ ಪ್ರಾಯನಾಗುವನು.



ಈ ವಿಚಾರದಲ್ಲಿ ಸನ್ಯಾಸಿ ಸಂಘದ ವಿಚಾರವನ್ನು ಯೋಚಿಸೋಣ. ಸನ್ಯಾಸಿಗಳು ಸಂಘದೂರರಾಗಿರಬೇಕು. ಅದು ಸನ್ಯಾಸಿಗಳಿರಬೇಕಾದ ರೀತಿಯೇ ಅಲ್ಲ. ಅದರಿಂದ ಪ್ರಾಪಂಚಿಕ ವ್ಯವಹಾರಗಳಿಗೆ ಅತನು ಒಳಪಡಬೇಕಾಗುತ್ತದೆ. ಆಡಳಿತದ ಸಮಸ್ಯೆಗಳು, ಹಣದ ವ್ಯವಹಾರ, ಹಕ್ಕುಗಳ ಪ್ರತಿಪಾದನೆ ಇತರ ಸೌಕರ್ಯಗಳು ಸೇರುತ್ತವೆ. ಸನ್ಯಾಸಿಯು ಏಕಾಂತದಲ್ಲಿರಬೇಕು. ಸಾಧ್ಯವಾದಷ್ಟು ಮನುಷ್ಯರಿಂದ ದೂರವಿರಬೇಕು.

ಸನ್ಯಾಸಾಶ್ರಮವು ಮನುಷ್ಯನನ್ನು ಸಾಂಸಾರಿಕ ಜವಾಬ್ದಾರಿಗಳಿಂದ ದೂರವಿರಿಸುವುದಷ್ಟೇ ಅಲ್ಲ, ದೇವರು ಮತ್ತು ಪಿತೃಗಳ ಋಣದಿಂದಲೂ ಪಾರು

ಮಾಡುತ್ತದೆ. ಪೂಜೆ, ಶ್ರಾದ್ಧಕರ್ಮಗಳು ಎಲ್ಲದರಿಂದಲೂ ಆತನು ಸ್ವತಂತ್ರ. ಆದ್ದರಿಂದ ನಿದ್ರಿಸುವ ಸಮಯ ಬಿಟ್ಟು ಉಳಿದೆಲ್ಲ ಕಾಲದಲ್ಲಿಯೂ, ಇಂದ್ರಿಯ ನಿಗ್ರಹದಲ್ಲಿ, ಮನಸ್ಸಿನ ಚಂಚಲತೆಯ ನಿವಾರಣೆಯಲ್ಲಿ ಪರಮದಯಾಳುವಾದ ಭಗವಂತನನ್ನು ಧ್ಯಾನಿಸುವಲ್ಲಿ ಮಗ್ನನಾಗಿ, ಕೊನೆಗೆ ಅವನಲ್ಲಿಯೇ ಸೇರಿ ಹೋಗಬಹುದು. ಯಾರಾದರೂ ಸನ್ಯಾಸಿಯು ಕೆಲಸಗಳಲ್ಲಿ ಮಗ್ನನಾದರೆ, ಅದೆಷ್ಟೇ ಉತ್ತಮವಾದ ಕಾರ್ಯವಾಗಲೀ, ಅವನನ್ನು ಪತಿತನೆಂದೇ ಹೇಳಬೇಕು. ಇದಕ್ಕಾಗಿ ಅವನು ಸಂಸಾರವನ್ನು ತೊರೆದುಬರಲಿಲ್ಲ, ದೇವ ಪಿತೃ ಋಣದಿಂದ ಮುಕ್ತನಾಗಲಿಲ್ಲ. ಇಂದಿನ ರಾಜಕೀಯ ನಾಯಕರು ಸಮಾಜಸೇವೆಯನ್ನು ಸನ್ಯಾಸಿಯ ಕರ್ತವ್ಯವೆಂದು ಭಾವಿಸಬಹುದು. ಆದರೆ ಅವನ ಜೀವನೋದ್ದೇಶ ತನ್ನನ್ನು ಶುದ್ಧೀಕರಿಸುವುದು. ಸತ್ಯದ ಅನ್ವೇಷಣೆಯಲ್ಲಿ ಸಂಪೂರ್ಣ ಮಗ್ನನಾಗುವುದು. ಸ್ವಾರ್ಥಿಗಳಾಗಿ ತಾವು ಮುಕ್ತಿ ಹೊಂದುವುದಕ್ಕಿಂತ ಜನತಾ ಜನಾರ್ದನನ ಸೇವೆ ಆಗಲಿ ಎಂಬುದಾಗಿ ಕೆಲವರು ಹೇಳಬಹುದು. ಆದರೆ ಇಂತಹ ಚಳವಳಿಗಳು ಮತ್ತು ಸಂಘಗಳಿಂದ ಸನ್ಯಾಸಿಯ ಉದ್ದೇಶ ನೀರುಪಾಲಾಗುತ್ತದೆ. ಜನತೆಯ ಮೇಲೆ ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತಾರೆ. ಇದರಿಂದ ಜಾತಿ ಗುಂಪುಗಳನ್ನು ಕಟ್ಟಿಕೊಂಡು ಪ್ರಚಾರ ಕಾರ್ಯದಲ್ಲಿ ನಿರತರಾದ ರಾಜಕೀಯದ ಮಂದಿಗೆ ಲಾಭವಾಗುತ್ತದೆ. ಆದರೆ ನಿಜವಾಗಿ, ಅತಿಶಯವಾದ ಪ್ರಭಾವ ಉಂಟಾಗುವುದು ಮತ್ತು ಜನಸೇವೆಯಾಗುವುದು ಅವರು ಆತ್ಮಶೋಧನೆ, ಸಂಪೂರ್ಣ ದೈವಾರಾಧಕರಾಗಿ ಎಲ್ಲರಿಗಿಂತಲೂ ಪ್ರಕಾಶಮಾನರಾಗುವುದೇ ಆಗಿದೆ. ತನ್ನನ್ನು ತಾನು ಶುದ್ಧ ಮಾಡಿಕೊಳ್ಳದವ ಇತರರನ್ನು ಶುದ್ಧಿಮಾಡಲಾರ. ಅಂತಹ ಪರಿಶುದ್ಧವಾದ ಚೇತನದ ಕೆಲವೇ ವ್ಯಕ್ತಿಗಳಿದ್ದರೂ ನೊಂದು ಬೆಂದ ಇತರರ ಮನಕ್ಕೆ ಶಾಂತಿಯನ್ನು ಸಿಂಪಡಿಸುತ್ತಾರೆ. ಹೀಗೆ ಸನ್ಯಾಸಿಗಳು ಲೋಕೋಪಕಾರ ಮಾಡಬೇಕು. ಇದು ಸಮಾಜಸೇವಕರು, ರಾಜಕೀಯ ನಾಯಕರು ಮಾಡಲಾರದ ರೀತಿ. ಈ ಆದರ್ಶದಿಂದ ದೂರ ಮಾಡುವ ಯಾವ ಚಳವಳಿಯೂ ಮನುಷ್ಯರಿಗೆ ಸಹಾಯಕವಲ್ಲ. ಕಾಯಾ ವಾಚಾ ಮನಸಾ ಅಹಿಂಸೆಯಿಂದ ಕೂಡಿದ ಮನಸ್ಸನ್ನು ಪಡೆಯುವುದೇ ನಮ್ಮ ಸಂಸ್ಕೃತಿಯ ಪರಮ ಧ್ಯೇಯ.

* * * *



## ೯. ಮೂರ್ತಿಪೂಜೆ (ವಿಗ್ರಹಾರಾಧನೆ)

ದೇವನು ಚೇತನಾಚೇತನ ರೂಪದಲ್ಲಿ, ಈ ಪ್ರಪಂಚದಲ್ಲಿ ಪ್ರಕಟವಾಗಿರುವುದನ್ನು ಕಾಣುತ್ತೇವೆ. ಈ ಸತ್ಯವನ್ನು ಅರಿತವರು ಯಾರೂ ಕೆಟ್ಟವರಾಗಿ ಉಳಿಯುವುದಿಲ್ಲ. ಯಾವುದೇ ವ್ಯಕ್ತಿ ಅಥವಾ ವಸ್ತುವಿನ ಬಗೆಗೆ ನಿಮಗೆ ಕ್ರೋಧ, ಜುಗುಪ್ಸೆ, ಅಥವಾ ದ್ವೇಷ ಹುಟ್ಟುವುದಿಲ್ಲ. ಅಥವಾ ಯಾವುದರ ಬಗೆಗೂ ವಿಶೇಷವಾದ ಆಸೆಯೂ ಹುಟ್ಟುವುದಿಲ್ಲ. ಧರ್ಮಗ್ರಂಥಗಳನ್ನು ಪಠಣಮಾಡಿ ನಂಬಿಕೆ ಶ್ರದ್ಧೆಗಳನ್ನು ಬೆಳೆಸಿಕೊಂಡಿರುತ್ತಾರೆನ್ನಬಹುದು. ಆದರೆ ಒಬ್ಬ ಮನುಷ್ಯನು ಕ್ರೋಧ, ಆಸೆಗಳಿಂದ ಹುಟ್ಟುವ ಸಂತಾಪವನ್ನು ಮನಸ್ಸಿನ ಚಂಚಲತೆಯನ್ನೂ ವರ್ಜಿಸಲು ಶಕ್ತನಾಗದೆ ಹೋದರೆ, ಅವನು ತನ್ನ ಸುತ್ತಮುತ್ತಲ ಎಲ್ಲದರಲ್ಲಿಯೂ ಮತ್ತು ಎಲ್ಲರಲ್ಲಿಯೂ ದೇವನನ್ನು ಕಾಣಲಾರನು.

ಅತ್ಯಂತ ಮುಖ್ಯವೂ, ಎಲ್ಲಕ್ಕೂ ಮೂಲವೂ ಆದ ಈ ಸತ್ಯವನ್ನು ಅರಿಯುವುದು ಮತ್ತು ಅನುಭವಿಸುವುದೇ ಜೀವನದ ಮುಖ್ಯವಾದ ಧ್ಯೇಯ. ಭಕ್ತನು ಪರಮಾತ್ಮನ ಇರವನ್ನು ಎಲ್ಲ ಪದಾರ್ಥಗಳಲ್ಲಿಯೂ ಕಾಣುವ ಶಕ್ತಿಯನ್ನು ಪಡೆಯುವವರೆಗೆ ಆತನು ಪ್ರಾರ್ಥನೆಯ ಮೂಲಕ ಸಾಧನೆಯನ್ನು ಮಾಡುತ್ತಲೇ ಇರಬೇಕು. ಪ್ರಾರಂಭದಲ್ಲಿ ಆತನು ದೇವನ ಒಂದು ರೂಪದಲ್ಲಿ ಚಿತ್ತವನ್ನು ಏಕಾಗ್ರವಾಗಿಸಿ ಸಾಧನೆ ಮಾಡಲು ತೊಡಗಬೇಕು. ಅದೊಂದು ದೇವನ ರೂಪವನ್ನು ಸಾರುವ ವಿಗ್ರಹವಾಗಲೀ ಪದಾರ್ಥವಾಗಲೀ, ಅಲ್ಲ. ಭಗವಂತನ ಅಸ್ತಿತ್ವ ಇದೆ ಎಂಬುದು ನೂರಕ್ಕೆ ನೂರು ಸತ್ಯ. ದೇವನ ದಯೆಯಿಂದ, ಅಂತಹ ಏಕಾಗ್ರತೆಯು ಪ್ರಾರ್ಥನೆಯ ಮೂಲಕ ಆತನನ್ನು ಮುಂದುವರಿಸಿ ಎಲ್ಲಿ ಅಣುರೇಣುತೃಣಕಾಷ್ಠಗಳಲ್ಲಿಯೂ ಭಗವಂತನು ಆವಿರ್ಭವಿಸಿರುವುದನ್ನು ಕಾಣುತ್ತ, ಪಕ್ಷಪಾತಗಳ ಧೋರಣೆಯಿಂದ ಮುಕ್ತನಾಗುತ್ತಾನೆ ಮತ್ತು ದೇವರು ಅಲ್ಲಿಲ್ಲ, ಇಲ್ಲಿದ್ದಾನೆ ಎಂಬ ನ್ಯೂನತೆಯಿಂದ ಕೂಡಿದ ತಿಳಿವಳಿಕೆಯಿಂದ ಸ್ವತಂತ್ರನಾಗುತ್ತಾನೆ. ಇದು ಮೂರ್ತಿಪೂಜೆ ಅಥವಾ ಸಗುಣೋಪಾಸನೆಗೆ ತಳಹದಿಯಾದ ತತ್ತ್ವ. ಈ ಉಪಾಸನೆಯನ್ನು ಈಚೆಗೆ ದುರದೃಷ್ಟವಶಾತ್ ವಿಗ್ರಹಾರಾಧನೆ ಎಂದುಕೊಂಡಿದ್ದಾರೆ. ಮೂರ್ತಿಪೂಜೆಯನ್ನು ವಿಗ್ರಹಾರಾಧನೆಯೆಂದು ಭಾವಿಸುವುದು ತಪ್ಪುಕಲ್ಪನೆ. ನಿಜವಾದ ಭಕ್ತನಿಗೆ ತಾನು ಪೂಜಿಸುತ್ತಿರುವುದು ಒಂದು ಕಲ್ಲಿನ ರೂಪ ಎಂದಾಗಲೀ, ಲೋಹದಲ್ಲಿ ನಿರ್ಮಿಸಿದ ವಿಗ್ರಹವೆಂದಾಗಲೀ

ಅನಿಸುವುದೇ ಇಲ್ಲ. ಅವನು ಇತರ ಎಲ್ಲವನ್ನೂ ಮರೆತು ಅಲ್ಲಿ ದೇವರನ್ನು ಮಾತ್ರ ಕುರಿತು ಚಿಂತಿಸುತ್ತಾನೆ.

ಅರ್ಜುನನು ಗುರಿಸಾಧನೆ ಮಾಡುವ ಸಮಯದಲ್ಲಿ ಆತನ ಗುರುವಾದ ದ್ರೋಣಾಚಾರ್ಯನು, ತನ್ನ ಶಿಷ್ಯನಲ್ಲಿ ತಾನು ಕಾಣಿಸುತ್ತಿರುವೆನೆ, ಮರವು ಕಾಣಿಸುತ್ತಿದೆಯೇ ಅಥವಾ ಹಕ್ಕಿಯು ಕುಳಿತಿರುವ ಶಾಖೆಯು ಕಾಣಿಸುತ್ತಿದೆಯೇ ಎಂದು ಕೇಳಿದಾಗ, ಅರ್ಜುನನು 'ಇಲ್ಲ, ನನಗೆ ಗುರಿಯೊಂದೇ ಕಾಣುತ್ತಿದೆ, ಬೇರೆ ಯಾವುದೂ ಇಲ್ಲ' ಎಂದನು. ಆದರೆ ದುರ್ಯೋಧನನೇ ಮುಂತಾದ ಇತರ ಶಿಷ್ಯರು ನಮಗೆ ನೀವು ಕಾಣುತ್ತೀರಿ, ಮರವೂ ಕಾಣುತ್ತಿದೆ ಮತ್ತು ಇತರರ ಮಾತುಗಳೂ ಕೇಳುತ್ತಿವೆ ಎಂದರು. ಆದರೆ ಅರ್ಜುನನು ಗುರಿಗೆ ಸರಿಯಾಗಿ ಬಾಣಬಿಟ್ಟನು. ಇತರರು ಹಾಗೆ ಮಾಡಲು ಶಕ್ತರಾಗಲಿಲ್ಲ. ಈ ಉದಾಹರಣೆಯು ಸಗುಣೋಪಾಸನೆ ಮಾಡಬೇಕಾದ ಭಕ್ತನ ಚಿತ್ತಸ್ಥಿತಿಗೆ ಹೊಂದುವ ಉದಾಹರಣೆಯಾಗಿದೆ. ಆತನು ಮೂರ್ತಿಯನ್ನು ಯಾವುದರಲ್ಲಿ ತಯಾರಿಸಿದೆ ಎಂಬುದನ್ನು ಗಮನಿಸದೇ ಅಲ್ಲಿ ದೈವವನ್ನು ಕಾಣುವನು ಮತ್ತು ಸುತ್ತಲೂ ಏನು ನಡೆದಿವೆ ಎಂಬುದನ್ನು ಗಮನಿಸದೆ ಪೂಜಾಮಗ್ನನಾಗಿರುವನು. ಈ ಮನಸ್ಥಿತಿಯಲ್ಲಿ ಪೂಜಾ ಮಗ್ನನಾದ ಭಕ್ತನು ದೇವರನ್ನಲ್ಲದೆ ಬೇರೇನನ್ನೂ ಕಾಣದೆ ಇರುತ್ತ ಕಾಲಕ್ರಮೇಣ ಎಲ್ಲದರಲ್ಲಿಯೂ ಪ್ರತಿ ಅಣುವಿನಲ್ಲಿಯೂ ದೇವರನ್ನೇ ನೋಡುತ್ತಾನೆ. ಇಂತಹ ಉನ್ನತವಾದ ಅಧ್ಯಾತ್ಮ ಸ್ಥಿತಿಗೆ ತಲುಪಬೇಕಾದರೆ ಮೂರ್ತಿಪೂಜೆಯು ಮೊದಲ ಮೆಟ್ಟಿಲು.

ನಮ್ಮ ಧರ್ಮವು ಹೊರದೇಶದ ಧರ್ಮಪ್ರಚಾರಕರಿಂದ ಮಾತ್ರವಲ್ಲದೆ, ನಮ್ಮ ಭರತಖಂಡದಲ್ಲಿಯೇ ಉದಿಸಿದ ಆರ್ಯಸಮಾಜ, ಬ್ರಹ್ಮಸಮಾಜದವರಿಂದಲೂ ಟೀಕೆಗೆ ಗುರಿಯಾಗಿದೆ. ನಮ್ಮ ಮೂರ್ತಿಪೂಜೆಯು ಅವರ ಟೀಕೆಗೆ ಒಳಪಟ್ಟಿದೆ. ಇಸ್ಲಾಂ ಧರ್ಮದ ಪ್ರವರ್ತಕರಿಗೂ, ಅನುಯಾಯಿಗಳೂ ಮೂರ್ತಿಪೂಜೆಗೆ ಎಷ್ಟು ವಿರುದ್ಧವೆಂದರೆ ಅವರು ಮೂರ್ತಿ ಹಾಗಿರಲಿ ಪ್ರವಾದಿಯ ಚಿತ್ರವನ್ನೂ ಪೂಜಿಸರು. ಪ್ರಾಟೆಸ್ಟೆಂಟ್ ಕ್ರಿಶ್ಚಿಯನ್ನರು ಮೂರ್ತಿಪೂಜೆಯನ್ನು ನಂಬುವುದಿಲ್ಲ. ಕ್ಯಾಥೊಲಿಕ್ ಕ್ರಿಶ್ಚಿಯನ್ನರು ಪವಿತ್ರಳಾದ ಮೇರಿಮಾತೆಯನ್ನು, ಕ್ರಿಸ್ತನನ್ನೂ ಪೂಜಿಸುವರು. ಎಲ್ಲ ಪಂಗಡದ ಕ್ರೈಸ್ತರೂ ಶಿಲುಬೆಯನ್ನು ಪೂಜ್ಯವೆಂದು ಭಾವಿಸಿದ್ದಾರೆ, ಪವಿತ್ರ ಚಿನ್ಹೆ ಎಂದು ಪೂಜಿಸುತ್ತಾರೆ.ಬೌದ್ಧ ಮತದವರು ಸಹ ಮೂರ್ತಿಪೂಜೆಯನ್ನು ತಿರಸ್ಕರಿಸಿದ್ದರು. ಆದರೀಗ ಏನಪ್ಪ ವಿಚಿತ್ರವೆಂದರೆ ಬೋಧಿಸತ್ವನ ಮೂರ್ತಿಯನ್ನು ದೊಡ್ಡ ದೊಡ್ಡ ಚೈತ್ಯಾಲಯಗಳಲ್ಲಿಟ್ಟು ಪೂಜಿಸತೊಡಗಿದ್ದಾರೆ. ಆತನ ಅವಶೇಷ ಅಂದರೆ ಹಲ್ಲು ಮುಂತಾದುವನ್ನು ಸಂಗ್ರಹಿಸಿ ಕರಂಡಗಳಲ್ಲಿಟ್ಟು ಪೂಜಿಸುವುದೂ ಕಾಣುತ್ತದೆ.



ಹಾಗಿದ್ದರೂ ಈ ಎಲ್ಲ ಧರ್ಮದವರೂ ಒಟ್ಟುಗೂಡಿ ನಮ್ಮ ಮೂರ್ತಿ ಪೂಜೆಯನ್ನು ಹೀಯಾಳಿಸುತ್ತಾರೆ. ಅದೊಂದು ಪಾಪವೋ ಎಂಬಂತೆ ಆಡುತ್ತಾರೆ. ದೇವರ ಮೂರ್ತಿಯನ್ನು ಪಟಗಳನ್ನೂ ಪೂಜಿಸುವಲ್ಲಿ ಒಂದು ಅರ್ಥವಿದೆ. ಅದನ್ನೀಗಲೇ ವಿಶದಪಡಿಸುವುದು ಸೂಕ್ತ. ನಾವು ಪೂಜಿಸುತ್ತಿರುವುದು ಲೋಹ ಅಥವಾ ಮರ ಮುಂತಾದುವುಗಳಿಂದ ರೂಪಿಸಿದ ವಿಗ್ರಹವನ್ನಲ್ಲ, ಅಲ್ಲಿ ಆವಾಹಿತನಾಗಿರುವ ದೈವವನ್ನು ಪೂಜಿಸುತ್ತೇನೆ. ಸಾಲಿಗ್ರಾಮ ಶಿಲೆಯು ವಿಷ್ಣುವನ್ನು ಪ್ರತಿನಿಧಿಸುತ್ತದೆ. ಲಿಂಗವು ಶಿವನ ಪ್ರತಿನಿಧಿ. ಸ್ಫಟಿಕಶಿಲೆಯು ಸೂರ್ಯನನ್ನು ಪ್ರತಿನಿಧಿಸುತ್ತದೆ. ಹಾಗೆಯೇ ಇತರ ವಸ್ತುಗಳು ನಮ್ಮ ದೇವರ ಪ್ರತಿನಿಧಿಗಳು. ಹಾಗಿರುವಾಗ ನಮ್ಮ ಪೂಜೆಯು ಅವು ಪ್ರತಿನಿಧಿಸುವ ದೇವರಿಗೆ ಸಲ್ಲುವುದೇ ಹೊರತು ಬೇರೆಯಲ್ಲ. ನಮ್ಮ ಧ್ಯಾನ ಪ್ರಾರ್ಥನೆಗಳೂ ಒಡಗೂಡಿ ನಾವದರಲ್ಲಿ ಮಗ್ನರಾಗಿರುತ್ತೇವೆ. ನಮ್ಮ 'ಅಹಂ' ಅನ್ನು ತೊರೆದು ನಾವು ದೇವರ ಅನುಸಂಧಾನದಲ್ಲಿ ಮಗ್ನರಾಗಿರುತ್ತೇವೆ. ನಮ್ಮಲ್ಲಿರುವ ಉತ್ತಮವಾದುದನ್ನೆಲ್ಲ ಅವನಿಗೆ ಅರ್ಪಿಸುತ್ತ ಕೊನೆಗೆ ನಮ್ಮ ಸಮಸ್ತ ಜೀವವೂ ಆತನಲ್ಲಿ ಐಕ್ಯವಾಗುವುದು.

ನಮ್ಮ ಧರ್ಮವು ಸಾಮಾನ್ಯ ಮನುಷ್ಯನ ಮಾನಸಿಕ ಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡಿರುತ್ತದೆ. ಅವರಲ್ಲಿ ಎಷ್ಟೋ ಜನರಿಗೆ ಒಂದೇ ಸಲಕ್ಕೆ ದೇವರ ನಿರಾಕಾರ ರೂಪವನ್ನು ಧ್ಯಾನಿಸುವುದು ಸಾಧ್ಯವಾಗದು. ಮನಸ್ಸನ್ನು ದೇವನ ಕಡೆಗೆ ಹೊರಳುವಂತೆ ಮಾಡಲು, ಅಲ್ಲಿ ನೆಲೆಯಾಗಿ ನಿಂತು ಧ್ಯಾನಮಗ್ನನಾಗುವಂತೆ ಮಾಡಲು, ಒಂದು ರೂಪದ ಸಹಾಯ ಅವರಿಗೆ ಅತ್ಯವಶ್ಯಕವಾಗಿರುತ್ತದೆ. ಚಂಚಲವಾದ ಮನಸ್ಸು ಸ್ಥೂಲ ಆಕಾರದಿಂದ ನಿರಾಕಾರದೆಡೆಗೆ ಹೋಗಬೇಕು. ನಾನಾ ರೂಪಗಳಲ್ಲಿ ಕಲ್ಪಿತವಾದ ದೇವನನ್ನು ಎಲ್ಲ ಆಕಾರಗಳನ್ನೂ ಮೀರಿದಂತೆ ಭಾವಿಸಬೇಕು. ದೇವರು ಎಲ್ಲೆಲ್ಲಿಯೂ ಇದ್ದಾನೆಂಬುದು ಸರಿಯೆ. ಆದರೆ ಪೂಜಾಕಾರ್ಯಗಳ ಉದ್ದೇಶದಿಂದ, ಅವನಿಗೊಂದು ಆಕಾರ ನಿರ್ದಿಷ್ಟವಾದ ಸ್ಥಳ ಇರಬೇಕು.

ಅಲ್ಲದೆ, ಪರಮಾತ್ಮನನ್ನು ಆಕಾರವುಳ್ಳವನಾಗಿ, ಅದರಲ್ಲಿಯೂ ಅಸಂಖ್ಯಾತ ರೂಪವುಳ್ಳವನಾಗಿ ಕಲ್ಪಿಸಿಕೊಳ್ಳುವುದರಲ್ಲಿ ಬಾಧಕವೇನೂ ಇಲ್ಲ. ಎಲ್ಲದರಲ್ಲಿಯೂ ದೇವನಿದ್ದಾನೆ ಎನ್ನುವಾಗ ಅಸಂಖ್ಯ ರೂಪಗಳನ್ನು ಕಾಣುವುದರಲ್ಲಿ ಅಡ್ಡಿಯೇನು? ತನ್ನ ಭಕ್ತರನ್ನುದ್ಧರಿಸಲು ಸರ್ವವ್ಯಾಪಿಯಾದ ಪರಮಾತ್ಮನು ಬಹುಬಗೆಯ ರೂಪಗಳನ್ನು ಕರುಣೆಯಿಂದ ತಾಳಿ ತನ್ನನ್ನು ಯಾರು ಪೂಜಿಸುವರೋ ಅವರನ್ನು ಉದ್ಧರಿಸುತ್ತಾನೆ. ಅವನ ಭಕ್ತರು ಆಶಿಸಿದ ರೂಪಿನಲ್ಲಿಯೇ ಮೈದೋರುತ್ತಾನೆ. ನೀರಿಗೆ ಬಣ್ಣವಾಗಲಿ, ಆಕಾರವಾಗಲಿ ಇರುವುದಿಲ್ಲ; ಆದರೆ ಯಾವುದಾದರೂ ಪಾತ್ರೆಗೆ ಹಾಕಿದರೆ ಅಲ್ಲಿ ಅದಕ್ಕೊಂದು ಆಕಾರವೂ ಪಾತ್ರೆಯ ಬಣ್ಣವೂ ಪ್ರಾಪ್ತವಾಗುವುದಲ್ಲವೇ? ಹಾಗೆಯೇ ದೇವನು ನಿರಾಕಾರನಾದರೂ, ಭಕ್ತನು

ಕಾಣಬಯಸುವ ರೂಪಿನಲ್ಲಿ ಪ್ರತ್ಯಕ್ಷನಾಗುವನು. ಭಕ್ತನ ಮನಸ್ಸು ಯಾವ ರೂಪದಲ್ಲಿ ಒಡೆಯನನ್ನು ಕಾಣಬೇಕೆಂದು ಬಯಸುವುದೋ ಹಾಗೆಯೇ ಅವತರಿಸುವನು. ಹೀಗೆ ದೇವನಿಗೂ ಜೀವನಿಗೂ ಒಂದು ಬಾಂಧವ್ಯ ಬೆಳೆದು, ಭಕ್ತಿಭಾವವು ಬೆಳೆಯುವುದು.

ಒಂದು ವಿಗ್ರಹವನ್ನು ಪೂಜಿಸುವ ಮೊದಲು ಅದರಲ್ಲಿ ದೈವವನ್ನು ಆವಾಹಿಸುವ ಕಾರ್ಯವೊಂದನ್ನು ಮಾಡುತ್ತೇವೆ. ವಿಗ್ರಹದಲ್ಲಿ ದೇವನು ನೆಲೆಸುವಂತೆ ಪೂಜಿಸಿ, ಮೂರ್ತಿಯಲ್ಲಿ ಪ್ರಾಣಪ್ರತಿಷ್ಠೆಯಾಯಿತು ಎನ್ನುತ್ತೇವೆ. ಪ್ರತಿಯೊಬ್ಬ ಮಾನವನೂ ಸುವ್ಯವಸ್ಥಿತ ವಿಶ್ವದ ಅಡಕವಾದ ಅಭಿವ್ಯಕ್ತಿ, ಮನುಷ್ಯನು ವಿಶ್ವಾತ್ಮದ ಸಂಕ್ಷೇಪಾಕೃತಿ ಅಥವಾ ಅಣುರೂಪಿ. ಅವನು ಪಂಚಭೂತಗಳಿಂದಾದವನು. ವಿಶ್ವದ ಒಳಗಿನ ತಿರುಳೂ ಅದೇನೇ. ವಿಶ್ವರೂಪಿಯಾದ ಭಗವಂತನು ಪಂಚಭೂತಗಳ ರೂಪದಲ್ಲಿ ವ್ಯಾಪಿಸಿದ್ದಾನೆ. ಅಂದರೆ ಸೇರಿಹೋಗಿದ್ದಾನೆ. ಅವುಗಳ ಘನೀಕೃತರೂಪವೇ ಮನುಷ್ಯನಾಗಿ ಅವನ ಪಂಚೇಂದ್ರಿಯಗಳ ರೂಪದಲ್ಲಿ ಪಂಚಭೂತಗಳೊಡನೆ ವ್ಯವಹರಿಸಿವೆ. ಒಂದು ಮೂರ್ತಿಯನ್ನು ಪೂಜಿಸುವ ಮೊದಲು ಅದಕ್ಕೆ ಅಭಿಷೇಕವಾಗಬೇಕು. ಅಭಿಷೇಕದ ಪ್ರಕ್ರಿಯೆಯನ್ನೇ ಪ್ರಾಣಪ್ರತಿಷ್ಠೆ ಎನ್ನುತ್ತೇವೆ. ಭಕ್ತನು ಮೊದಲು ಆತ್ಮಪೂಜೆ, ಅಂದರೆ ತನ್ನ ಶರೀರದಲ್ಲಿಯೇ ಮನೆಮಾಡಿರುವ ಅಂತರಾತ್ಮದಲ್ಲಿ ಧ್ಯಾನಿಸುವುದು ಮಾಡುತ್ತಾನೆ. ಅದಕ್ಕೆ ಉಚಿತವಾದ ಮಂತ್ರಗಳನ್ನು ಪಠಿಸುತ್ತ, ಪ್ರಾಣಸಹಿತವಾದ ತನ್ನ ಶರೀರವನ್ನು, ಇಂದ್ರಿಯಗಳನ್ನು ಶುದ್ಧೀಕರಿಸುತ್ತಾನೆ. ಭಕ್ತನ ಚೈತನ್ಯವು ಅರ್ಥಾತ್ ಪ್ರಾಣವಾಯುವು, ಪಂಚೇಂದ್ರಿಯ ಶಕ್ತಿಯೂ ಜಾಗೃತವಾಗಿ ಬ್ರಹ್ಮಾಂಡದ ಅಣುವೇ ತಾನೆಂಬ ಭಾವನೆ ಜಾಗೃತವಾಗಿ, ಅದಕ್ಕೆ ತಕ್ಕ ಹಸ್ತಮುದ್ರೆಗಳು ಮತ್ತು ಮಂತ್ರಗಳ ಸಹಿತವಾಗಿ ಪೂಜಿಸುತ್ತ ತನ್ನ ಮುಂದಿರುವ ಮೂರ್ತಿಯು ಪರಮಾತ್ಮಸ್ವರೂಪಿಯಾದ ಇಷ್ಟದೇವತೆ ಎಂಬ ಅರಿವು ವ್ಯಾಪಿಸುವುದು. ಮುಂದೆ ಹೇಳಿರುವ ಸ್ತೋತ್ರವನ್ನು ಆತನು ಪಠಿಸುತ್ತಾನೆ.

**ಸ್ವಾತ್ಮಸಂಸ್ಥಮ್ ಅಜಂ ಶುದ್ಧಂ ತ್ವಾಮದ್ಯ ಪರಮೇಶ್ವರ**
**ಅರಣ್ಯಾಮಿವ ಹವ್ಯಾಸಂ ಮೂರ್ತೌ ಆವಾಹಯಾಮ್ಯಹಂ**

"ಓ ಸರ್ವೇಶ್ವರ! ನೀನು ಸ್ವಯಂಭೂ ಮತ್ತು ಶುದ್ಧನು. ನನ್ನ ಹೃದಯದಲ್ಲೇ ನೆಲೆಸಿರುವ ನಿನ್ನನ್ನು ಈ ಮೂರ್ತಿಯಲ್ಲಿ ಆವಾಹಿಸುತ್ತೇನೆ. ಘರ್ಷಣೆಯಿಂದ ಅರಣಿಯಲು ಉದ್ಭವಿಸುವ ಬೆಂಕಿಯಂತೆ ನನ್ನ ಏಕಾಗ್ರಚಿತ್ತಕ್ಕೆ ದರ್ಶನ ಕೊಡು."

ಹೀಗೆ ಮೂರ್ತಿಯು ದೇದೀಪ್ಯಮಾನವಾಗಿ ಪೂಜೆಗೆ ತಕ್ಕುದಾಗುತ್ತದೆ. ಇದಾದ ನಂತರ ಭಕ್ತನು ಮೂರ್ತಿಯನ್ನೆಂದೂ ಭೌತವಸ್ತುವಿನಂತೆ ಕಾಣಲಾರನು. ಅದು



ಸಾಕ್ಷಾತ್ ದೇವರೇ ಆಗುತ್ತದೆ. ಆಗ ಶೋಡಷೋಪಚಾರಸಹಿತ ಕ್ರಮವಾಗಿ ಭಕ್ತಿ ಭಾವೋನ್ಮತ್ತನಾಗಿ ಪೂಜಿಸುತ್ತಾನೆ.

ವೇದಗಳನ್ನು ಜನಪ್ರಿಯಗೊಳಿಸುತ್ತ ಪರಿಷ್ಕರಣ ಮಾಡಿಕೊಳ್ಳುವಾಗ ನಮ್ಮ ದೇವತೆಗಳ ರೂಪ ಆಕಾರಗಳನ್ನು ಸಹ ಕ್ರಮವಾಗಿ ವರ್ಣಿಸಲಾಗಿದೆ. ಪ್ರತಿಯೊಂದು ಪುರಾಣವೂ ಪರಮಾತ್ಮನ, ದೇವತೆಗಳ ಕೆಲವು ಅವತಾರಗಳನ್ನು ಮನುಷ್ಯರ ಮನಸ್ಸಿನಲ್ಲಿ ನೆಲೆಸುವಂತೆ, ಗಮನವನ್ನು ಕೇಂದ್ರೀಕರಿಸುವಂತೆ ಆಕರ್ಷಕವಾಗಿ ಹೇಳಿದೆ. ಪುರಾಣಗಳಲ್ಲಿ ದೇವತೆಗಳ ಅತಿಮಾನುಷ ಶಕ್ತಿಯನ್ನು, ದೇವರನ್ನು ಕಲ್ಪಿಸಿಕೊಳ್ಳುವಲ್ಲಿ, ಆಧಾರವಾಗಿರುವ ರಹಸ್ಯ ಕಲ್ಪನೆಗಳನ್ನು ನಾವು ಚಿತ್ರಿಸಿಕೊಳ್ಳಲು ಸಹಾಯಕವಾಗಿರುತ್ತವೆ. ಈ ಕಾರಣಗಳಿಂದಲೇ ನಾವು ದೇವಿಯನ್ನು ಹದಿನಾರು ಕೈಗಳನ್ನುಳ್ಳಂತೆ, ಕುಮಾರಸ್ವಾಮಿಯನ್ನು ಆರು ತಲೆಗಳನ್ನುಳ್ಳವನಂತೆ, ಹನ್ನೆರಡು ಕೈಗಳುಳ್ಳವನಂತೆ, ವಿಷ್ಣುವನ್ನು ನಾಲ್ಕು ಕೈಗಳನ್ನುಳ್ಳವನಂತೆ, ಶಿವನನ್ನು ತ್ರಿಣೇತ್ರನಂತೆ, ಗಣಪತಿಯನ್ನು ಆನೆಮೊಗದವನೆಂದು ಭಾವಿಸಿಕೊಳ್ಳುತ್ತೇವೆ. ನಮ್ಮ ಸಂಸ್ಕೃತಿಗೆ ಹೊರತಾದವರಿಗೆ ಇದು ವಿರೂಪವಾದ ವಿಕಟಾಕೃತಿ ಎಂದೂ ತೋರಬಹುದು. ಆದರೆ ನಮ್ಮ ಸಂಸ್ಕೃತಿಯಲ್ಲಿನ ಭಕ್ತರಿಗೆ ಈ ರೂಪಗಳು ಪುರಾಣದ ಯಾವುದೋ ಸನ್ನಿವೇಶವನ್ನು ನೆನಪುಮಾಡಿ ನಂಬಿಕೆಯನ್ನು, ಶ್ರದ್ಧೆಗಳನ್ನು ಬೆಳೆಸಬಹುದು. ಪರಮಾತ್ಮನ ಅವತಾರಗಳನ್ನು ಕುರಿತು ಹೇಳಿರುವುದು ಸಹ ಗೊತ್ತುಗುರಿಯಿಲ್ಲದೆ ಮಾಡಿದ ಕಲ್ಪನೆಗಳಲ್ಲಿ ಅವು ಮಾನವರಿಗೆ ಹಿತಕಾರಿಯಾದ ದೇವತೆಗಳು. ಮಹಾಸಂತರು ಅನುಭವಿಸಿ ಹೇಳುವುದರಲ್ಲಿ, ನಮಗೆ ಅವರು ದೇವಾಧಿದೇವತೆಗಳ ಹೆಸರುಗಳನ್ನು ಜಪಿಸುವಾಗ, ಸಂಕೀರ್ತನೆ ಮಾಡಿದಾಗ ಪಡೆದ ಆನಂದವನ್ನು ಹೇಳುವರು.

ದೇವನನ್ನು ಪೂಜಿಸುವಾಗ ಮೂರು ಅಂಶಗಳನ್ನು ಗಮನದಲ್ಲಿಡಬೇಕು. ಅವು ಯಾವುವೆಂದರೆ ಯಂತ್ರ ಅಥವಾ ಚಕ್ರ, ಮಂತ್ರ, ಮತ್ತು ಪ್ರತಿಮಾ. ಯಂತ್ರವೆಂದರೆ ರೇಖಾಚಿತ್ರದ ಒಂದು ಮಾದರಿ ಎನ್ನಬಹುದು. ಅದರ ಭಾಗಗಳಲ್ಲಿ ಯೋಗರಹಸ್ಯವನ್ನು ಸೂಚಿಸುವ ರೇಖಾಚಿತ್ರಗಳಿರುತ್ತವೆ. ದೇವತೆಯು ಯಂತ್ರ ಮಧ್ಯೆ ನೆಲೆಸಿರುವಂತೆ ಭಾವನೆ. ಮಂತ್ರವು ಅಧ್ಯಾತ್ಮಿಕ ಅರ್ಥವನ್ನುಳ್ಳ ಧ್ವನಿಗಳಿಂದ ಕೂಡಿದ ಬೀಜಾಕ್ಷರಗಳು ಎನ್ನಿಸಿಕೊಂಡಿವೆ. ಅವುಗಳನ್ನು ಉಚ್ಚರಿಸಿದಾಗ ಅದಕ್ಕೆ ತಕ್ಕ ದೇವತೆಯು ಜಾಗೃತವಾಗುವನು. ಬೀಜದ ಗರ್ಭದಲ್ಲಿ ಮರವು ಅಡಗಿರುವಂತೆ ಬೀಜಾಕ್ಷರದ ಆಂತರ್ಯದಲ್ಲಿ ದೇವತೆಯೇ ಇರುವುದು. ಮಂತ್ರವನ್ನು ಪುನರುಚ್ಚಾರ ಮಾಡುವುದರಿಂದ ವಾತಾವರಣವೆಲ್ಲ ದೈವಸಾನ್ನಿಧ್ಯದಿಂದ ಕೂಡಿ, ಭಕ್ತನನ್ನೂ ದೇವಮೂರ್ತಿಯನ್ನೂ ದಿವ್ಯಸಾನಿಧ್ಯದಲ್ಲಿ ಸ್ಥಾಪಿಸಿ ಬೆಳಗುವುದು. ಪ್ರತಿಮಾಪೂಜೆಗೆಂದೇ ಮೀಸಲಾಗಿ ಅಭಿಷೇಕ ಹೊಂದಿದ ಭೌತಿಕರೂಪ. ಇವು ಮೂರೂ ಕೂಡಿ ಅಂದರೆ

ಯಂತ್ರ, ಮಂತ್ರ ಮತ್ತು ಪ್ರತಿಮೆಗಳು ಮೂರ್ತಿಪೂಜೆಗೆ ಬೇಕಾದ ಪರಿಕರಗಳು ಎಂದು ತಿಳಿಯಬೇಕು.

ಲಿಂಗ ಎಂಬ ಪದವು ಒಂದು ಸಂಕೇತ. ಯಾವುದೇ ಆಕಾರವಾಗಲಿ, ಸಂಕೇತವಾಗಲಿ ಇನ್ನೊಂದು ಊಹೆ ಅಥವಾ 'ಅನುಮಾನ'ದ ಕಡೆಗೆ ಬೆರಳನ್ನು ತೋರಿದರೆ, ಅದನ್ನು ಲಿಂಗವೆನ್ನುತ್ತೇವೆ. ನಾವು ಸಿಡಿಲಿನ ಶಬ್ದವನ್ನು ಕೇಳುತ್ತಿದ್ದ ಹಾಗೆಯೇ ಆಕಾಶದಲ್ಲಿ ಅದನ್ನುಂಟುಮಾಡಿದ ಮೋಡಗಳ ಸಂದಣಿ ಇದೆಯೆಂದು ಭಾವಿಸುತ್ತೇವೆ. ಸಿಡಿಲಿನ ಶಬ್ದವನ್ನು ಲಿಂಗವೆಂದು ಭಾವಿಸಿ, ಅದು ಮೇಘಗಳ ಸಮೂಹವನ್ನು ಸೂಚಿಸುವುದು. ಹಾಗೆಯೇ ಹೊಗೆಯು ಕಾಣದ ಬೆಂಕಿಯ ಇರವಿಗೆ ಲಿಂಗವಾಗಿರುವುದು. ಹಾಗೆಯೇ ವಿಶ್ವವು ಅಸಂಖ್ಯಾತವಾದ ಪದಾರ್ಥಗಳಿಂದ ಕೂಡಿ, ಅವನ್ನು ಸೃಷ್ಟಿಸಿದ ಭಗವಂತನನ್ನು ಸೂಚಿಸುವ ಲಿಂಗವೆಂದುಕೊಳ್ಳಿ. ಅವುಗಳನ್ನು ಕಂಡಕೂಡಲೇ ಭಗವಂತನ ಅಸ್ತಿತ್ವ ನಮ್ಮ ತಿಳಿವಳಿಕೆಗೆ ಬರುತ್ತದೆ.

ಶಿವಲಿಂಗದ ಆಕಾರಕ್ಕೂ ಭಗವಂತನ ರೂಪಕ್ಕೂ ಒಂದು ಬಗೆಯ ಸಾಮ್ಯವಿದೆ. ದೇವನನ್ನು ಅತ್ಯಂತ ಪ್ರಕಾಶಮಾನವಾದ ಜ್ಯೋತಿ ಎಂದು ವರ್ಣಿಸುತ್ತೇವೆ. ಆತನು ಜ್ಯೋತಿಗಳಿಗೇ ಜ್ಯೋತಿಯಾದವನು (**ಜ್ಯೋತಿಷಾಂಜ್ಯೋತಿಃ**). ಇತರ ಜ್ಯೋತಿಗಳು ಅವನಿಂದ ಬೆಳಕನ್ನು ಪಡೆಯುತ್ತವೆ. ಕೋಟ್ಯಂತರ ಸೂರ್ಯರ ಕಾಂತಿಯಿಂದ ಹೊಳೆಯುವ ಅವನನ್ನು ಯಾವ ಮರ್ತ್ಯದ ಕಣ್ಣುಗಳೂ ಕಾಣಲು ಶಕ್ತವಲ್ಲ. ಇತರರ ದೃಷ್ಟಿಗೆ ಗೋಚರನಾಗಲೆಂದೇ ಆತನು ತನ್ನ ಆಕಾರವನ್ನು ಸಣ್ಣ ಶಿಲಾಲಿಂಗದಂತೆ ಸಂಕೋಚಗೊಳಿಸಿ ನಮಗೆ ಚಿರಪರಿಚಿತನಾದ ಸ್ಫಟಿಕ ಲಿಂಗರೂಪಿಯಾಗಿದ್ದಾನೆ. ಎಲ್ಲರೂ ತಿಳಿದ ಬಾಣಲಿಂಗವು ನರ್ಮದಾ ನದಿಯಲ್ಲಿ ದೊರೆಯುವುದು. ಸ್ವಲ್ಪ ಉದ್ದವಾಗಿರುತ್ತದೆ ಹಾಗೂ ಅಂಡಾಕಾರವಾಗಿರುತ್ತದೆ. ಅಂದರೆ ಮೊಟ್ಟೆಯಂತೆ ರೂಪುಗೊಂಡಿದೆ. ಎಲ್ಲಿಂದ ಶುರುವಾಯಿತು, ಎಲ್ಲಿಗೆ ಕೊನೆಗೊಂಡಿತು ಎಂಬುದೇ ತಿಳಿಯಬರದಂತೆ, ವಿಶ್ವಕ್ಕೆ ತಕ್ಕ ಸಂಕೇತವಾಗಿ ಆಧುನಿಕ ವಿಜ್ಞಾನಿಗಳ ಹೋಲಿಕೆಗೂ ತಕ್ಕುದಾಗಿದೆ. ಸ್ಫಟಿಕಲಿಂಗವು ದುಂಡಾಗಿರುತ್ತದೆ ಮತ್ತು ಕೊನೆಮೊದಲಿಲ್ಲದಂತೆ ರೂಪುಗೊಂಡಿದೆ. ಅಂತಹ ಆಕಾರವು ದೇವನ ನಿರಾಕಾರ ಸ್ವರೂಪಕ್ಕೂ ಸಾಕಾರ ರೂಪಕ್ಕೂ ನಡುವೆ ಕೊಂಡಿಯಂತೆ ಇರುತ್ತ ಸಹಕಾರಿಯಾಗಿದೆ. ಹೀಗೆ ಲಿಂಗವು ಆಕಾರವಲ್ಲದ ಆಕಾರವನ್ನು ತಾಳಿ ಭಕ್ತನ, ನಿರಾಕಾರರೂಪಿ ಭಗವಂತನ ಆರಾಧನೆ, ಧ್ಯಾನಗಳಿಗೆ ಅನುವಾಗಿ, ಸತ್ಯದ ಅರಿವು ಅಥವಾ ಬ್ರಹ್ಮಜ್ಞಾನವನ್ನು ಉಂಟುಮಾಡುತ್ತದೆ.

ಮಧ್ಯಂತರದ ಆಕಾರವಲ್ಲದ ಆಕಾರದಿಂದ ಸರ್ವೇಶ್ವರನು ದಿವ್ಯರೂಪವನ್ನು ಧರಿಸಲು ಅನುಗ್ರಹಮಾಡಿ, ತನ್ನೆಲ್ಲ ಅಂಗಾಂಗಗಳು ಸ್ಫುಟವಾಗಿ ತಲೆಯಿಂದ ಕಾಲಿನವರೆಗೆ ಲಿಂಗದಿಂದ ಮಾಡಿ ಸುಪ್ರಕಟವಾದನು. ಇದನ್ನೇ ಲಿಂಗೋದ್ಭವ



ಮೂರ್ತಿ ಅಥವಾ ಅರುಣಾಚಲನೆನ್ನುತ್ತಾರೆ. ಆಗ ಬ್ರಹ್ಮನು ಹಂಸರೂಪಿಯಾಗಿ ಅವನ ಶಿರೋಭಾಗವನ್ನು ಹುಡುಕಿ ಹಾರಾಡಿ ಸೋತನು. ವಿಷ್ಣುವು ಆತನ ಪಾದವನ್ನು ಕಾಣಬೇಕೆಂದು ವರಾಹರೂಪಿಯಾಗಿ ಮುಳುಗಿ ಹುಡುಕಿ ಕಾಣದೆ ಅಪ್ರಮೇಯನಾದ ಅಪರಂಪಾರನಾದ ಲಿಂಗೋದ್ಭವ ಮೂರ್ತಿಯನ್ನು ಅರ್ಚಿಸಿದನು. ಇದು ನಮಗೆ ಸ್ತಂಭವದಲ್ಲಿ ಉದ್ಭವಿಸಿ, ನಾಸ್ತಿಕನೂ ವಿಷಯ ಭೋಗಾಸಕ್ತನೂ ಆದ ರಾಕ್ಷಸನನ್ನು ಶಿಕ್ಷಿಸಲು ಅವತರಿಸಿದ ನರಸಿಂಹನನ್ನು ನೆನಪಿಸುವುದಲ್ಲದೇ ನರಸಿಂಹನ ಈ ಆಯಾಮವನ್ನು ಉಪನಿಷತ್ತುಗಳಲ್ಲಿಯೂ, ವೈಷ್ಣವ ಸಾಹಿತ್ಯದಲ್ಲಿಯೂ ವರ್ಣಿಸಿ, ಪ್ರದೋಷಕಾಲದಲ್ಲಿ ಅರ್ಚಿತನಾದ ಶಿವನಂತೆಯೇ ನರಸಿಂಹನೂ ಪೂಜಿತನಾಗಿ, ಶಿವನ ಅಪರಿಮಿತವಾದ ಗುಣಗಳನ್ನೂ ಹೊಂದಿದ್ದಾನೆ.

ಪಂಚಮುಖ ಲಿಂಗವು ನೇಪಾಳದಲ್ಲಿ ತಿರುಚಿಯಲ್ಲಿ ಜಂಬುಕೇಶ್ವರನೂ (ತಿರುವಾಣೈಕಾವಲ್) ಐಹೊಳೆ (ಕರ್ನಾಟಕ) ಮತ್ತಿತರ ಸ್ಥಳಗಳಲ್ಲಿ ನಾಲ್ಕು ಮುಖವುಳ್ಳ ಪರಶಿವನಿದ್ದಾನೆ. ಲಿಂಗದ ನಾಲ್ಕು ಮುಖಗಳನ್ನೂ ಪೂಜಿಸುವ ದೃಷ್ಟಿಯಿಂದ ಉಂಟಾದ ಐದನೆಯ ಊರ್ಧ್ವಮುಖವು ಲಿಂಗಾಕಾರವಾಗಿ ನಿರಾಕಾರ ಸ್ವರೂಪವನ್ನು ಸೂಚಿಸುವುದು. ಇದು ಇತ್ತೀಚಿನ ಕೆಲವರ ಅಸಹ್ಯವಾದ ಕಲ್ಪನೆ–ಇಂದ್ರಿಯಪೂಜೆಯಂತೆ ಅಲ್ಲ. ಈ ರೀತಿಯ ಪೂಜೆ ಇತರ ಪಂಥಗಳನ್ನು ಅತಿಶಯವಾಗಿ ಬಿಂಬಿಸುವ ಪ್ರಯತ್ನವಷ್ಟೇ.

ಯಾವುದೇ ಶಿಲೆಯಿಂದ ಮಾಡಿದ್ದಾದರೂ ಲಿಂಗವು ಇವೆಲ್ಲ ಗುಣಗಳಿಂದ ಭಾವಿತವಾಗಿರುತ್ತದೆ; ಸ್ಫಟಿಕ ಲಿಂಗಕ್ಕೆ ಒಂದು ವಿಶೇಷವಾದ ಗುಣವಿದೆ. ಪರಿಶುದ್ಧ ಸ್ಫಟಿಕಲಿಂಗಕ್ಕೆ ಅಭಿಷೇಕ ಮಾಡುವಾಗ ಶುದ್ಧವಾದ ನೀರಿನ ಅಭಿಷೇಕದಲ್ಲಿ ಕಾಣುವುದೇ ಇಲ್ಲ. ವರ್ಣರಹಿತ, ನಿರ್ಮಲ ರೂಪದ ಲಿಂಗವು ನೀರಿನಲ್ಲಿ ತೋರುವುದೇ ಇಲ್ಲ. ಶ್ರೀಗಂಧ ಅಥವಾ ಕುಂಕುಮ ಕೇಸರಿಯ ಅಭಿಷೇಕದಲ್ಲಿ, ಬಣ್ಣದ ಹೂವನ್ನು ಧರಿಸಿದಾಗ ಆಯಾ ಬಣ್ಣಗಳನ್ನು ತಾನೂ ಹೊಂದಿ ಶೋಭಿಸುವುದು. ಹೀಗೆ ನಿರ್ಗುಣ ಬ್ರಹ್ಮನಿಗೆ ಉಚಿತ ಪ್ರತೀಕದಂತೆ ಸ್ಫಟಿಕ ಲಿಂಗವು ಕಾಣುತ್ತದೆ. ಉಪನಿಷತ್ತುಗಳಲ್ಲಿ ವರ್ಣಿತವಾದಂತೆ, ಸರ್ವವ್ಯಾಪಿಯಾದ ಪರಮಾತ್ಮನು ನಮಗಾಗಿ ಸಗುಣನಾಗಿ ಕಂಡುಬರುತ್ತಾನೆ.

* * * *

# ೧೦. ಆಚರಣೆಯಲ್ಲಿ ಧರ್ಮ

ಎರಡು ರಾಜ್ಯಗಳನ್ನು ಬೇರ್ಪಡಿಸುವಂತೆ ನಡುವೆ ಒಂದು ಬೆಟ್ಟವಿದೆ ಎಂದುಕೊಳ್ಳಿ. ಎರಡು ರಾಜ್ಯಗಳ ನಾಣ್ಯಪದ್ಧತಿಗಳೂ ಬೇರೆಬೇರೆಯಾಗಿರುತ್ತದೆ; ಒಂದೂರಿನ ನಾಣ್ಯ ಇನ್ನೊಂದರಲ್ಲಿ ಚಲಾವಣೆಗೆ ಬರುವುದಿಲ್ಲ. ಯಾರೋ ಒಬ್ಬ ಪ್ರಜೆ ಒಂದು ರಾಜ್ಯದಲ್ಲಿ ಬಹಳ ಹಣ ಸಂಪಾದಿಸಿ, ಆಸ್ತಿ ಮಾಡಿಕೊಂಡಿದ್ದಾನೆ ಎಂದುಕೊಳ್ಳಿ. ಆ ರಾಜ್ಯದಲ್ಲಿ ಏನೋ ಅನಾಯಕತ್ವವುಂಟಾಗಿ, ಈ ಸಾಹುಕಾರನು ತನ್ನ ಆಸ್ತಿಯನ್ನು ಹೊತ್ತುಕೊಂಡು ಪಕ್ಕದೂರಿಗೆ ಹೋಗಿ ಅಲ್ಲಿ ಕ್ಷೇಮವಾಗಿರಬೇಕೆಂದು ಯೋಚಿಸುತ್ತಾನೆ. ಆದರೆ ಹೆಚ್ಚು ಹಣವನ್ನು ಹೊತ್ತುಕೊಂಡು ಹೋಗಲು ಸಾಧ್ಯವಿಲ್ಲ. ಬಹಳ ಹಣವನ್ನು ಇಲ್ಲಿಯೇ ಬಿಟ್ಟು ಹೋಗಬೇಕಾಗುತ್ತದೆ. ಆಗ ಚಿಂತಿತನಾದ ಸಾಹ್ಯಕಾರನ ಬಳಿಗೆ ನೆರೆಯೂರಿನ ಒಬ್ಬ ಒಳ್ಳೆಯ ಮನುಷ್ಯ ಬರುತ್ತಾನೆಂದುಕೊಳ್ಳಿ. ಅವನು ಇನ್ನೂ ಹಗುರವಾಗಿ ಹೊರಲು ಸಾಧ್ಯವಾದ ಬಹಳ ಬೆಲೆಯುಳ್ಳ ತನ್ನೂರಿನ ರತ್ನಗಳನ್ನು ಇವನ ಹಣಕ್ಕೆ ಬದಲಾಗಿ ಕೊಡುತ್ತೇನೆಂದರೆ, ಈತನು ಕೂಡಲೆ ಆ ಅವಕಾಶವನ್ನು ಹಿಡಿದುಕೊಳ್ಳುತ್ತಾನೆ, ಬಿಡುವನೆ! ಅವನ್ನು ಸರಾಗವಾಗಿ ಹೊತ್ತು, ಬೆಟ್ಟವೇರಿ ಆಚೆಯ ಊರಿಗೆ ಸೇರಬಹುದಲ್ಲವೆ?

ಹೀಗೆ ನಮ್ಮೆಲ್ಲರಿಗೂ ನಾವು ಹುಟ್ಟಿ ಬಾಳುತ್ತಿರುವ ಈ ಪ್ರಪಂಚವನ್ನು ಇದ್ದಕ್ಕಿದ್ದಂತೆ ಬಿಟ್ಟು ಹೋಗಬೇಕಾದ ಅಪಾಯ ಸತತವಾಗಿ ಇದ್ದೇ ಇರುತ್ತದೆ. ನಾವು ಸಾವಿನಾಚೆಗೆ ಹೊರಡಬೇಕಾದ ಸನ್ನಿವೇಶವಿದೆ. ಈ ಪ್ರಯಾಣದಲ್ಲಿ ನಮ್ಮ ಊರಿನ ಯಾವ ಆಸ್ತಿಪಾಸ್ತಿಗಳೂ ನಮ್ಮೊಡನೆ ಬರಲಾರವು. ನಾವೆಷ್ಟು ಆಸೆ ಪಟ್ಟರೂ ಇಲ್ಲ. ಜೀವಮಾನವೆಲ್ಲ ದುಡಿದು ಕೂಡಿಟ್ಟ ಐಶ್ವರ್ಯವನ್ನು ಹೊತ್ತೊಯ್ಯಲಾರೆವು. ಒಂದು ಹುಲ್ಲುಕಡ್ಡಿಯನ್ನೂ ತೆಗೆದುಕೊಂಡು ಹೋಗಲಾರೆವು. ಎಲ್ಲವನ್ನೂ ಇಲ್ಲಿಯೇ ತೊರೆದು ಹೋಗಬೇಕು. ಆದರೆ ಪರಲೋಕದಲ್ಲಿ ನಡೆಯುವ ನಾಣ್ಯವಾಗಿ ಇದನ್ನು ಪರಿವರ್ತಿಸಬಹುದು. ಅಧ್ಯಾತ್ಮದ ಧರ್ಮವಾಗಿ ಐಹಿಕ ಸಂಪತ್ತನ್ನು ಪರಿವರ್ತಿಸಬಹುದು. ಇವೆಲ್ಲ ನೋಟುಗಳು ನಾಣ್ಯಗಳೂ ದೇವನ ಸಾಮ್ರಾಜ್ಯದಲ್ಲಿ ನಡೆಯುವಂತೆ, ಧರ್ಮಮಾರ್ಗದಲ್ಲಿ, ಎಲ್ಲ ಲೋಕವನ್ನೂ ವ್ಯಾಪಿಸಿಕೊಂಡ ಧರ್ಮದ ಮುದ್ರೆಯನ್ನೊತ್ತಿಕೊಂಡು ಬಳಕೆಯಾಗಬಲ್ಲವು. ವಿಶ್ವವನ್ನೆಲ್ಲ ವ್ಯಾಪಿಸಿಕೊಂಡ ಧರ್ಮದ ಬ್ಯಾಂಕಿನಲ್ಲಿ ಇವು ಚಲಾವಣೆಯಾಗುತ್ತವೆ.



ನಮ್ಮ ಜೊತೆಯಲ್ಲಿ ಬರಲಿರುವುದು ನಮ್ಮ ಐಶ್ವರ್ಯವಲ್ಲ, ನಮ್ಮ ಮನಸ್ಸಿನಲ್ಲಿ ಅಲೆದಾಡಿದ ಒಳ್ಳೆಯ ಮತ್ತು ಕೆಡುಕಿನ ಯೋಚನೆಗಳು. ಯೋಚನೆಗಳಿಗೆ ತಕ್ಕಂತೆ ನಾವು ಆಡುತ್ತೇವೆ, ಮಾಡುತ್ತೇವೆ. ಇವು ನಮ್ಮ ಜೊತೆಯಲ್ಲಿ ಹಿಂಬಾಲಿಸಿಬರುತ್ತವೆ. ಪುಣ್ಯ ಮತ್ತು ಪಾಪಗಳೆಂದು ಹೇಳುತ್ತೇವೆ. ಪುಣ್ಯವು ಸಾಚಾನಾಣ್ಯದಂತೆ ಧರ್ಮದ ಲೋಕದಲ್ಲಿ, ನ್ಯಾಯಮಾರ್ಗದಲ್ಲಿ ನಿಮಗೆ ಸಂತೋಷವನ್ನು ತರುತ್ತವೆ. ಕೆಟ್ಟ ಆಲೋಚನೆಗಳು ಖೋಟಾನಾಣ್ಯದಂತೆ, ಪಾಪದಂತೆ ನಿಮಗೆ ಶಿಕ್ಷೆಯನ್ನೂ ತೊಂದರೆಯನ್ನೂ ತರುತ್ತವೆ.

ಯಾರನ್ನಾದರೂ ನಿಮಗೆ ಯಾವುದು ಇಷ್ಟ, ಎಂದು ಕೇಳಿದರೆ, ಆತನು ಹಲವಾರು ಇಷ್ಟಗಳ ಸರವನ್ನೇ ಪೋಣಿಸುತ್ತಾನೆ. ಹೆಂಡತಿ, ಮಕ್ಕಳು ಮನೆ, ಆಸ್ತಿ... ಹೀಗೆ. ಆದರೆ ಒಂದಂತೂ ನಿಜ. ಯಾವುದು ಅವನಿಗೆ ಪ್ರೀತ್ಯಾಸ್ಪದವೋ ಅದರಿಂದ ಅವನಿಗೆ ಮುಂದೆ ದುಃಖವು ಕಟ್ಟಿಟ್ಟದ್ದು. ಅವನೆದುರಿಗೇ ಅವುಗಳೆಲ್ಲ ಕಳೆದುಹೋದರೆ ಕಳೆದುಕೊಂಡೆನಲ್ಲ ಎಂದು ದುಃಖಿಸುವನು. ಅವನೇ ಅವನ್ನು ಬಿಟ್ಟು ಸಾಯುವಂತಾದರೆ ಬಿಟ್ಟುಹೋಗಬೇಕಲ್ಲ ಎಂದಳುವನು. ಇಂತಹ ಮೋಹವು ದುಃಖದ ಬೀಜವೇ ಸರಿ. ಆದರೆ ಮನುಷ್ಯರಿಗೆ ಅವರು ಪ್ರೀತಿಸಿದ ವಸ್ತುಗಳಿಂದ ಬಲವಂತವಾಗಿ ಬೇರ್ಪಟ್ಟರೆ ದುಃಖವಾಗುವುದು. ಹೇಗೇ ಆದರೂ ಒಂದು ದಿನ ಅವೆಲ್ಲವೂ ಬೇರೆಯೇ ಆಗಬೇಕು. ಹಾಗಾದರೆ ಕಳೆದುಕೊಳ್ಳುವಾಗ ದುಃಖವಾಗದಂತೆ ಏನಾದರೂ ಮಾರ್ಗವಿದೆಯೇ? ಪರಸ್ಪರ ಒಪ್ಪಿಗೆಯಿಂದ ತಾನು ಪ್ರೀತಿಸಿದ ಪದಾರ್ಥಗಳನ್ನು ವ್ಯಕ್ತಿಗಳನ್ನು ಬಿಡಲು ಕಲಿತರೆ ಅವುಗಳನ್ನು ತೊರೆಯುವಾಗಲೂ ಶಾಂತಿ ಸಮಾಧಾನಗಳಿರುವುವು. ಇದನ್ನೇ ಮೋಹದಿಂದ ಬಿಡುಗಡೆ ಎನ್ನುತ್ತೇವೆ. ಅದೇ ವೈರಾಗ್ಯ. ಬಲವತ್ತರವಾಗಿ ಕಿತ್ತುಕೊಂಡರೆ ಕಣ್ಣೀರು ಸುರಿಯುತ್ತದೆ. ಮಾವಿನ ಕಸುಗಾಯಿಯನ್ನು ಕಿತ್ತರೆ ಸೊನೆಯು ಕಣ್ಣೀರಿನಂತೆ ಸುರಿಯುತ್ತದೆ. ಆದರೆ ಹಣ್ಣಾದ ಮಾವು ಒಂದು ಹನಿ ಸೊನೆಯಿಲ್ಲದೆ ತೊಟ್ಟು ಕಳಚಿ ಬೀಳುವುದು. ಮಾಗಿದ ಮನಸ್ಸು ಸಂಸಾರವನ್ನು ತೊರೆಯುವಾಗ ಒಂದು ಹನಿ ಕಣ್ಣೀರೂ ಇಲ್ಲದೆ ತೊರೆಯುವುದು. ಆದರೆ ಹಸಿ ಕಾಯಿಯಂತೆ ಇರುವ ಮನಸ್ಸು ಮರದಿಂದ ಬೇರ್ಪಡುವಾಗ ಧಂಡಿಯಾಗಿ ಸೊನೆ ಸುರಿಸುವುದು (ಅಳುವುದು). ಜ್ಞಾನಿಯ ಮನಸ್ಸು ಹಣ್ಣಿನಂತೆ ಸಂಸಾರವೃಕ್ಷವನ್ನು ಸರಾಗವಾಗಿ ತೊರೆಯುವುದು; ಆಸೆಗಳನ್ನು ತ್ಯಜಿಸುವುದು. ಕಸುಗಾಯಿ ತಿನ್ನಲು ರುಚಿಯಿಲ್ಲ, ಹುಳಿ ಹಣ್ಣಾದುದು ಸಿಹಿ, ಜೀವನವನ್ನು ತೊರೆದ ಜ್ಞಾನಿಯ ವಿರಕ್ತ ಮನಸ್ಸಿಗೆ ಮನಃಶಾಂತಿಯ ಸವಿಯಿದೆ. ಜ್ಞಾನಿಯಿಲ್ಲದವನ ಪಾಲಿಗೆ ಕಹಿಯೂ ಹುಳಿಯೂ ಕಟ್ಟಿಟ್ಟದ್ದೇ ಸರಿ.

ನಮ್ಮ ಆಲೋಚನೆ, ಮಾತು, ಕೆಲಸ ಕಾರ್ಯಗಳನ್ನು ಧರ್ಮದ ಶಕ್ತಿಯಾಗಿ ಪರಿವರ್ತಿಸಿಕೊಳ್ಳುವುದು, ಚಲಾವಣೆಗೆ ತಂದುಕೊಳ್ಳುವುದು ನಮ್ಮ ಕೈಯಲ್ಲೇ ಇದೆ.

ವಿಶ್ವ ವ್ಯಾಪಿಯಾದ ಧರ್ಮವೇ ಈ ಚಲಾವಣೆಯ ನಾಣ್ಯ. ಎಲ್ಲ ರಾಜ್ಯಗಳಲ್ಲಿಯೂ ರಾಜನ ಲಾಂಛನವುಳ್ಳ ನಾಣ್ಯಗಳು ಟಂಕಿತವಾಗಿದ್ದು, ಅಲ್ಲಿ ಮಾತ್ರ ಚಲಾವಣೆಯಲ್ಲಿರುತ್ತದೆ. ಆದರೆ ಧರ್ಮಕ್ಕೆ ಎಲ್ಲೆಲ್ಲಿಯೂ ಬೆಲೆ ಇರುತ್ತ ಎಲ್ಲ ಕಡೆಯಲ್ಲೂ ಅದು ನಡೆಯುತ್ತದೆ. ಭಗವಂತನ ಅಧಿಕಾರವು ಎಲ್ಲೆಲ್ಲಿಯೂ ವ್ಯಾಪಿಸಿರುವುದಲ್ಲದೆ, ನಾವು ನಮ್ಮೆಲ್ಲ ಶಕ್ತಿಗಳನ್ನು ವಿಶ್ವಮಾನ್ಯವಾದ ಧರ್ಮದ ಚಲಾವಣೆಗೆ ಬರುವ ಬಹುಮೂಲ್ಯವಾದ ಹಣಕ್ಕಾಗಿ ಮಾರ್ಪಡಿಸೋಣ. ಇವು ಶರೀರಕ್ಕೆ ಅಂಟಿದವಲ್ಲ, ಆತ್ಮಕ್ಕೆ ಒಳಪಟ್ಟವು. ಹಾಗಾಗಿ ನಮಗೆ ಸಾಗಾಣಿಕೆ ಸುಲಭವೇ ಆಗಿರುತ್ತದೆ. ಅದು ಸಾಲದಪತ್ರದಲ್ಲಿ, ಅಂಥದನ್ನು ತೆಗೆದುಕೊಂಡು ಹೋದವರು ಸೆರೆಮನೆಯ ಆಹ್ವಾನಕ್ಕೆ ಬದ್ಧರು. ನಾವು ಮಾಡಿದ ಸತ್ಕಾರ್ಯಗಳ ಫಲವಾಗಿ ನಮ್ಮ ಹಿರಿಮೆಯನ್ನು ಹಾಡುವಂತಹ ಗುಣವು ಪತ್ರಕ್ಕೆ ಇರಬೇಕು. ಶರೀರ, ಹಣ ಮತ್ತು ಮನಸ್ಸುಗಳೆಂಬ ಮೂರರಲ್ಲಿ, ಎರಡನೆಯದು ಸಾವಿನ ಲೋಕದ ದಡವನ್ನು ದಾಟಿ ಬರಲಾರದು. ನಾವು ಅವನ್ನು ಮಕ್ಕಳಿಗೆ ಪಿತ್ರಾರ್ಜಿತವೆಂದು ಬಿಟ್ಟು ಹೋಗಬೇಕು. ಆದರೆ ನಮ್ಮ ಶರೀರ ಮತ್ತು ಆತ್ಮಶಕ್ತಿಯಿಂದ ನಾವು ಮಾಡಿದ ಕರ್ಮಗಳು ಸಾವಿನಾಚೆಗೂ ಬರುತ್ತವೆ. ನಾವು ಬೇರೆಯ ಲೋಕವನ್ನು ಸೇರುವಾಗ ಬೆಟ್ಟವೇರುವ ಕಡಿದಾದ ಹಾದಿಯಲ್ಲಿ ನಮ್ಮ ಪಾಪಗಳು ನಮ್ಮನ್ನು ಕೆಳಕ್ಕೆ ಜಗ್ಗದೆ ಇರಲಿ. ಐಹಿಕ ಸಂಪತ್ತಿನ ಮೇಲಿನ ಮೋಹವೇ ಪಾಪವಾಗಿ ಜಗ್ಗಬಹುದು. ನಮ್ಮ ಆಲೋಚನೆ, ಮಾತು ಮತ್ತು ಕ್ರಿಯೆಗಳು ನಮ್ಮ ಪ್ರಯಾಣದ ದಾರಿಯನ್ನು ಸುಗಮವಾಗಿಸಲಿ. ಇದಕ್ಕೆ ಅಂತಹ ಚಾತುರ್ಯವೇನೂ ಬೇಕಾಗುವುದಿಲ್ಲ. ಖೋಟಾ ನಾಣ್ಯಗಳನ್ನು ತಯಾರಿಸಲು ಚತುರತೆ ಬೇಕಾಗುವುದು. ಸಾಚಾ ನಾಣ್ಯಗಳ ಚಲಾವಣೆಗೆ ಅವು ಬೇಡ. ನಮಗೆ ಸಹಜವಾದ ನಿರಾಡಂಬರವಾದ ಮನಸ್ಸಿನಿಂದ ನಾವು ದೇವರ ನಾಮಜಪ ಮಾಡೋಣ. ಪ್ರಾಪಂಚಿಕ ಸುಖಗಳಲ್ಲಿ ನಮಗೆ ವಿರಕ್ತಿಯನ್ನೂ ದೇವನ ಪಾದಗಳಲ್ಲಿ ನಮಗೆ ಆಸಕ್ತಿಯನ್ನೂ ಅವನೇ ಕೊಡಲಿ. ನಾವೆಲ್ಲ ಆತನನ್ನು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡುತ್ತ ವಿನಯದಿಂದ ಪ್ರಾರ್ಥಿಸೋಣ. "ದೇವನೇ ನಿನ್ನ ದಯೆ ಕರುಣೆಗಳಿಗೆ ಪಾತ್ರರಾಗಲು ನಮ್ಮಲ್ಲಿ ಏನೂ ಸದ್ಗುಣಗಳಿಲ್ಲ. ನಮ್ಮ ಕೊರತೆಗಳನ್ನು ಗಣನೆಗೆ ತಾರದೆ, ದಯೆ ತೋರಿ, ನಿನ್ನ ಪಾದಗಳಲ್ಲಿ ರಕ್ಷಣೆ ಕೊಡು."

* * * *



## ೧೧. ಆನಂದದ ನೆಲೆ

ಒಮ್ಮೆ ನರ–ನಾರಾಯಣರು ತಪಸ್ಸಿನಲ್ಲಿ ಮಗ್ನರಾಗಿದ್ದರು. ನಾರಾಯಣನು ಸ್ವತಃ ದೇವನೆ. ನರನು ಆತನ ಒಂದು ಅಂಶ. ಮಾನುಷರಲ್ಲಿ ಆತನು ಅತ್ಯಂತ ಉತ್ತಮನು. ಆದ್ದರಿಂದಲೇ ಆತನನ್ನು ನರನೆಂದು ಕರೆದರು. ನರ ಮತ್ತು ನಾರಾಯಣರಿಬ್ಬರೂ ಅರ್ಜುನ ಮತ್ತು ಕೃಷ್ಣನಾಗಿ ಜನ್ಮತಾಳಿರುವುದು ತಿಳಿದೇ ಇದೆ.

ಅವರು ತಪಸ್ಸಿನಲ್ಲಿ ಮಗ್ನರಾಗಿರುವಾಗ, ದೇವಲೋಕದ ಒಡೆಯನಾದ ಇಂದ್ರನು, ತನ್ನ ಅಧಿಕಾರ ಸೌಖ್ಯಗಳಿಗೆ ಭಂಗಬಂದೀತೆಂದು ಶಂಕಿಸಿದನು. ಪುರಾಣಗಳ ಪ್ರಕಾರ ನೂರು ಯಜ್ಞಗಳನ್ನು ಮಾಡಿ ತಪೋಮಗ್ನರಾಗಿರುವವರು ಇಂದ್ರ ಪದವಿಗೆ ಅರ್ಹರಾಗುತ್ತಾರೆ. ಆಗ ಹಾಲಿ ಇರುವ ಇಂದ್ರನು ತನ್ನ ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ಈ ಕಾರಣದಿಂದ ಯಾರೋ ತಪಸ್ಸಿನಲ್ಲಿ ಮಗ್ನರಾದರೆ ಅವರಿಗೆ ಅಡ್ಡಿಯುಂಟುಮಾಡಿ ತಪೋಭಂಗ ಮಾಡುವ ಕೆಲಸದಲ್ಲಿ ಇಂದ್ರನು ತೊಡಗುತ್ತಿದ್ದನು. ಯಾವುದರಿಂದಲೂ ವಿಚಲಿತರಾಗದೆ ತಪಸ್ಸು ಮಾಡಿದವರು ಇಂದ್ರಪದವಿಗೆ ಅರ್ಹರೆಂದು ಪುರಾಣದಲ್ಲಿ ಹೇಳಿಕೆ ಇದೆ.

ಆಧುನಿಕ ಕಾಲದಲ್ಲಿಯೂ ಈ ಪರಿಸ್ಥಿತಿ ಇರುವುದು ಕಾಣುತ್ತದೆ. ಯಾರಾದರೂ ಸಂಯಮ ಶಿಸ್ತುಗಳಿಂದ ಪರಿಶುದ್ಧವಾದ ಜೀವನ ನಡೆಸಿದರೆ, ತ್ಯಾಗಮಯಿಗಳಾಗಿದ್ದರೆ ಅವರನ್ನು ಒಳ್ಳೆಯವರೆಂದು ಭಾವಿಸಿ ಸಮಾಜವು ಪೂಜ್ಯರೆಂದು ಭಾವಿಸಿ ಅವರಿಗೆ ನಾಯಕಪಟ್ಟವನ್ನು ಕೊಡುತ್ತದೆ. ಇನ್ನೊಬ್ಬರು ಅವನಿಗಿಂತ ಹೆಚ್ಚು ಸಾಧನೆಗಳನ್ನು ಮಾಡಿ ನಾಯಕಪಟ್ಟವನ್ನು ಪಡೆಯುವವರೆಗೆ ಈತನು ಸಮಾಜದಲ್ಲಿ ಪ್ರಮುಖನಾಗಿರುತ್ತಾನೆ. ಪುರಾಣದಲ್ಲಿಯೂ ಹೀಗೆಯೇ ನಡೆದಿರುತ್ತದೆ. ಮನುಷ್ಯಲೋಕದಲ್ಲಿ ಮಾತ್ರವಲ್ಲದೆ, ದೇವಲೋಕದವರೆಗೂ ಇದೇ ನಡೆಯುತ್ತದೆ.

ನರ ನಾರಾಯಣರು ತಪಸ್ಸು ಮಾಡುತ್ತಿದ್ದಾಗ ಇಂದ್ರನು ವಿಚಲಿತನಾದನು. ತನ್ನ ಸ್ಥಾನವು ಕಳೆದುಹೋದರೆ ಗತಿಯೇನೆಂದು ಚಿಂತಿಸಿ, ಅವರ ತಪೋಭಂಗಕ್ಕೆ ಕಾರಣವಾಗುವಂಥ ಭಯವನ್ನು ಮೊದಲು ಏರ್ಪಡಿಸಿ, ಅನಂತರ ತನ್ನ ಅಪ್ಸರೆಯರಿಂದ ಅವರ ಮನವನ್ನು ಆಕರ್ಷಿಸಲು ಪ್ರಯತ್ನಮಾಡಿದನು. ತಪೋಭಂಗಕ್ಕಾಗಿ ಅವನು ಕೈಗೊಳ್ಳುತ್ತಿದ್ದ ಉಪಾಯಗಳು ಇಂತಹವೇ. ಅಪ್ಸರೆಯರು

ಮೊದಲು ನರನ ಬಳಿಗೆ ಹೋದರು. ಆತನು ದೇವಾಂಶಸಂಭೂತನಾದರೂ ಮನುಷ್ಯನೇ ತಾನೆ. ಆದರೂ ಪುರುಷರಲ್ಲಿ ಉತ್ತಮ. ಸ್ವಲ್ಪವೂ ಕುಂದು ಇಲ್ಲದವನೇನೂ ಅಲ್ಲ. ಆದ್ದರಿಂದ ಅಪ್ಸರೆಯರಿಂದ ತೊಂದರೆಯಾದೀತೆಂದು ಭಾವಿಸಿ ದೊಡ್ಡದಾಗಿ ಗರ್ಜಿಸಿದನು. ಅವರೆಲ್ಲ ಕೂಡಲೆ ಚದುರಿ ದಿಕ್ಕಪಾಲಾಗಿ ಓಡಿಬಿಟ್ಟರು. ಅವನು ತಮ್ಮನ್ನು ತಪೋಬಲದಿಂದ ಸುಟ್ಟುಬಿಟ್ಟಾನೆಂದು ಹೆದರಿ, ಅಲ್ಲಿಂದ ದೂರವಾದರು. ನರನು ಕಂಪಿತನಾದನು.

ಅಪ್ಸರೆಯರು ಅಲ್ಲಿಂದ ನಾರಾಯಣನನ್ನು ಸಮೀಪಿಸಿದರು. ಅವನು ಶಾಂತನಾಗಿದ್ದನು. ಆತನು ಇವರನ್ನು ಕಂಡೊಡನೆ ತನ್ನ ತೊಡೆಯನ್ನು ಕೈಯಿಂದ ಗುದ್ದಿದನು. ಸಂಸ್ಕೃತದಲ್ಲಿ ತೊಡೆಗೆ 'ಊರು' ಎಂಬ ಶಬ್ದವಿದೆ. ಅವನು ಹಾಗೆ ಮಾಡಿದಾಗ ಅತ್ಯಂತ ಸುಂದರಿಯಾದ ಅಪ್ಸರೆಯೊಬ್ಬಳು ಅಲ್ಲಿ ಹುಟ್ಟಿಕೊಂಡಳು. ಅವಳು ಊರ್ವಶಿ. ಇಂದ್ರನ ಅಪ್ಸರೆಯರು ಅವಳ ಸೌಂದರ್ಯವನ್ನು ಕಂಡು ನಾಚಿದರು. ನಿನ್ನ ಮುಂದೆ ನಾವೆಷ್ಟರವರು ಎನ್ನುತ್ತ ಲಜ್ಜಿತರಾಗಿ ಹೊರಟುಹೋದರು.

ಈ ಸಂದರ್ಭದ ಮೂಲಕ ಜಗದೊಡೆಯನು ನಮಗೆ ತಿಳಿಸುವುದೇನೆಂದರೆ, ಹೊರಜಗತ್ತಿನಲ್ಲಿರುವ ಎಲ್ಲ ಆಸೆಗಳೂ, ಸುಂದರಿಯರು, ಸಂತೋಷಗಳೂ ನಿಜವಾಗಿ ಇರುವುದು ನಮ್ಮೊಳಗೇ, ನಮ್ಮ ಆತ್ಮದಲ್ಲಿಯೇ. ಇವೆಲ್ಲ ಆಸೆಗಳು, ಸೌಂದರ್ಯ, ಸಂತೋಷಗಳು ಸಣ್ಣ ಸಣ್ಣ ಕಣಗಳ ರೂಪದಲ್ಲಿರುವ ಪರಮಾತ್ಮನ ಅಪರಿಮಿತ ಪ್ರೇಮ ಮತ್ತು ಸೌಂದರ್ಯಗಳು ಮತ್ತು ಆನಂದ. ಅವು ನಮ್ಮೊಳಗೇ ಇವೆ ಮತ್ತು ಅದೇ ನಮ್ಮ ಅಂತರಂಗದ ಸತ್ವ. ನಮ್ಮ ಆತ್ಮಕ್ಕೆ ಹೊರಪಟ್ಟದ್ದು ಯಾವುದೂ ಇಲ್ಲ. ಯಾವುದು ಬಹಿರಂಗದಲ್ಲಿರುವಂತೆ ಕಾಣುವುದೋ ಅದು ಅಂತಿಮವಾಗಿ ನಮ್ಮೊಳಗೇ ಇರುತ್ತದೆ. ಯಾವಾಗ ಪರಮಾತ್ಮನು ಈ ವಿಚಾರಗಳನ್ನು, ತನ್ನ ಮಂಡಿಯಿಂದ ಊರ್ವಶಿಯನ್ನು ಸೃಷ್ಟಿಸುವುದರ ಮೂಲಕ ತಿಳಿಯಪಡಿಸಿದನೋ ಆಗ ಅಪ್ಸರೆಯರು ಅವನಿಗೆ ಶರಣಾಗತರಾಗಿ ತಮ್ಮನ್ನು ಕ್ಷಮಿಸುವಂತೆ, ಕಾಪಾಡುವಂತೆ ಬೇಡಿಕೊಂಡರು ಮತ್ತು ಕೇಳಿಕೊಂಡರು, "ನಾವಿನ್ನು ಇಂದ್ರಸಭೆಗೆ ಹೋಗಲಾರೆವು. ನಾವು ನಮ್ಮ ಜೀವಿತಕ್ಕಾಗಿ ಅಲ್ಲಿ ಸೇವೆ ಮಾಡುತ್ತಿರಬೇಕು ನಮಗೆ ಸತ್ಯವನ್ನು ದರ್ಶನ ಮಾಡಿಸಿ."

ಇದು ಸ್ಥೂಲವಾಗಿ ಕಥೆಯ ಬಾಹ್ಯರೇಖೆಗಳು. ಆದರೆ ಇದರ ಹುರುಳು ನಿಮಗೆ ಗೀತೆಯ ಎರಡನೆಯ ಅಧ್ಯಾಯದ ೭೦ನೆಯ ಶ್ಲೋಕದಲ್ಲಿ ಕಂಡು ಬರುತ್ತದೆ:

**"ಆಪೂರ್ಯಮಾಣಮಚಲಪ್ರತಿಷ್ಠಂ ಸಮುದ್ರಮಾಪಃ ಪ್ರತಿಶಂತಿ ಯದ್ವತ್**
**ತದ್ವತ್ ಕಾಮಾ ಯಂ ಪ್ರವಿಶಂತಿ ಸರ್ವೇ ಸ ಶಾಂತಿಮಾಪ್ನೋತಿ ನ ಕಾಮಕಾಮೀ"**



ಆಸೆಯು ಹೊರಗೆ ಇರುವುದು; ಅಂದರೆ ಬಹಿರಂಗದಲ್ಲಿ; ಅದಕ್ಕೆ ಸುಳಿವು ಇದೆ. ನಮ್ಮ ಅಂತರಂಗದ ಹೊರಗಿರುವ ಪದಾರ್ಥವನ್ನು ಅದು ಕುರಿತಾಗಿರುತ್ತದೆ. ಅದಕ್ಕೊಂದು ಹೊರಗಿನ ಕ್ಷೇತ್ರಪಥವೂ ಇದೆ. ತನ್ನಿಂದ ಹೊರಗಿರುವ ಪದಾರ್ಥದಲ್ಲೇ ತನಗೆ ಸಂತೋಷ ಸಿಗುತ್ತದೆ, ಇಷ್ಟಾರ್ಥ ಪೂರ್ತಿಯಾಗುತ್ತದೆ ಎಂದುಕೊಂಡಿರುವ ಮನುಷ್ಯನು ಮಾನಸಿಕ ಶಾಂತಿಯನ್ನು ಪಡೆಯಲಾರ. ಒಂದೇ ಸಮನೆ ಸಂಚರಿಸುತ್ತ ತನಗೆ ಬೇಕಾಗುವ ಪದಾರ್ಥಗಳನ್ನು ಅರಸುತ್ತಲೇ ಇರುವ ಮನುಷ್ಯನು ಶಾಂತನಾಗಿರುವುದು ಸಾಧ್ಯವೇ? ಅದು ಬರುತ್ತ ಹೋಗುತ್ತ ಇರುವುದಾದರೆ ಅದರಿಂದ ಪ್ರಯೋಜನವೇನು? ಸಂತೋಷಪ್ರದವಾದ ಪದಾರ್ಥವು ಬಂದು ಇರುವುದಾದರೆ ಬರಲಿ, ಇಲ್ಲೇ ನೆಲೆಸಲಿ. ನಮ್ಮೊಳಗೇ ಸೇರಿಹೋಗಲಿ. ಹಲವಾರು ದೊಡ್ಡ ದೊಡ್ಡ ನದಿಗಳು ಸಾಗರವನ್ನು ಬಂದು ಸೇರುತ್ತವೆ. ಸಾಗರದೊಳಗೆ ಅವು ಅಂತರ್ಗತವಾಗುತ್ತವೆ. ಸರಿಯಾಗಿ ಹೇಳುವುದಾದರೆ ಅವು ಸಾಗರದಿಂದಲೇ ಹೊರಹೋದ ನೀರಹನಿಗಳು. ಈಗ ಅವು ಪುನಃ ಹಿಂದಿರುಗಿ ಬಂದು ಒಳ ಸೇರಿವೆ; ಅವು ಸಾಗರದೊಡನೆ ಒಂದಾಗುತ್ತವೆ.

ಹಾಗೆಯೇ ಹೊರಗಿನ ಆನಂದದಾಯಕ ಹನಿಗಳು ನಮ್ಮೊಳಗೆ ಇರುವ ಆನಂದದ ತುಣುಕುಗಳು. ಅವು ಜಾಗೃತವಾದಾಗ ನಮ್ಮ ಅಂತರಾತ್ಮದಲ್ಲಿ ಅಡಗಿದ ಆನಂದವೇ ಕರಗಿ ನಮ್ಮ ಅರಿವಿಗೆ ಗೋಚರವಾಗುತ್ತಿವೆಯಲ್ಲದೆ, ಅವು ಬೇರೆಲ್ಲೋ ಇರುವ ಆನಂದವೆಂದು ತಿಳಿಯಬಾರದು. ಅಲ್ಲದೆ ಈ ಹೊರಗಿನ ಆನಂದದ ಹನಿಗಳು ಹೊರಗೆ ಇದ್ದಂತಹವಲ್ಲ. ಅವನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಅವು ನಮ್ಮೊಳಗೇ ಇರುವುವೆಂದು ತಿಳಿದಾಗ ನಮಗೆ ಶಾಂತಿ ಲಭಿಸುತ್ತದೆ **(ಸ ಶಾಂತಿಮಾಪ್ನೋತಿ)**.

ಅಧಿಕಾರ, ಹಣ ಮತ್ತು ಸಮಾಜದಲ್ಲಿ ಪ್ರಾಮುಖ್ಯ ದೊರೆತ ಮಾತ್ರಕ್ಕೆ ಮನುಷ್ಯರು ಸಂತುಷ್ಟರಾಗುತ್ತಾರೆ ಎಂದು ಭಾವಿಸುವುದು ಸರಿಯಲ್ಲ. ಇವೆಲ್ಲ ಮನುಷ್ಯರ ಮನಸ್ಸಿನಿಂದ ಹೊರಗೆ ಇರುವಂತಹವು. ಅವು ದೊರಕದೆ ಹೋದಾಗ ಮಾನವ ದುಃಖಿಯಾಗುತ್ತಾನೆ. ನಮ್ಮೊಳಗೆ ಇರುವ ಅಪರಿಮಿತವಾದ ಆನಂದಕ್ಕೆ ಹೋಲಿಸಿದರೆ ಹೊರಪ್ರಪಂಚದ ಈ ಸಂತೋಷಗಳು ಸಣ್ಣ ತುಣುಕುಗಳಷ್ಟೇ. ಪರಮಾತ್ಮನ ಸ್ವರೂಪದಲ್ಲಿ ಸೇರಿ ಅವು ಪಡುವ ಅನಂತ ಅಪರಿಮಿತ ಆನಂದಕ್ಕೆ ಹೋಲಿಸಿದರೆ, ರಾಜರ ಸುಖ–ಸಂತೋಷಗಳೂ, ಇಂದ್ರನ ಭೋಗವು ಕೇವಲ ಸಣ್ಣವಾದ ಹನಿಗಳು.

ಹೊರಪ್ರಪಂಚದಲ್ಲಿ ನಮಗೆ ದೊರಕುವ ಸಂತೋಷಗಳು ನಮ್ಮೊಳಗಿರುವ ಆನಂದದಲ್ಲಿ ಸೇರಿಹೋಗಬೇಕು. ಇಲ್ಲದಿದ್ದರೆ ಅವನಿಗೆ ನಾನು ಸಂತೋಷದಲ್ಲಿದ್ದೇನೆ ಎಂದು ತಿಳಿಯಲು ಆಗುವುದಿಲ್ಲ.

ಅಲ್ಲದೆ, ಪರಮಾತ್ಮ ಸ್ವರೂಪದಲ್ಲಿ ಸೇರಿಹೋಗಿ ಅಲ್ಲಿ ಆನಂದದಿಂದ ಇರುವ ಜೀವಕ್ಕೂ, ತನಗೂ ಪರಮಾತ್ಮಕ್ಕೂ ಭೇದವನ್ನು ಅರಿಯದ ಸ್ಥಿತಿಗೆ ತಲುಪಿದಾಗ, ತನಗೆ ಹೊರ ಪ್ರಪಂಚದ ಯಾವುದರಿಂದಲೋ ಆನಂದ ದೊರೆಯಿತು ಎನ್ನಿಸುವುದಿಲ್ಲ; ಅದಿಲ್ಲದಿದ್ದರೆ ತಾನು ದುಃಖಿಯಾದೇನು ಎಂದೂ ಅನಿಸುವುದಿಲ್ಲ.

ಸಾಮಾನ್ಯವಾಗಿ ಎಲ್ಲರೂ ಹೇಳುತ್ತಿರುತ್ತಾರೆ; ನನಗೆ ಇವು ದೊರೆತರೆ ಸಂತೋಷವಾಗುತ್ತದೆ; ಅವು ದೊರಕಿದರೆ ಖುಷಿಯಾಗುತ್ತದೆ ಎಂಬುದಾಗಿ. ಹಾಗೆಂದುಕೊಂಡು ಆ ಪದಾರ್ಥಗಳ ಬೆನ್ನುಹತ್ತಿ ಓಡುತ್ತಾರೆ. ಅದಕ್ಕೆ ಅಡ್ಡಿಯುಂಟಾದರೆ ಸಿಟ್ಟಾಗುತ್ತಾರೆ; ಆ ಸಂದರ್ಭದಲ್ಲಿ ಇತರರನ್ನು ದ್ವೇಷಿಸುತ್ತಾರೆ; ಕೊಲ್ಲಲೂ ಹೇಸದೆ, ಕೊನೆಗೆ ತಾವೂ ಆತ್ಮಹತ್ಯೆಗೆ ಗುರಿಯಾಗುವರು. ಇಂತಹ ಹತಾಶೆಯಲ್ಲಿರುವವರಿಗೆ ಮನಶ್ಶಾಂತಿ ಬಹುದೂರದ ಮಾತು.

ಎಲ್ಲ ನದಿಗಳೂ ಸಾಗರವನ್ನು ಸೇರುತ್ತವೆ. ಸಾಗರದೊಳಗೆ ಮಿಳಿತವಾಗಿ ಬಿಡುತ್ತವೆ. ಯಾವುದಾದರೊಂದು ನದಿ ಸಾಗರವನ್ನು ಸೇರದಿದ್ದರೆ, ಸಾಗರಕ್ಕೆ ದುಃಖವಾಗುವುದೆ? ಸಾಗರ ಹೇಗಿರುತ್ತದೆ? ಯಾವಾಗಲೂ ಅದು ತುಂಬಿರುತ್ತದೆ. ಅದು ವಿಚಲಿತವಾಗದೆ ಇರುತ್ತದೆ. ಅದಕ್ಕೆ ಯಾವ ಕೊರತೆಯೂ ಭಾಸವಾಗದು. ಅದು ನದಿಗಳ ಬರವಿಗಾಗಿ ಕೊರಗುತ್ತ ಕೂಡುವುದಿಲ್ಲ. ಈ ನದಿ ಬರಲಿಲ್ಲ, ಆ ನದಿ ಹರಿಯಲಿಲ್ಲ ಎನ್ನುವುದಿಲ್ಲ. ಸಾಗರವು ಹೇಗೆ ಹರಿದುಬರುವ ನದಿಗಳನ್ನು ಸ್ವೀಕರಿಸುವುದೋ ಹಾಗೆ ಮನುಷ್ಯರು ಬಹಿರ್‌ಪ್ರಪಂಚದ ಸುಖಸಂತೋಷಗಳನ್ನು ಸ್ವೀಕರಿಸಿ ತಮ್ಮೊಳಗಿನ ಸಾಗರೋಪಮವಾದ ಆನಂದದಲ್ಲಿ ಅದನ್ನು ಬೆರೆಸಿ ಅನುಭವಿಸಬೇಕು.

ಸರ್ವವ್ಯಾಪಿಯಾದ ಪರಿಪೂರ್ಣವಾದ ಆನಂದವೇ ಎಲ್ಲರ ಅಂತರಂಗದಲ್ಲೂ ಮನೆ ಮಾಡಿರುವುದು. ಹೊರಗಿನಿಂದ ಬಂದ ಆನಂದವು ವ್ಯಕ್ತಿಯ ಒಳಗೆ ನೆಲಸಿರುವ ಆನಂದದಲ್ಲಿ ಮಿಲನವಾಗಬೇಕು. ಪ್ರತಿಯೊಬ್ಬನ ನಿಜಸ್ವರೂಪವು ಪರಿಪೂರ್ಣತೆಯೇ. ಅದು ಸಮಗ್ರವಾದುದು. ಪ್ರತಿಯೊಬ್ಬರೂ ತಮ್ಮೊಳಗಿನ ಪರಮ ಪರಿಪೂರ್ಣ ಆನಂದವನ್ನು ಕಾಣುವುದನ್ನು ಅನುಭವಿಸುವುದನ್ನು ಕಲಿಯಬೇಕು. ಯಾವಾಗ ಈ ಪ್ರಜ್ಞೆ ಮೂಡುವುದೋ, ಆಗ ಬಹಿರ್ಲೋಕದ ಸಣ್ಣ ಪುಟ್ಟ ಸಂತೋಷಗಳು ನಮಗೆ ಬೇಕಾಗುವುದಿಲ್ಲ. ಏಕೆಂದರೆ ನಮ್ಮೊಳಗಿನ ಆನಂದದ ತುಣುಕುಗಳೇ ಅವು. ಆಗ ನೀವು, ಯಾವ ಸಂತೋಷವೇ ಬರಲಿ, ಅದು ನನ್ನೊಳಗಿನ ಆನಂದದಲ್ಲಿ ಕರಗಲಿ, ಅವು ಬಾರದಿದ್ದರೂ ತೊಂದರೆಯಿಲ್ಲ. ಏಕೆಂದರೆ ಅವು ನನ್ನೊಳಗಿನ ಆನಂದದ ಸಣ್ಣಪುಟ್ಟ ಪ್ರತಿಬಿಂಬಗಳು. ಇಂತಹ ಮನುಷ್ಯರು ಸರ್ವದಾ ಸಾಗರದಂತೆ ವಿಚಲಿತರಾಗದೆ ಶಾಂತಿಯನ್ನು ಅನುಭವಿಸುವರು.

**'ಸ ಶಾಂತಿ ಮಾಪ್ನೋತಿ'**

* * * *